ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 28 ಗುರುವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 42 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ
ಇಂದು ರಾಜೀನಾಮೆ ಸಾಧ್ಯತೆ

■ ಇದಕ್ಕೂ ಮುನ್ನ ಇಂದು ಬೆಳಿಗ್ಗೆ ಸಚಿವರಿಗೆ ಉಪಹಾರ ಕೂಟ ■ ಮಧ್ಯಾಹ್ನದ ವೇಳೆಗೆ ರಾಜ್ಯಪಾಲರ ಭೇಟಿ ಮಾಡುವ ಸಂಭವ ■ ಇಂದು ಮಧ್ಯಾಹ್ನ ರಾಜೀನಾಮೆ ಸಲ್ಲಿಸ್ತಾರೆ ಅನ್ಸುತ್ತೆ; ಅಶೋಕ್ ಪಟ್ಟಣ್ ■ ಸಿದ್ದರಾಮಯ್ಯನವರು ಹೈಕಮಾಂಡ್‌ಗೆ ಕೊಟ್ಟ ಮಾತಂತೆ ಇಂದು ರಾಜೀನಾಮೆ ನೀಡ್ತಾರೆ; ಆರ್.ವಿ.ದೇಶಪಾಂಡೆ



ಬೆಂಗಳೂರು, ಮೇ 27(ಕೆಎಂಶಿ)– ಕಾಂಗ್ರೆಸ್ ವರಿಷ್ಠರ ಸಲಹೆ ಮೇರೆಗೆ ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನಕ್ಕೆ ನಾಳೆ (ಗುರುವಾರ) ರಾಜೀನಾಮೆ ಸಲ್ಲಿಸುವ ಸಾಧ್ಯತೆ ಇದೆ.

ಗುರುವಾರ ಮಧ್ಯಾಹ್ನ ರಾಜ್ಯಪಾಲರ ಭೇಟಿಯಾಗಿ ರಾಜೀನಾಮೆ ಸಲ್ಲಿಸಲಿದ್ದಾರೆ ಎಂದು ಅನ್ಸುತ್ತೆ ಎಂದು ಸಿದ್ದರಾಮಯ್ಯ ಆಪ್ತ ಶಾಸಕ ಅಶೋಕ್ ಪಟ್ಟಣ್ ತಿಳಿಸಿದ್ದಾರೆ. ಇದಕ್ಕೆ ಪುಷ್ಟಿ ನೀಡುವಂತೆ ಹಿರಿಯ ಶಾಸಕ ಆರ್.ವಿ.ದೇಶಪಾಂಡೆ, ಹೈಕಮಾಂಡ್ ಹೇಳಿದಂತೆ ಸಿದ್ದರಾಮಯ್ಯ ನಾಳೆ ರಾಜೀನಾಮೆ ಸಲ್ಲಿಸಲಿದ್ದಾರೆ ಎಂದು ತಿಳಿಸಿದ್ದಾರೆ.

ನಾಳೆ ಬೆಳಿಗ್ಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಮಂತ್ರಿಮಂಡಲದ ತಮ್ಮ ಎಲ್ಲಾ ಸಹೋದ್ಯೋಗಿಗಳಿಗೆ ಸರ್ಕಾರಿ ನಿವಾಸ ಕಾವೇರಿಯಲ್ಲಿ ಉಪಹಾರ ಕೂಟ ಏರ್ಪಡಿಸಿದ್ದಾರೆ. ಪಕ್ಷದ ಅಧಿನಾಯಕ ರಾಹುಲ್ ಗಾಂಧಿ ಸಲಹೆ ಹಾಗೂ ಯುವ ನಾಯಕತ್ವಕ್ಕೆ ಅವಕಾಶ ಮಾಡಿಕೊಡುವ ಉದ್ದೇಶದಿಂದ ಮುಖ್ಯಮಂತ್ರಿ ಸ್ಥಾನ ತ್ಯಜಿಸುತ್ತಿರುವುದಾಗಿ ಉಪಹಾರ ಕೂಟದಲ್ಲೇ ತಮ್ಮ ಸಹೋದ್ಯೋಗಿಗಳಿಗೆ ಮಾಹಿತಿ ನೀಡಲಿದ್ದಾರೆನ್ನಲಾಗಿದೆ.

ಕಳೆದ ಮಂಗಳವಾರ ಎಐಸಿಸಿ ನಾಯಕರ ಸಮ್ಮುಖದಲ್ಲಿ ನಡೆದ ಮಾತುಕತೆಗಳ ಮಾಹಿತಿ ನೀಡಿ, ಕಳೆದ ಮೂರು ವರ್ಷಗಳಲ್ಲಿ ಅಭಿವೃದ್ಧಿ ಕಾರ್ಯಗಳಲ್ಲಿ ನನ್ನ ಹೆಗಲಿಗೆ ನಿಂತ ಎಲ್ಲರಿಗೂ ಕೃತಜ್ಞತೆ ಸಲ್ಲಿಸಲಿದ್ದಾರೆ ಎಂದು ಹೇಳಲಾಗುತ್ತಿದೆ.

ಲೋಕಭವನಕ್ಕೆ ತೆರಳುವ ಮುನ್ನ ಅಥವಾ ನಂತರ ಪತ್ರಿಕಾಗೋಷ್ಠಿ ನಡೆಸಿ, ತಮ್ಮ ರಾಜೀನಾಮೆ ಕುರಿತು ಅಧಿಕೃತ ಮಾಹಿತಿ ನೀಡಲಿದ್ದಾರಂತೆ. ■6ನೇ ಪುಟಕ್ಕೆ

ಏಕಕಾಲದಲ್ಲಿ ಸಿಎಂ, ಡಿಸಿಎಂ ಆಡಿ–ಹೊಗಳಿದ ಸುರ್ಜೇವಾಲ ಮರ್ಮವೇನು?

ಬೆಂಗಳೂರು: ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಗೊಂದಲಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಹೈಕಮಾಂಡ್ ಕೊನೆಗೂ ತೆರೆ ಎಳೆದಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುರುವಾರ ರಾಜೀನಾಮೆ ನೀಡುವುದು ಬಹುತೇಕ ಖಚಿತವಾಗಿದೆ.



ಮುಖ್ಯಮಂತ್ರಿ ಬದಲಾವಣೆ ಹಾಗೂ ನೂತನ ಮುಖ್ಯಮಂತ್ರಿ ಆಯ್ಕೆ ಸಂಬಂಧ ಇಂದು ಸಂಜೆ ಬೆಂಗಳೂರಿಗೆ ಆಗಮಿಸಿದ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರು, ■6ನೇ ಪುಟಕ್ಕೆ

ಸಿದ್ದರಾಮಯ್ಯ ನಿವಾಸದ ಮುಂದೆ ಜನಜಾತ್ರೆ

ಬೆಂಗಳೂರು, ಮೇ 27– ಕಾಂಗ್ರೆಸ್ ಹೈಕಮಾಂಡ್ ಸೂಚನೆಯಂತೆ ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುತ್ತಾರೆ ಎಂಬ ವದಂತಿಗಳು ಹಬ್ಬಿದ್ದರಿಂದ ಮುಖ್ಯಮಂತ್ರಿ ಅಧಿಕೃತ ನಿವಾಸ ಕಾವೇರಿ ಬಳಿ ಜನಜಾತ್ರೆ ನೆರೆದಿತ್ತು.

ಸಚಿವರಾದ ಜಮೀರ್ ಅಹಮದ್ ಖಾನ್, ಎಚ್.ಕೆ.ಪಾಟೀಲ್, ಈಶ್ವರ ಖಂಡ್ರೆ, ಎಂ.ಬಿ.ಪಾಟೀಲ, ಸಂತೋಷ್ ಲಾಡ್, ಶಿವರಾಜ ತಂಗಡಗಿ ಸೇರಿ ದಂತೆ ಹಲವು ಸಚಿವರು, ಶಾಸಕರು ಭೇಟಿ ನೀಡಿ, ಸಿದ್ದರಾಮಯ್ಯ ಅವರ ಜತೆ ಮಾತನಾಡಿದರು. ರಾಜೀನಾಮೆ ನೀಡಲು ಆತುರದ ನಿರ್ಧಾರ ಮಾಡಬಾರದು, ಸಮಯ ತೆಗೆದುಕೊಂಡು ನಿಧಾನವಾಗಿ ತೀರ್ಮಾನ ಮಾಡಬೇಕು. ರಾಜೀನಾಮೆ ನೀಡದಂತೆ ■6ನೇ ಪುಟಕ್ಕೆ

ಅಚ್ಚರಿ ಮೂಡಿಸಿದ ಸಿದ್ದರಾಮಯ್ಯ ಟ್ವೀಟ್!

ಬೆಂಗಳೂರು: ಜನರ ಆಶೀರ್ವಾದ ದೊಂದಿಗೆ ಕಾಂಗ್ರೆಸ್ ಅಧಿಕಾರಕ್ಕೆ ಬಂದು ಮೂರು ವರ್ಷ ಪೂರೈಸಿರುವ ಈ ಸಾರ್ಥಕ ಸಂದರ್ಭದಲ್ಲಿ ನಮ್ಮ ಸರ್ಕಾರದ ಎಲ್ಲಾ ಸಾಧನೆಗಳ ಶ್ರೇಯವನ್ನು ಪ್ರತಿಯೊಬ್ಬ ಕನ್ನಡಿಗನಿಗೂ ಅರ್ಪಿಸುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಚುನಾವಣಾ ಪೂರ್ವದಲ್ಲಿ ರಾಜ್ಯದ ಜನತೆಗೆ ನೀಡಿದ ಪ್ರತಿ ಮಾತಿಗೂ ಬದ್ಧರಾಗಿ ನಡೆಯುವ ಮೂಲಕ ನುಡಿದಂತೆ ನಡೆದ ಹೆಮ್ಮೆ ನಮಗಿದೆ. 5 ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿ, ಪ್ರತಿ ಮನೆಗೂ ತಲುಪಿಸುವಲ್ಲಿ ಯಶಸ್ವಿಯಾಗಿದ್ದೇವೆ ಎಂದಿದ್ದಾರೆ. ಈ ಸಂಬಂಧ ಟ್ವೀಟ್ ಮಾಡಿರುವ ಅವರು, ಯಾರೂ ಹಸಿವಿನಿಂದ ಮಲಗಬಾರದು ಎಂಬ ಸಂಕಲ್ಪದೊಂದಿಗೆ ಜಾರಿಗೊಂಡ ಅನ್ನ ಭಾಗ್ಯ ಯೋಜನೆಯು ಕೋಟ್ಯಾಂತರ ಕುಟುಂಬಗಳಿಗೆ ಪೌಷ್ಟಿಕ ಆಹಾರದ ಭದ್ರತೆ ನೀಡುವ ಮೂಲಕ ಆರೋಗ್ಯವಂತ ಸಮಾಜಕ್ಕೆ ಆಧಾರವಾಗಿದೆ.

ಅನ್ನಭಾಗ್ಯ ಯೋಜನೆಯಡಿ ಉಚಿತ ಆಹಾರ ಧಾನ್ಯ ವಿತರಿಸಲು ಈವರೆಗೆ 18,897 ಕೋಟಿ ರೂ. ವ್ಯಯಿಸಲಾಗಿದ್ದು, 4.26 ಕೋಟಿ ಪಡಿತರದಾರರು ಮೂರು ಹೊತ್ತು ನೆಮ್ಮದಿಯಿಂದ ಊಟ ಮಾಡುತ್ತಿದ್ದಾರೆ ಎಂದು ಟ್ವೀಟ್‌ನಲ್ಲಿ ಸಮರ್ಥಿಸಿಕೊಂಡಿದ್ದಾರೆ.

ಸಿಎಂ ಗಾದಿಗೇರಲು ಡಿಸಿಎಂ ಡಿ.ಕೆ.ಶಿವಕುಮಾರ್ ತಯಾರಿ...!?

- **ದೆಹಲಿಯಲ್ಲೇ ಉಳಿದು ಮಂತ್ರಿ ಮಂಡಲ ರಚನೆ ಕಸರತ್ತು**
- **ಹೊಸ ನಾಯಕನ ಆಯ್ಕೆ ಪ್ರಕ್ರಿಯೆ ಪೂರ್ಣಗೊಳಿಸುವ ಹೊಣೆ ವೇಣುಗೋಪಾಲ್, ಸುರ್ಜೇವಾಲಾ ಹೆಗಲಿಗೆ**
- **ಎಂ.ಬಿ.ಪಾಟೀಲ್, ಪ್ರಿಯಾಂಕ ಖರ್ಗೆ, ಯು.ಟಿ. ಖಾದರ್, ಡಾ. ಯತೀಂದ್ರ ಡಿಸಿಎಂ?**
- **ಸಂಪುಟಕ್ಕೆ ರಾಹುಲ್ ಗಾಂಧಿ ಬಯಕೆಯಂತೆ ಯುವ ಶಾಸಕರಿಗೆ ಸ್ಥಾನ**


ಬೆಂಗಳೂರು, ಮೇ 27(ಕೆಎಂಶಿ)– ಸಿದ್ದರಾಮಯ್ಯ ಅವರಿಂದ ತೆರವಾಗಲಿರುವ ಮುಖ್ಯಮಂತ್ರಿಗಾದಿಗೇರಲು ಸಿದ್ಧತೆ ಮಾಡಿಕೊಂಡಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ದೆಹಲಿಯಲ್ಲೇ ಬಿಡಾರ ಹೂಡಿ ಮಂತ್ರಿಮಂಡಲ ರಚನೆ ಕಸರತ್ತು ನಡೆಸಿದ್ದಾರೆ.



ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ರಾಜೀನಾಮೆ ಅಂಗೀಕಾರವಾದರೆ, ನಂತರ ಎಐಸಿಸಿ, ಕಾಂಗ್ರೆಸ್ ಶಾಸಕಾಂಗ ಪಕ್ಷದ ಹೊಸ ನಾಯಕನ ಆಯ್ಕೆಗೆ ಸಭೆ ಕರೆಯಬಹುದು. ಸಿದ್ದರಾಮಯ್ಯ ರಾಜೀನಾಮೆ ನಂತರ ಹೊಸ ನಾಯಕನ ಆಯ್ಕೆ ಪ್ರಕ್ರಿಯೆ ಪೂರ್ಣಗೊಳಿಸುವ ಉದ್ದೇಶದಿಂದ ಎಐಸಿಸಿ ರಾಜಕೀಯ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಹಾಗೂ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರಿಗೆ ಹೊಣೆಗಾರಿಕೆ ವಹಿಸಿದೆ ಯಂತೆ. ಉಭಯ ನಾಯಕರು ನಗರಕ್ಕೆ ಧಾವಿಸಿದ ನಂತರ ಶಾಸಕಾಂಗ ಪಕ್ಷ ಸಭೆಯ ಸಮಯ ನಿಗದಿ ಆಗಲಿದೆ. ಪಕ್ಷದ ಆದೇಶದಂತೆ ಒಂದು ಸಾಲಿನಲ್ಲಿ ನಾಯಕನ ಆಯ್ಕೆ ಪ್ರಕ್ರಿಯೆ ಪೂರ್ಣಗೊಳಿಸಬಹುದು. ■6ನೇ ಪುಟಕ್ಕೆ

ಹೌದು, ಮುಖ್ಯಮಂತ್ರಿ ರಾಜೀನಾಮೆ ಕೊಡ್ತಾರಂತೆ!

ಬೆಂಗಳೂರು: ಸಿಎಂ ಸಿದ್ದರಾಮಯ್ಯ ರಾಜೀನಾಮೆ ಕುರಿತ ಊಹಾಪೋಹಗಳಿಗೆ ಕಾಂಗ್ರೆಸ್ ಹಿರಿಯ ಕಾಂಗ್ರೆಸ್ ಶಾಸಕ ಹಾಗೂ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್.ವಿ. ದೇಶಪಾಂಡೆ ತೆರೆ ಎಳೆದಿದ್ದು, ಸಿಎಂ ಸಿದ್ದರಾಮಯ್ಯ ರಾಜೀನಾಮೆ ಕೊಡ್ತಾರೆ ಎಂದು ಹೇಳಿದ್ದಾರೆ. ಸದ್ಯ ರಾಜ್ಯ ರಾಜಕಾರಣದಲ್ಲಿ ನಾಯಕತ್ವ ಬದಲಾವಣೆ ಪ್ರಕ್ರಿಯೆ ಬಿರುಸು ಪಡೆದಿದೆ. ಸಿಎಂ ಸಿದ್ದರಾಮಯ್ಯ ಪಟ್ಟ ಬಿಡುವುದು ಬಹುತೇಕ ಖಚಿತವಾಗಿದೆ. ಲಭ್ಯ ಮಾಹಿತಿಗಳ ಪ್ರಕಾರ ನಾಳೆ (ಮೇ28) ಸಿಎಂ ಸ್ಥಾನಕ್ಕೆ ಸಿದ್ದರಾಮಯ್ಯ ■6ನೇ ಪುಟಕ್ಕೆ



ಅಪ್ಪಾಜಿ... ನೀವು ಹೋದ್ರೆ ನಮ್ಮನ್ನ ಕೈ ಬಿಡ್ತಾರೆ...!

ಬೆಂಗಳೂರು: ಸಿದ್ದರಾಮಯ್ಯ ಅವರು ಮೇ 28 ರಂದು ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಲು ಮುಂದಾಗಿದ್ದಾರೆ. ಇದರ ಬೆನ್ನಲ್ಲೇ ವಿಧಾನಸೌಧ'ದಲ್ಲಿದ್ದ ಆಡ್ಮಿನ್ ವಿಭಾಗದ ಮಹಿಳಾ ಸಿಬ್ಬಂದಿ ಕಣ್ಣೀರಿಟ್ಟಿದ್ದಾರೆ. ಅಪ್ಪಾಜಿ.. ನೀವು ಹೋದ್ರೆ ನಮ್ಮನ್ನ ಕೈ ಬಿಡ್ತಾರೆ ಎಂದು ಕೆಲ ನೌಕರರು ಗೋಳಾಡಿದ್ದಾರೆ.

ನಿಮ್ಮ ಹೆಸರು ಹೇಳಿಕೊಂಡು ಬದುಕುತ್ತಿದ್ದೆವು ಎಂದು ವಿಧಾನ ಸೌಧದಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುವ ಉದ್ಯೋಗಿಗಳು ಕಣ್ಣೀರಿಟ್ಟಿದ್ದಾರೆ. ಆದರೆ, ಸಿಎಂ ಸಿದ್ದರಾಮಯ್ಯ ಅವರು ವಿಷಲ್ ಹೊಡೆದುಕೊಂಡು ಅಲ್ಲಿಂದ ತೆರಳಿದ್ದಾರೆ. ತಮ್ಮ ಹಳೆಯ ಶೈಲಿಯಲ್ಲಿಯೇ ನಿರ್ಗಮಿಸಿದರು.

ಸಿಡಿಲಿಗೆ ರೈತ ಮಹಿಳೆ, ವೃದ್ಧ ಬಲಿ




ಹುಣಸೂರು/ಹೆಚ್.ಡಿ. ಕೋಟೆ, ಮೇ 27– ಪ್ರತ್ಯೇಕ ಪ್ರಕರಣಗಳಲ್ಲಿ ಬುಧವಾರ ಸಿಡಿಲು ಬಡಿದು ಹುಣಸೂರಲ್ಲಿ ಮಹಿಳೆ ಹಾಗೂ ಹೆಚ್.ಡಿ. ಕೋಟೆಯಲ್ಲಿ ವೃದ್ಧ ಬಲಿಯಾಗಿದ್ದಾರೆ.

ಹುಣಸೂರು: ತಾಲೂಕಿನ ಹೊಸಪುರದಲ್ಲಿ ಬುಧವಾರ ಸಿಡಿಲು ಬಡಿದು ಗ್ರಾಮದ ನಿವಾಸಿ ಬೋರೆಗೌಡರ ಪತ್ನಿ ಯಶೋಧಮ್ಮ(65) ಸಾವನ್ನಪ್ಪಿದ್ದಾರೆ. ಯಶೋಧಮ್ಮ ಅವರು ಇಂದು ಗ್ರಾಮದ ಇತರೆ ಮಹಿಳೆಯರೊಂದಿಗೆ ಕೃಷಿ ಕೆಲಸಕ್ಕೆ ತೆರಳಿದ್ದರು. ಮಧ್ಯಾಹ್ನ 3.30 ರಲ್ಲಿ ಜಮೀನಿನಲ್ಲಿ ಕೃಷಿ ಚಟುವಟಿಕೆ ಯಲ್ಲಿ ನಿರತರಾಗಿದ್ದ ವೇಳೆ ಭಾರೀ ಮೋಡ ಕವಿದು, ಬಿರುಗಾಳಿ ಸಹಿತ ಮಳೆ ಆರಂಭವಾಯಿತು. ಈ ವೇಳೆ ಯಶೋ ಧಮ್ಮ ಅವರು ಜಮೀನಿನಲ್ಲಿದ್ದ ಮರದ ಕೆಳಗೆ ಆಶ್ರಯ ಪಡೆದಿದ್ದರು. ಇವರೊಂದಿಗೆ ಕೆಲಸ ಮಾಡುತ್ತಿದ್ದ ಇತರ ಮಹಿಳೆಯರು ಕೂಡ ಬೇರೆ ಮರದಡಿ ಆಶ್ರಯ ಪಡೆದಿದ್ದರು. ಆದರೆ ಯಶೋಧಮ್ಮ ಅವರು ಆಶ್ರಯ ಪಡೆದಿದ್ದ ಮರಕ್ಕೆ ಸಿಡಿಲು ಬಡಿದ ಪರಿಣಾಮ ಆಕೆ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ಸಿಡಿಲು ಬಡಿದು ಯಶೋಧಮ್ಮ ಸಾವನ್ನಪ್ಪಿದ ದೃಶ್ಯ ಕಣ್ಣಾರೆ ಕಂಡ ಇತರ ಮಹಿಳೆಯರ ಆಕ್ರಂದನ ಮುಗಿಲು ಮುಟ್ಟಿತ್ತು. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಕಂದಾಯ ಇಲಾಖೆ ಅಧಿಕಾರಿಗಳು ಹಾಗೂ ಬಿಳಿಕೆರೆ ಠಾಣೆ ಪೊಲೀಸರು ಪರಿಶೀಲನೆ ನಡೆಸಿ, ಶವವನ್ನು ಮರಣೋತ್ತರ ಪರೀಕ್ಷೆಗಾಗಿ ಬಿಳಿಕೆರೆ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಲಾಯಿತು. ಆದರೆ ಆಸ್ಪತ್ರೆಯಲ್ಲಿ ವೈದ್ಯರು ಇಲ್ಲದ ಕಾರಣ ಶವವನ್ನು ಹುಣಸೂರು ಸಾರ್ವಜನಿಕ ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು. ಈ ಸಂಬಂಧ ಬಿಳಿಕೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ರೈತ ಸಂಘದ ಜಿಲ್ಲಾಧ್ಯಕ್ಷ ಹೊಸೂರು ಕುಮಾರ್ ಮಾತನಾಡಿ, ಸಂಬಂಧಪಟ್ಟ ಅಧಿಕಾರಿಗಳು ಘಟನೆ ಸಂಬಂಧ ಸರ್ಕಾರಕ್ಕೆ ಸಕಾಲಕ್ಕೆ ವರದಿ ■6ನೇ ಪುಟಕ್ಕೆ

ಜಾತಿ ಗಣತಿ ವರದಿ ಸ್ವೀಕರಿಸಿದ ಸಿದ್ದರಾಮಯ್ಯ

ರಾಜೀನಾಮೆಗೂ ಮುನ್ನ ಅಹಿಂದ ವರ್ಗಕ್ಕೆ ಸಂದೇಶ!

ಬೆಂಗಳೂರು, ಮೇ 27– ರಾಜ್ಯದಲ್ಲಿ ನಾಯಕತ್ವ ಬದಲಾವಣೆ ವಿಚಾರವಾಗಿ ಕ್ಲೈಮಾಕ್ಸ್ ಹಂತದ ಸಂದರ್ಭದಲ್ಲಿ ಸಿಎಂ ಸಿದ್ದರಾಮಯ್ಯ ಅವರು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ವರದಿಯನ್ನು ಸ್ವೀಕರಿಸಿದ್ದಾರೆ. ವಿಧಾನಸೌಧಕ್ಕೆ ಆಗಮಿಸಿದ ಸಿದ್ದರಾಮಯ್ಯ ಅವರು ಆಯೋಗದ ಅಧ್ಯಕ್ಷ ಮಧುಸೂದನ್ ಆರ್ ನಾಯ್ಕ್ ಅವರು ಸಲ್ಲಿಸಿದ ವರದಿಯನ್ನು ಸ್ವೀಕರಿಸಿದರು.

ಈ ಹಿಂದೆ ಜಯಪ್ರಕಾಶ್ ಹೆಗ್ಡೆ ಅವರು ಅವರು ವರದಿ ಸಲ್ಲಿಕೆ ಮಾಡಿದ್ದರು. ಆದರೆ, ಇದಕ್ಕೆ ಭಾರೀ ವಿರೋಧ ವ್ಯಕ್ತವಾಗಿತ್ತು. ವರದಿ ಅವೈಜ್ಞಾನಿಕವಾಗಿದೆ ಎಂದು ಆರೋಪ ಮಾಡಲಾಗಿತ್ತು. ಅಲ್ಲದೆ, ಪ್ರಭಾವಿ ಸಮುದಾಯಗಳ ಸ್ವಾಮೀಜಿಗಳು ವರದಿಗೆ ವಿರೋಧ ಸೂಚಿಸಿದ್ದರು. ಈ ಹಿನ್ನೆಲೆಯಲ್ಲಿ ಮರು ಸಮೀಕ್ಷೆಗೆ ಆದೇಶ ಮಾಡಲಾಗಿತ್ತು. ಇದೀಗ ಸಮೀಕ್ಷೆಯ ವರದಿಯನ್ನು ಸ್ವೀಕರಿಸಲಾಗಿದೆ.

ಸಿದ್ದರಾಮಯ್ಯ ಅವರು ಸಿಎಂ ಸ್ಥಾನಕ್ಕೆ ರಾಜೀನಾಮೆ ಕೊಡುತ್ತಾರೆ ಎಂಬ ಸಂದರ್ಭದಲ್ಲಿ ಅವರು ವರದಿ ಸ್ವೀಕಾರ ಮಾಡುವ ಮೂಲಕ ಅಹಿಂದ ವರ್ಗಕ್ಕೆ ಸಂದೇಶ ರವಾನೆ ಮಾಡಿದ್ದಾರೆ. ಆದರೆ, ಈ ವರದಿಯನ್ನು ಎಷ್ಟರ ಮಟ್ಟಿಗೆ ಜಾರಿಗೆ ತರಲಾಗುತ್ತದೆ ಎಂಬುದು ಸದ್ಯದ ಕುತೂಹಲವಾಗಿದೆ.



ಜಾತಿಗಣತಿ ವರದಿಯನ್ನು ಆಯೋಗದ ಅಧ್ಯಕ್ಷ ಮಧುಸೂದನ್ ಆರ್.ನಾಯ್ಕ್ ಅವರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಬುಧವಾರ ಸ್ವೀಕರಿಸಿದರು.

ಜಾತಿ ಗಣತಿ ವರದಿ ಜರ್ನಿ: 2013–2018ರ ಅವಧಿಯಲ್ಲಿ ಸಿದ್ದರಾಮಯ್ಯನವರು ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿದ್ದಾಗ, ಹಿಂದುಳಿದ ವರ್ಗಗಳ ಆಯೋಗದ ಅಂದಿನ ಅಧ್ಯಕ್ಷರಾಗಿದ್ದ ಎಚ್. ಕಾಂತರಾಜ್ ಅವರ ನೇತೃತ್ವದಲ್ಲಿ ಈ ಸಮೀಕ್ಷೆ ನಡೆಸಲಾಗಿತ್ತು. ಇದಕ್ಕೆ ಜಾತಿ ಸಮೀಕ್ಷೆ ಎನ್ನುವ ಬದಲಾಗಿ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯಾಗಿದೆ. 2015 ರಲ್ಲಿ ರಾಜ್ಯಾದ್ಯಂತ ಸಮೀಕ್ಷೆಯನ್ನು ಕೈಗೊಳ್ಳಲಾಗಿತ್ತು.

ಈ ಸಮೀಕ್ಷೆಯಲ್ಲಿ ಸುಮಾರು 1.3 ಲಕ್ಷ ಸರ್ಕಾರಿ ಸಿಬ್ಬಂದಿ ಪ್ರತಿ ಮನೆ ಮನೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹ ಮಾಡಿದ್ದರು. ರಾಜ್ಯ ಸರ್ಕಾರ ■6ನೇ ಪುಟಕ್ಕೆ

ಸಿಎಂ ವಿಜಯ್–ಪ್ರಧಾನಿ ಮೋದಿ ಭೇಟಿ: ಮೇಕೆದಾಟು ಯೋಜನೆಗೆ ಆಕ್ಷೇಪ

ನವದೆಹಲಿ: ಈ ತಿಂಗಳ ಆರಂಭದಲ್ಲಿ ಅಧಿಕಾರಕ್ಕೆ ಬಂದ ನಂತರ ರಾಷ್ಟ್ರ ರಾಜಧಾನಿಗೆ ತಮ್ಮ ಮೊದಲ ಅಧಿಕೃತ ಭೇಟಿ ನೀಡಿದ ತಮಿಳುನಾಡು ಮುಖ್ಯಮಂತ್ರಿ ಸಿ ಜೋಸೆಫ್ ವಿಜಯ್ ಇಂದು ದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾದರು.



20 ನಿಮಿಷಗಳ ಕಾಲ ನಡೆದ ಸಭೆಯಲ್ಲಿ, ಮುಖ್ಯಮಂತ್ರಿಗಳು ತಮಿಳುನಾಡಿಗೆ ಸಂಬಂಧಿಸಿದ ವಿಷಯಗಳ ಪಟ್ಟಿಯನ್ನು ಉಲ್ಲೇಖಿಸಿ, ಅವುಗಳನ್ನು ಪರಿಗಣಿಸುವಂತೆ ಪ್ರಧಾನಿಗೆ ಮನವಿ ಮಾಡಿದರು. ಇತ್ತೀಚೆಗೆ ಹಾಲೆಂಡ್‌ನಿಂದ ಪ್ರಾಚೀನ ತಾಮ್ರ ಫಲಕಗಳನ್ನು ಮರಳಿ ತಂದಿದ್ದಕ್ಕಾಗಿ ವಿಜಯ್ ಪ್ರಧಾನಿ ಮೋದಿಗೆ ಧನ್ಯವಾದ ಅರ್ಪಿಸಿದರು. ಮೇಕೆದಾಟುದಲ್ಲಿ ಅಣೆಕಟ್ಟು ಯೋಜನೆಗಾಗಿ ಕರ್ನಾಟಕ ಘೋಷಿಸಿದ ಸೂಕ್ಷ್ಮ ವಿಷಯದ ಬಗ್ಗೆಯೂ ಅವರು ಪ್ರಸ್ತಾಪಿಸಿದರು.

ಮೇಕೆದಾಟು ನೀರಿನ ವಿವಾದದ ಕುರಿತು, ಎರಡು ರಾಜ್ಯಗಳ ನಡುವಿನ ಗಡಿಗೆ ಸಮೀಪವಿರುವ ಪ್ರದೇಶದಲ್ಲಿ ಅಣೆಕಟ್ಟು ನಿರ್ಮಿಸಲು ಕರ್ನಾಟಕ ಸರ್ಕಾರವು ಏಕಪಕ್ಷೀಯವಾಗಿ ಕೈಗೊಳ್ಳುವ ಯಾವುದೇ ಕ್ರಮವು ಕಾವೇರಿ ಜಲ ನ್ಯಾಯ ಮಂಡಳಿ ಮತ್ತು ಸುಪ್ರೀಂಕೋರ್ಟ್‌ನ ತೀರ್ಪಿನ ಆಶಯಕ್ಕೆ ವಿರುದ್ಧವಾಗಿರುತ್ತದೆ ಎಂದು ವಿಜಯ್ ಪ್ರಧಾನಿಗೆ ತಿಳಿಸಿದರು.

ಅಂತಹ ಯೋಜನೆಗೆ ಕೇಂದ್ರ ಸರ್ಕಾರದ ಅನುಮತಿ ಅಗತ್ಯವಿರುವುದರಿಂದ, ಅಣೆಕಟ್ಟು ನಿರ್ಮಿಸಲು ಅವಕಾಶ ನೀಡದಂತೆ ಜಲಶಕ್ತಿ ಸಚಿವಾಲಯಕ್ಕೆ ಸೂಚಿಸುವಂತೆ ವಿಜಯ್ ಪ್ರಧಾನಿ ಮೋದಿಯವರನ್ನು ವಿನಂತಿಸಿದರು.

ಮೈಸೂರಲ್ಲಿ 2 ಕೋಟಿ ಮೌಲ್ಯದ ದಂತ ಜಪ್ತಿ

● ಆಂಧ್ರಪ್ರದೇಶದ ನಿವೃತ್ತ ಮಹಿಳಾ ಪೊಲೀಸ್ ಅಧಿಕಾರಿ ಸೇರಿ ನಾಲ್ವರ ಬಂಧನ ● ಖಚಿತ ಮಾಹಿತಿ ಆಧರಿಸಿ ನಾಗ್ಪುರ ಡೈರೆಕ್ಟೊರೇಟ್ ಆಫ್ ರೆವಿನ್ಯೂ ಇಂಟೆಲಿಜೆನ್ಸ್ ಅಧಿಕಾರಿಗಳಿಂದ ಮೈಸೂರು ರಾಮಕೃಷ್ಣನಗರದ ಮನೆ ಮೇಲೆ ದಾಳಿ

ಮೈಸೂರು, ಮೇ 27(ಎಂಟಿವೈ)– ಆನೆ ದಂತ ಮಾರಾಟಕ್ಕೆ ಯತ್ನಿಸಿದ ಆಂಧ್ರಪ್ರದೇಶದ ನಿವೃತ್ತ ಮಹಿಳಾ ಪೊಲೀಸ್ ಅಧಿಕಾರಿ ಸೇರಿದಂತೆ ನಾಲ್ಕು ಮಂದಿಯನ್ನು ಮಹಾರಾಷ್ಟ್ರದ ನಾಗ್ಪುರದ ಡೈರೆಕ್ಟೊರೇಟ್ ಆಫ್ ರೆವಿನ್ಯೂ ಇಂಟೆಲಿಜೆನ್ಸ್(ಡಿಆರ್‌ಐ) ಅಧಿಕಾರಿಗಳು ಬಂಧಿಸಿ, ಮೂರು ದಂತದ ತುಂಡು ವಶಕ್ಕೆ ಪಡೆದಿದ್ದಾರೆ. ಅಲ್ಲದೆ ಬಂಧಿತರನ್ನು ಮೈಸೂರು ಅರಣ್ಯ ಇಲಾಖೆಯ ಅಧಿಕಾರಿಗಳ ವಶಕ್ಕೆ ಒಪ್ಪಿಸಿದ್ದಾರೆ.

ಆಂಧ್ರಪ್ರದೇಶ ಕರ್ನೂಲ್‌ನಲ್ಲಿ ಪೊಲೀಸ್ ಅಧಿಕಾರಿಯಾಗಿದ್ದು, ಸ್ವಯಂ ನಿವೃತ್ತಿ ಪಡೆದು ಮೈಸೂರಿನ ರಾಮಕೃಷ್ಣನಗರದ ಐ–ಬ್ಲಾಕ್‌ನ ಸ್ವಾಮಿ ವಿವೇಕಾನಂದ ರಸ್ತೆಯ ಮನೆ ನಂಬರ್ 12ರ ನಿವಾಸಿ ಜಮುನಾರಾಣಿ ಕಾಕಬುಲ್ ಅಲಿಯಾಸ್ ರೂಪ(66) ಮನೆ ಮೇಲೆ ದಾಳಿ ಮಾಡಿದ ಮಹಾರಾಷ್ಟ್ರದ ನಾಗ್ಪುರದ ಡೈರೆಕ್ಟೊರೇಟ್ ಆಫ್ ರೆವಿನ್ಯೂ ಇಂಟೆಲಿಜೆನ್ಸ್ (ಡಿಆರ್‌ಐ) ಅಧಿಕಾರಿಗಳು ಆನೆ ದಂತದ ಮೂರು ತುಂಡುಗಳನ್ನು ವಶಕ್ಕೆ ಪಡೆದಿದ್ದಾರೆ. ಅಲ್ಲದೆ, ಮನೆಯಲ್ಲಿ ಇಬ್ಬರು ಆರೋಪಿಗಳನ್ನು ವಶಕ್ಕೆ ಪಡೆದು ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಒಪ್ಪಿಸಿದ್ದಾರೆ. ಅರಣ್ಯ ಇಲಾಖೆ ಬಂಧಿತರ ವಿಚಾರಣೆ ಗೊಳಪಡಿಸಿದಾಗ ಅವರು ನೀಡಿದ ಸುಳಿವಿನಂತೆ ಕೊಳ್ಳೇಗಾಲದಲ್ಲಿ ಮತ್ತೊಬ್ಬ ಆರೋಪಿಯನ್ನು ಬಂಧಿಸಿ ಕರೆತಂದಿದ್ದಾರೆ. ಬಂಧಿತರಿಂದ ದಂತದೊಂದಿಗೆ ನಾಲ್ಕು ಮೊಬೈಲ್, ಒಂದು ಕಾರು ವಶಪಡಿಸಿಕೊಳ್ಳಲಾಗಿದೆ.



ಆನೆ ದಂತ ಮಾರಾಟ ಮಾಡಲೆತ್ನಿಸಿದ ಆರೋಪಿಗಳನ್ನು ಬಂಧಿಸಿರುವ ಅರಣ್ಯ ಇಲಾಖೆ ಸಿಬ್ಬಂದಿ ತಂಡ.

ನಾಲ್ವರ ಬಂಧನ: ಪ್ರಕರಣದಲ್ಲಿ ಆಂಧ್ರ ಪ್ರದೇಶ ಕರ್ನೂಲ್ ನಿವಾಸಿ ಸೈಯ್ಯದ್ ಮಹಮದ್ ಫಯಾಜ್ ಎ–1 ಆರೋಪಿ, ಕೊಳ್ಳೇಗಾಲದ ನಿವಾಸಿ ಮುನೀರ್ ಪಾಶ ಎ–2, ರಾಮಕೃಷ್ಣನಗರದ ಜಮುನರಾಣಿ ಮಹಾರಾಷ್ಟ್ರದ ನಾಗ್ಪುರದ ಡೈರೆಕ್ಟೊರೇಟ್ ಆಫ್ ರೆವಿನ್ಯೂ ಇಂಟೆಲಿಜೆನ್ಸ್ (ಡಿಆರ್‌ಐ) ಅಧಿಕಾರಿ ಎ–3 ಹಾಗೂ ಕೊಳ್ಳೇಗಾಲದ ಅಪ್ಸರ್‌ಪಾಶ ಎ–4 ಆರೋಪಿಯಾಗಿದ್ದು, ಅವರನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಿದಾಗ ಕೋರ್ಟ್ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಮಾರಾಟಕ್ಕೆ ಯತ್ನ: ಅಂದಾಜು 3 ಕೆಜಿ ತೂಕದ ಆನೆ ದಂತದ 3 ತುಂಡುಗಳನ್ನು ನೀಲಿ ಬಣ್ಣದ ಸೂಟ್‌ಕೇಸ್‌ನಲ್ಲಿ ತಂದು ಮಾರಾಟ ಮಾಡಲು ಯತ್ನಿಸುತ್ತಿದ್ದಾಗ ದಾಳಿ ನಡೆದಿದೆ. ನಿವೃತ್ತ ಪೊಲೀಸ್ ಅಧಿಕಾರಿಯಾಗಿರುವ ಜಮುನಾರಾಣಿ ಅವರು ತನ್ನ ಪರಿಚಯಸ್ಥ ಆಂಧ್ರದ ಕರ್ನೂಲ್ ನಿವಾಸಿ ಸೈಯ್ಯದ್ ಮಹಮದ್ ಫಯಾಜ್‌ನನ್ನು ಸಂಪರ್ಕಿಸಿದ್ದಾರೆ. ತಮ್ಮ ಬಳಿ ಆನೆ ದಂತವಿದ್ದು, ಅದರ ಮಾರಾಟದ ಬಗ್ಗೆ ಪ್ರಸ್ತಾಪಿಸಿದ್ದಾರೆ. ಅಂದಾಜು ಎರಡು ಕೋಟಿ ರೂ. ಬೆಲೆಗೆ ಮಾರಾಟವಾಗಲಿದೆ ಎಂದು ತಿಳಿಸಿದ್ದಾರೆ. ಈ ವೇಳೆ ಫಯಾಜ್ ಗ್ರಾಹಕರನ್ನು ಹುಡುಕುವ ವೇಳೆ ಮಹಾರಾಷ್ಟ್ರದ ನಾಗ್ಪುರದ ರೆವಿನ್ಯೂ ಇಂಟೆಲಿಜೆನ್ಸ್ ಸಿಬ್ಬಂದಿಗೆ ಮಾಹಿತಿ ರವಾನೆಯಾಗಿದೆ.

ಈ ಮಾಹಿತಿಯನ್ನು ಗಂಭೀರವಾಗಿ ಪರಿಗಣಿಸಿದ ರೆವಿನ್ಯೂ ಇಂಟೆಲಿಜೆನ್ಸ್ ಸಿಬ್ಬಂದಿ ಮೇಲಾಧಿಕಾರಿಗಳ ಗಮನಕ್ಕೆ ತಂದಿದ್ದಾರೆ. ಕೂಡಲೇ ಕಾರ್ಯಪ್ರವೃತ್ತರಾದ ನಾಗ್ಪುರದ ಡೈರೆಕ್ಟೊರೇಟ್ ಆಫ್ ರೆವಿನ್ಯೂ ಇಂಟೆಲಿಜೆನ್ಸ್, ಗ್ರಾಹಕರಂತೆ ವ್ಯವಹಾರ ಕುದುರಿಸುವ ನೆಪದಲ್ಲಿ ಸೈಯ್ಯದ್ ಮಹಮದ್ ಫಯಾಜ್ ವಿಶ್ವಾಸ ಗಳಿಸಿದ್ದಾರೆ. ಕಳೆದ 10 ದಿನದ ಬಳಿಕ ನಂಬಿಕೆ ಬಂದು, ಫಯಾಜ್ ಗ್ರಾಹಕರ ಸೋಗಿನಲ್ಲಿದ್ದ ನಾಗ್ಪುರದ ಡೈರೆಕ್ಟೊರೇಟ್ ಆಫ್ ರೆವಿನ್ಯೂ ಇಂಟೆಲಿಜೆನ್ಸ್ ■6ನೇ ಪುಟಕ್ಕೆ

ವಿಚಾರಣೆ ಮುಂದುವರೆಯಲಿದೆ...

ಮಹಾರಾಷ್ಟ್ರದ ನಾಗ್ಪುರದ ಡೈರೆಕ್ಟೋರೇಟ್ ರೆವಿನ್ಯೂ ಇಂಟಲಿಜೆನ್ಸ್ ಅಧಿಕಾರಿಗಳೊಂದಿಗೆ ರಾಮಕೃಷ್ಣನಗರದ ಮನೆಯೊಂದರ ಮೇಲೆ ದಾಳಿ ನಡೆಸಿ ಅಂದಾಜು 4 ಕೆಜಿ ತೂಕದ ಆನೆ ದಂತದ ಮೂರು ತುಂಡು ವಶಕ್ಕೆ ಪಡೆದು, ಆಂಧ್ರದ ನಿವೃತ್ತ ಮಹಿಳಾ ಪೊಲೀಸ್ ಅಧಿಕಾರಿ ಸೇರಿದಂತೆ ಮೂವರನ್ನು ಮೊದಲು ಬಂಧಿಸಲಾಗಿದೆ. ರಾತ್ರಿ ಕೊಳ್ಳೇಗಾಲದಲ್ಲಿ ಮತ್ತೊಬ್ಬನನ್ನು ಬಂಧಿಸಲಾಗಿದೆ. ಆರೋಪಿಗಳು ದಂತದ ಮೂಲದ ಬಗ್ಗೆ ಸುಳಿವು ನೀಡಿಲ್ಲ. ತನಿಖೆ ಮುಂದುವರೆಸಲಾಗಿದೆ. ದಂತ ತುಂಬ ಹಳೆಯದಾಗಿದ್ದು, ಅದನ್ನು ಪರೀಕ್ಷೆಗೆ ಪ್ರಯೋಗಾಲಯಕ್ಕೆ ರವಾನಿಸಲಾಗುವುದು. ಅದು ಎಷ್ಟು ವರ್ಷ ಹಳೆಯದು ಎಂದು ಇದರಿಂದ ಗೊತ್ತಾಗುತ್ತದೆ. ಬಂಧಿತ ಆರೋಪಿಗಳು ಕ್ರಿಮಿನಲ್ ಹಿನ್ನೆಲೆ ಉಳ್ಳವರಂತೆ ಕಾಣಿಸುತ್ತಿದ್ದು ವಿಚಾರಣೆ ಮುಂದುವರೆಸಲಾಗುತ್ತದೆ.

– ಕೆ.ಪರಮೇಶ್, ಡಿಸಿಎಫ್, ಮೈಸೂರು ಪ್ರಾದೇಶಿಕ ವಿಭಾಗ

ಗಣಪತಿ ಸಚ್ಚಿದಾನಂದ ಸ್ವಾಮೀಜಿ ಜನ್ಮದಿನೋತ್ಸವ: ವಿವಿಧ ಧಾರ್ಮಿಕ ಕಾಯಕ, ಪ್ರಶಸ್ತಿ ಪ್ರದಾನ



ಮೈಸೂರಿನ ಗಣಪತಿ ಆಶ್ರಮದ ನಾದಮಂಟಪದಲ್ಲಿ ನಡೆದ ಗಣಪತಿ ಸಚ್ಚಿದಾನಂದ ಶ್ರೀಗಳ ಜನ್ಮ ದಿನೋತ್ಸವ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ ಗಣ್ಯರಿಗೆ ವಿವಿಧ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು,ಮೇ 27(ಎಂಟಿವೈ)– ಶ್ರೀ ಅವಧೂತ ದತ್ತ ಪೀಠದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ ಜನ್ಮ ದಿನದ ಅಂಗವಾಗಿ ಬುಧವಾರ ಬೆಳಿಗ್ಗೆ ವಿವಿಧ ಧಾರ್ಮಿಕ ಕೈಂಕರ್ಯ ಜರುಗಿದವು.

ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಇಂದು ಬೆಳಿಗ್ಗೆ 7 ಗಂಟೆಗೆ ಅಧಿಕ ಜ್ಯೇಷ್ಠ ಶುದ್ಧ ಏಕಾದಶಿ ಹಿನ್ನೆಲೆಯಲ್ಲಿ ರುದ್ರ ಹೋಮ, ಆಯುಷ್ಯ ಹೋಮ, ರುದ್ರಾಭಿಷೇಕ ನೆರವೇರಿಸಲಾಯಿತು. ಬಳಿಕ ಬೆಳಿಗ್ಗೆ 10 ಗಂಟೆಗೆ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರಿಗೆ ಕಿರಿಯ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಪ್ರತ್ಯಕ್ಷ ಪಾದಪೂಜೆ ನೆರವೇರಿಸಿದರು.

ಪ್ರಶಸ್ತಿ ಪ್ರದಾನ: ಬಳಿಕ ನಾದಮಂಟಪದಲ್ಲಿ ನಡೆದ ಚೈತನ್ಯಾರ್ಚನೆ–ದತ್ತ ಪೀಠ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಕೊಯಮತ್ತೂರಿನ ವಿ.ಜಂಬುನಾಥ ಘನಪಾಠಿ ಅವರಿಗೆ 'ವೇದ ನಿಧಿ' ಪ್ರಶಸ್ತಿ, ತಿರುಪತಿಯ ಕುಪ್ಪಾ ವಿಶ್ವನಾಥ ಶರ್ಮರಿಗೆ 'ಶಾಸ್ತ್ರ ನಿಧಿ', ತಮಿಳುನಾಡಿನ ಚೆನ್ನೈನ ವಿದ್ವಾನ್ ಸುರೇಶ್ ವೈದ್ಯನಾಥನ್‌ರಿಗೆ 'ನಾದ ನಿಧಿ', ಹೈದರಾಬಾದ್ ನಿವಾಸಿ ಸಾಮವೇದಮ್ ಷಣ್ಮುಖ ಶರ್ಮರಿಗೆ 'ಪ್ರವಚನ ಚಕ್ರವರ್ತಿ', ಕಾಶ್ಮೀರದ ರವೀಂದರ್ ಪಂಡಿತ ಅವರಿಗೆ 'ಧರ್ಮ ಬಂಧು', ಬೆಂಗಳೂರಿನ ಅನುಪಮ ವೇದಾಚಲ ಅವರಿಗೆ 'ಸಸ್ಯ ಬಂಧು' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಬಳಿಕ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಆಶೀರ್ವಚನ ನೀಡಿ, ಜೀವನದ ಸಾರ್ಥಕತೆಗೆ ವಿದ್ಯೆ ಅತ್ಯಗತ್ಯ, ನಾವೆಲ್ಲ ಭಗವಂತನನ್ನ ಬಗೆ ಬಗೆಯ ಹೂಗಳಿಂದ ಪೂಜಿಸುತ್ತೇವೆ. ನಮ್ಮ ವಾಂಛೆಗೆ ಪ್ರಾರ್ಥನೆ ಸಲ್ಲಿಸುತ್ತೇವೆ. ಅದು ಸರಿಯಾದುದಲ್ಲ. ಮೊದಲು ಸ್ವಯಂ ಜ್ಞಾನ, ಸ್ವಯಂ ಭಕ್ತಿ, ಸ್ವಯಂ ವೈರಾಗ್ಯವನ್ನು ಭಗವಂತನಲ್ಲಿ ಕೇಳಬೇಕು. ಮನಸ್ಸಿನ ಶುದ್ಧತೆ, ಶಾಂತಿಗಾಗಿ ಪ್ರಾರ್ಥಿಸಿ ಎಂದು ಸಲಹೆ ನೀಡಿದರು.

ಚಾತುರ್ಮಾಸ್ಯ: ಅವಧೂತ ದತ್ತಪೀಠದ ಕಿರಿಯ ಸ್ವಾಮೀಜಿ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ, ಜು.29ರಿಂದ ಸೆ.26ರವರೆಗೆ ಕೈಗೊಳ್ಳಲಿರುವ ಚಾತುರ್ಮಾಸ್ಯ ವ್ರತ ದೀಕ್ಷಾ ಮಹೋತ್ಸವದ ಪೋಸ್ಟರ್ ಅನ್ನು ಶಾಸಕ ಟಿ.ಎಸ್.ಶ್ರೀವತ್ಸ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಡಿ.ಟಿ.ಪ್ರಕಾಶ್ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ದತ್ತಪೀಠದ ಪೀಠಾಧಿಪತಿ ಅವಧೂತ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ 84ನೇ ವರ್ಧಂತಿ ಮಹೋತ್ಸವದ ಅಂಗವಾಗಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಸಂಘಟನಾ ಕಾರ್ಯದರ್ಶಿ ನಂ.ಶ್ರೀಕಂಠ ಕುಮಾರ್, ಜಿಲ್ಲಾ ಪ್ರತಿನಿಧಿ ಡಾ.ಕೆ.ಲಕ್ಷ್ಮೀದೇವಿ ಫಲಪುಷ್ಪ ನೀಡಿ, ಗೌರವಿಸಿದರು. ವಿಪ್ರ ಮುಖಂಡರಾದ ಎನ್.ಶ್ರೀನಿವಾಸ ಪ್ರಸಾದ್, ಟಿ.ಎಸ್.ಅರುಣ್, ಚಂದ್ರಶೇಖರ್, ಶಾಂತಕ್ಕ, ವನಜಾ, ಶಂಕರನಾರಾಯಣ ಮತ್ತಿತರರು ಉಪಸ್ಥಿತರಿದ್ದರು.

ಇಂದು ತಿರುಮಲ ಬೆಟ್ಟದಲ್ಲಿ ಕೌಸಲ್ಯಾ ಗಾಯನ ಸೇವೆ



ಕೌಸಲ್ಯಾ ರಘುರಾಂ

ಮೈಸೂರು, ಮೇ 27–ನಗರದ ಉದಯೋನ್ಮುಖ ಗಾಯಕಿ ಕೌಸಲ್ಯಾ ರಘುರಾಂ ಅವರು ಮೇ 28ರಂದು ತಿರುಮಲ ತಿರುಪತಿಯ ಶ್ರೀ ವೆಂಕಟೇಶ್ವರನ ಸನ್ನಿಧಿಯಲ್ಲಿ ಗಾಯನ ಸೇವೆ ಸಮರ್ಪಣೆ ಮಾಡಲಿದ್ದಾರೆ. ಸ್ವಾಮಿಗೆ ಸಹಸ್ರ ದೀಪಾಲಂಕಾರ ಸೇವೆ ಸಂದರ್ಭ ಗಾಯನ ಮಾಡಲು ತಿರುಮಲ–ತಿರುಪತಿ ದಾಸ ಸಾಹಿತ್ಯ ಪ್ರಾಜೆಕ್ಟ್ ಅಯ್ಕೆ ಮಾಡಿಕೊಂಡಿರುವ ಗಾಯಕಿಯಾಗಿರುವ ಕೌಸಲ್ಯಾ ಅವರು ಮೈಸೂರು ವಿವಿ ಸ್ಕೂಲ್ ಆಫ್ ಇಂಜಿನಿಯರಿಂಗ್‌ನಲ್ಲಿ ಅಂತಿಮ ಸೆಮಿಸ್ಟರ್ ಅಧ್ಯಯನ ಮಾಡುತ್ತಿದ್ದಾರೆ.

ಮೇ 28ರಂದು ಸಂಜೆ 5 ಗಂಟೆಗೆ ನೆರವೇರಲಿರುವ ದೀಪಾಲಂಕಾರ ಸೇವೆ ಮತ್ತು ದಾಸರ ಪದಗಳ ಗಾಯನ ಕಾರ್ಯಕ್ರಮವು ಟಿಟಿಡಿಯ ಶ್ರೀ ವೆಂಕಟೇಶ್ವರ ಭಕ್ತಿ ಚಾನೆಲ್‌ನಲ್ಲಿ ನೇರ ಪ್ರಸಾರವಾಗಲಿದೆ ಎಂದು ಟಿಟಿಡಿ ಸಿಇಒ ಕಚೇರಿ ಪ್ರಕಟಣೆ ತಿಳಿಸಿದೆ.

ಶ್ರೀ ಗುರುಗುಹ ಸಂಗೀತ ಮಹಾವಿದ್ಯಾಲಯದ ವಿದ್ವಾನ್ ಶೃಂಗೇರಿ ಎಚ್.ಎಸ್. ನಾಗರಾಜ್ ಮತ್ತು ವಿದುಷಿ ರಜನಿ ರಾಮಧ್ಯಾನಿ ಅವರ ಬಳಿ ಕರ್ನಾಟಕ ಶಾಸ್ತ್ರೀಯ ಸಂಗೀತ ಸೀನಿಯರ್ ಹಂತದ ಕಲಿಕೆಯಲ್ಲಿ ಇರುವ ಕೌಸಲ್ಯಾ, ಈಗಾಗಲೇ ಹಲವು ಮಠ–ಮಾನ್ಯಗಳ ವೇದಿಕೆಗಳಲ್ಲಿ ದಾಸರ ಪದಗಳ ಗಾಯನ ಪ್ರಸ್ತುತಪಡಿಸಿರುವುದು ವಿಶೇಷವಾಗಿದೆ.

ಯುಜಿಡಿ ಅಭಿವೃದ್ಧಿ ಕಾಮಗಾರಿಗೆ ಶಾಸಕ ಟಿ.ಎಸ್.ಶ್ರೀವತ್ಸ ಗುದ್ದಲಿಪೂಜೆ...



ಮೈಸೂರಿನ ಕೃಷ್ಣರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಾರ್ಡ್ ನಂ.43ರಲ್ಲಿ ತರಳಬಾಳು ಜಂಕ್ಷನ್‌ನಿಂದ ಗಣೇಶ್ ಭಂಡಾರ್‌ವರೆಗೆ ಅಂದಾಜು 45 ಲಕ್ಷ ರೂ. ವೆಚ್ಚದ ಯುಜಿಡಿ ಅಭಿವೃದ್ಧಿ ಕಾಮಗಾರಿಗೆ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಗುದ್ದಲಿ ಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ನಗರ ಪಾಲಿಕೆ ಮಾಜಿ ಸದಸ್ಯರಾದ ಗೋಪಿ, ಜೆ.ಎಸ್.ಜಗದೀಶ್, ಬಿಜೆಪಿ ಮುಖಂಡರಾದ ಪೂರ್ಣಿಮಾ ಚಂದ್ರಪ್ಪ, ಎಂ.ಪಿ.ಬಸವರಾಜ್, ಪ್ರದೀಪ್‌ಕುಮಾರ್, ಕೆಂಚ ಮಧು, ಶಿವಣ್ಣ, ಚಂದ್ರಪ್ಪ, ಕಣ್ಣೂರಮೇಶ್, ಸತ್ಯಾನಂದ ವಿಟ್ಟು, ಹೇಮಂತ್ ಮತ್ತಿತರರು ಉಪಸ್ಥಿತರಿದ್ದರು

ಜೂ.1ರಿಂದ ಪಿಯು ವಿದ್ಯಾರ್ಥಿಗಳಿಗೆ ಲಘು ಕೌಶಲ್ಯ, ಉದ್ಯಮ ಭೇಟಿ ಕುರಿತು ತರಬೇತಿ

ಮೈಸೂರು, ಮೇ27(ಜಿಎ)–ಮೈಸೂರಿನ ಎನ್‌ಐಇ ಕಾಲೇಜು ಹಾಗೂ ಐಡಿಯಾ ಲ್ಯಾಬ್ ಸಹಯೋಗದಲ್ಲಿ ಇನ್‌ಕ್ಯುಬೇಷನ್ ಕೇಂದ್ರದ ವತಿಯಿಂದ ಪಿಯು ವಿದ್ಯಾರ್ಥಿಗಳಿಗೆ ಜೂ.1ರಿಂದ 12 ರವರೆಗೆ ಲಘು ಕೌಶಲ್ಯ, ಉದ್ಯಮ ಭೇಟಿ ಹಾಗೂ ಶಾಖೆಯ ನಿರ್ದಿಷ್ಟ ಭೇಟಿ ಕುರಿತ ಇಂಟರ್ನ್‌ಶಿಪ್ ತರಬೇತಿ ಆಯೋಜಿಸಲಾಗಿದೆ ಎಂದು ಉಪ ಪ್ರಾಂಶುಪಾಲರಾದ ಎನ್.ವಿ.ಲಿಖಿತ್ ಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಮತ್ತು ಉದ್ಯಮಶೀಲತೆಯಲ್ಲಿ ವಿದ್ಯಾರ್ಥಿಗಳಲ್ಲಿ ಆಸಕ್ತಿ ಮೂಡಿಸಲು ಹಾಗೂ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಒಂದು ಕ್ರಿಯಾತ್ಮಕ ವೇದಿಕೆ ಒದಗಿಸುವ ಉದ್ದೇಶ ಇದರದ್ದಾಗಿದೆ ಎಂದರು.

ಉತ್ಪನ್ನ ವಿನ್ಯಾಸ ಮತ್ತು ಮೂಲ ಮಾದರಿ, ನಾವೀನ್ಯತೆ ಮತ್ತು ಸಮಸ್ಯೆ ಪರಿಹಾರ, ಉದ್ಯಮಶೀಲತಾ ಚಿಂತನೆ, ಮೂಲ ಎಂಜಿನಿಯರಿಂಗ್ ಪರಿಕಲ್ಪನೆಗಳು, ಉದ್ಯಮ ತಜ್ಞರು ಮತ್ತು ಅಧ್ಯಾಪಕರ ಮಾರ್ಗದರ್ಶನ ಈ ತರಬೇತಿ ಹೊಂದಿದೆ. ಇದು ಸಂಪೂರ್ಣ ಉಚಿತವಾಗಿದ್ದು, ಮಧ್ಯಾಹ್ನ ಊಟದ ವ್ಯವಸ್ಥೆ ಇರಲಿದೆ. ನಮ್ಮ ದೈನಂದಿನ ಜೀವನ ರೂಪಿಸುವ ಸರಕು ಮತ್ತು ಸೇವೆಗಳನ್ನು ಉತ್ಪಾದಿಸಲು ವಿಜ್ಞಾನ, ತಂತ್ರಜ್ಞಾನ ಮತ್ತು ನಿರ್ವಹಣೆಯ ಪ್ರಾಯೋಗಿಕ ಅನ್ವಯ ಕುರಿತ ಮಾಹಿತಿ ಒದಗಿಸಲಾಗುವುದು. ಮಾಹಿತಿಗೆ ದೂ. 95388 44373 ಅನ್ನು ಸಂಪರ್ಕಿಸಬಹುದಾಗಿದೆ ಎಂದರು. ಗೋಷ್ಠಿಯಲ್ಲಿ ಹರ್ಷಿತ್ ದಿವಾಕರ್, ಆರ್.ನಿತೇಶ್, ಗೌತಮಿ ಉಪಸ್ಥಿತರಿದ್ದರು.

ಸಿಂಗಾಪುರ ಪ್ರವಾಸ ಮುಗಿಸಿ ಬಂದ ದಂಪತಿಗೆ ಖದೀಮರ ಶಾಕ್!

ಮನೆ ಬಾಗಿಲು ಮೀಟಿ 7 ಲಕ್ಷ ಮೌಲ್ಯದ ಚಿನ್ನಾಭರಣ, ಡಾಲರ್ ಕಳವು



ಮೈಸೂರು, ಮೇ 27(ಎಂಕೆ)– ಸಿಂಗಾಪುರ್ ಪ್ರವಾಸ ಮುಗಿಸಿ ಬಂದ ದಂಪತಿಗೆ ಶಾಕ್ ನೀಡಿರುವ ಖದೀಮರು, ಅಮೆರಿಕ ಡಾಲರ್ ಸೇರಿದಂತೆ 7 ಲಕ್ಷ ರೂ.ಮೌಲ್ಯದ ಚಿನ್ನಾಭರಣ ದೋಚಿರುವ ಘಟನೆ ಮೈಸೂರಿನ ವಿಜಯನಗರದಲ್ಲಿ ನಡೆದಿದೆ. ಇಲ್ಲಿನ ನಿವಾಸಿ ಹಾಗೂ ಬೆಂಗಳೂರಿನ ಖಾಸಗಿ ಕಂಪನಿಯೊಂದರ ಉದ್ಯೋಗಿಯಾಗಿರುವ ವಿಶ್ವನಾಥ್ ರವೀಂದ್ರನ್, ದಂಪತಿ ಸಮೇತ ಮೇ 21 ರಂದು ಸಿಂಗಾಪುರ್ ಪ್ರವಾಸಕ್ಕೆ ತೆರಳಿದ್ದು, ಮೇ 25ರಂದು ಮನೆಗೆ ವಾಪಸ್ ಬಂದು ನೋಡಿದಾಗ ಕಳ್ಳತನವಾಗಿರುವುದು ಗೊತ್ತಾಗಿದೆ.

ಮನೆಯ ಬಾಗಿಲು ಮೀಟಿರುವ ಖದೀಮರು, 5 ಲಕ್ಷ ರೂ. ಮೌಲ್ಯದ 60 ಗ್ರಾಂ ಚಿನ್ನಾಭರಣ, 2 ಲಕ್ಷ ರೂ.ಮೌಲ್ಯದ 3 ಕೆಜಿ ಬೆಳ್ಳಿ ಪದಾರ್ಥಗಳು ಹಾಗೂ 500 ಅಮೆರಿಕ ಡಾಲರ್ ಸಹಿತ ಕದ್ದೊಯ್ದಿದ್ದಾರೆ. ಸಿಂಗಾಪುರ್ ಪ್ರವಾಸ ಮುಗಿಸಿ ಖುಷಿ ಖುಷಿಯಾಗಿ ಮನೆಗೆ ವಾಪಸ್ ಬಂದ ದಂಪತಿಗೆ ಖದೀಮರು ಶಾಕ್ ನೀಡಿದ್ದು, ಚಿನ್ನಾಭರಣ ಕಳೆದುಕೊಂಡಿರುವ ವಿಶ್ವನಾಥ್ ರವೀಂದ್ರನ್, ವಿಜಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಸಾಧಕರಿಗೆ 'ಡಾ.ರಾಜ್‌ಕುಮಾರ್ ಕಲಾಭೂಷಣ' ಪ್ರಶಸ್ತಿ ಪ್ರದಾನ



ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯರಿಗೆ 'ಡಾ.ರಾಜ್‌ಕುಮಾರ್ ಕಲಾಭೂಷಣ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು, ಮೇ27(ಜಿಎ)–ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಆಯೋಜಿಸಿದ್ದ ಡಾ.ರಾಜ್‌ಕುಮಾರ್ ಜನ್ಮ ದಿನೋತ್ಸವ ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯರಿಗೆ 'ಡಾ.ರಾಜ್‌ಕುಮಾರ್ ಕಲಾಭೂಷಣ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಈ ವೇಳೆ ಸಮಾಜ ಸೇವಕ ಡಾ.ಕೆ. ರಘುರಾಂ ವಾಜಪೇಯಿ ಮಾತನಾಡಿ, ರಾಜ್‌ಕುಮಾರ್ ಎಲ್ಲರಲ್ಲೂ ದೇವರನ್ನು ಕಾಣುತ್ತಿದ್ದ ಮಹನೀಯರಾಗಿದ್ದರು, ಗೋಕಾಕ್ ಚಳವಳಿ ಮೊದಲಾದ ಸಂದರ್ಭದಲ್ಲಿನ ಅವರ ಹೋರಾಟ ನೆನೆಸಿಕೊಂಡರೆ ರೋಮಾಂಚನವಾಗುತ್ತದೆ. ಕಲಾ ತಪಸ್ವಿ, ದಾರ್ಶನಿಕ, ಸಂತರಂತಿದ್ದ ಅವರು ಕಲೆ ಮೂಲಕ ಜನಮಾನಸದಲ್ಲಿ ನೆಲೆಸಿ ಸತ್ಪ್ರಜೆಗಳನ್ನು ರೂಪಿಸಿದರು. ಅವರ ಆಚಾರ, ವಿಚಾರ ಒಂದೇ ಆಗಿದ್ದವು. ಹೀಗಾಗಿ ಇಂದಿಗೂ ಅಜರಾಮರರಾಗಿದ್ದಾರೆ ಎಂದು ಸ್ಮರಿಸಿದರು.

ಸಾಹಿತಿ ಜಯಪ್ಪ ಹೊನ್ನಾಳಿ ಮಾತನಾಡಿ, ಡಾ.ರಾಜ್ ಎಂಬುದೇ ದೊಡ್ಡ ಶಕ್ತಿ, ಅವರ ಎತ್ತರ ವಿವರಿಸುವುದು ಹಿಮಾಲಯದ ತಳದಲ್ಲಿ ನಿಂತು ಅದರ ಆಳ, ಅಗಲ ವಿವರಿಸಲು ಹೇಳಿದ ಹಾಗೆ. ಕನ್ನಡಿಗರ ಆರಾಧ್ಯ ದೈವವಾಗಿದ್ದ ಅವರು ಕನ್ನಡ ಚಿತ್ರರಂಗದ ಶಾಶ್ವತ ಧ್ರುವತಾರೆಯಾಗಿದ್ದಾರೆ. ನಮ್ಮ ಕಾಲಮಾನದ ಜನರು ಅವರನ್ನು ಸದ್ಗುರು ಎಂದೇ ನಂಬಿದ್ದರು. ಬಾಲ್ಯದಲ್ಲಿ ಜೀವನ ತಮಗೆ ಕಲಿಸಿದ ಪಾಠದ ಕಾರಣ ಬದುಕಿನುದ್ದಕ್ಕೂ ಮಾನವೀಯ ಮೌಲ್ಯ ರೂಢಿಸಿಕೊಂಡಿದ್ದರು. ಅವರೊಳಗಿದ್ದ ಬಾಲ್ಯದ ಮುಗ್ಧತೆ ಜೀವನದುದ್ದಕ್ಕೂ ಉಳಿಸಿಕೊಂಡಿದ್ದರು ಎಂದು ಬಣ್ಣಿಸಿದರು.

ಕಾರ್ಯಕ್ರಮದಲ್ಲಿ ಶಿಕ್ಷಣ ಕ್ಷೇತ್ರದ ಎಸ್.ಸುಮಾ, ಜಾನಪದ ಕ್ಷೇತ್ರದ ಅಂಬಳೆ ಶಿವಣ್ಣ, ಆರೋಗ್ಯ ಕ್ಷೇತ್ರದ ಎಂ.ನಟರಾಜು, ಸಂಘಟನೆ ಮತ್ತು ಸಮಾಜ ಸೇವೆಗಾಗಿ ಮಲ್ಲಿಕಾ ಮಹದೇವಸ್ವಾಮಿ ಹಾಗೂ ಕಲಾ ಕ್ಷೇತ್ರದ ಬಿ.ಎಸ್.ಜಯರಾಮರಾಜು ಅವರಿಗೆ 'ಡಾ.ರಾಜ್‌ಕುಮಾರ್ ಕಲಾ ಭೂಷಣ' ಪ್ರಶಸ್ತಿ ನೀಡಿ ಅಭಿನಂದಿಲಾಯಿತು. ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಚುಟುಕು ಸಾಹಿತ್ಯ ಪರಿಷತ್‌ನ ಅಧ್ಯಕ್ಷ ಡಾ.ಎಂ.ಜಿ.ಆರ್.ಅರಸ್, ಉದ್ಯಮಿ ಲಯನ್ ಗೋಲ್ಡನ್ ಟಿ. ಸುರೇಶ್, ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷ ಬಸವರಾಜೇಂದ್ರ ಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ಸಿಎಂ ಸಿದ್ದರಾಮಯ್ಯ ರಾಜೀನಾಮೆ ವಿಚಾರ

ಅಭಿಮಾನಿ ಆತ್ಮಹತ್ಯೆ ಯತ್ನ ವದಂತಿ ಸೃಷ್ಟಿಸಿದ ಆತಂಕ

ಮೈಸೂರು,ಮೇ 27(ಪಿಎಂ)– ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಸ್ಥಾನಕ್ಕೆ ಗುರುವಾರ ರಾಜೀನಾಮೆ ನೀಡಲಿದ್ದಾರೆಂದು ಬೇಸರಗೊಂಡು ಅವರ ಅಭಿಮಾನಿಯೊಬ್ಬರು ಆತ್ಮಹತ್ಯೆಗೆ ಯತ್ನಿಸಿದ್ದಾರೆ ಎಂಬ ವದಂತಿಯೊಂದು ಬುಧವಾರ ಕೆಲಕಾಲ ಆತಂಕ ಸೃಷ್ಟಿಸಿತು.

ವಾಹಿನಿಯೊಂದರಲ್ಲಿ ವ್ಯಕ್ತಿಯೊಬ್ಬರು ಆತ್ಮಹತ್ಯೆಗೆ ಯತ್ನಿಸಿದ್ದಾರೆ ಎಂಬ ಸುದ್ದಿಯ ತುಣುಕು ಸಾಮಾಜಿಕ ಜಾಲತಾಣದಲ್ಲೂ ಕಂಡುಬಂದಿತು. ಈ ಹಿನ್ನೆಲೆಯಲ್ಲಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ ಎನ್ನಲಾದ ವ್ಯಕ್ತಿಯವರನ್ನೇ 'ಮೈಸೂರು ಮಿತ್ರ' ಮೊಬೈಲ್ ಮೂಲಕ ಸಂಪರ್ಕ ಮಾಡಿದಾಗ, ತಮ್ಮನ್ನು ಚನ್ನರಾಜ ನಾಯಕ ಎಂದು ಅವರು ಪರಿಚಯಿಸಿಕೊಂಡರು.

ಅಲ್ಲದೆ, ಮುಂದುವರೆದು ಮಾತನಾಡಿದ ಅವರು, ನಾನು ಚಾಮುಂಡೇಶ್ವರಿ ಕ್ಷೇತ್ರದ ನಿವಾಸಿಯಾಗಿದ್ದು, ಸಿದ್ದರಾಮಯ್ಯ ಅಭಿಮಾನಿ ಎಂಬುದೂ ನಿಜ. ಆದರೆ ಆತ್ಮಹತ್ಯೆಗೆ ಯತ್ನಿಸಿದ್ದೇನೆ ಎಂಬುದು ಸುಳ್ಳು ಸುದ್ದಿ. ಯಾರೋ ತಪ್ಪು ಮಾಹಿತಿ ನೀಡಿದ್ದಾರೆ. ನಾನು ರೂಮ್‌ನಲ್ಲಿ ಮಲಗಿದ್ದಾಗ ಫೋಟೋ ತೆಗೆದು ಹಾಕಿದ್ದಾರೆ ಎಂದು ಮಾಹಿತಿ ನೀಡಿದರು.

ನಾನು ರೈತನಾಗಿದ್ದು, ಮೈಸೂರು ತಾಲೂಕಿನ ಜಯಪುರ ಹೋಬಳಿ ಮಾರ್ಬಳ್ಳಿಯಲ್ಲೇ ವಾಸವಾಗಿದ್ದೇನೆ. ಸಿದ್ದರಾಮಯ್ಯನವರು ರಾಜೀನಾಮೆ ನೀಡುತ್ತಾರೆ ಎಂಬ ಸುದ್ದಿ ಹಿನ್ನೆಲೆಯಲ್ಲಿ ಇಂದು ಬೆಂಗಳೂರಿಗೆ ಹೋಗಿದ್ದೆ. ಇಲ್ಲಿನ ಹೋಟೆಲ್ ರೂಮ್‌ನಲ್ಲಿ ನಾನು ಮಲಗಿದ್ದಾಗ ಆ ಫೋಟೋ ಅನ್ನು ಯಾರೋ ತೆಗೆದುಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದಾರೆ ಎಂದು ಸುಳ್ಳು ಸುದ್ದಿ ಹಬ್ಬಿಸಿದ್ದಾರೆ. ನಾನು ತಂಗಿದ್ದ ಬೆಂಗಳೂರಿನ ಹೋಟೆಲ್‌ಗೆ ಉಪ್ಪಾರಪೇಟೆ ಪೊಲೀಸರು ಭೇಟಿ ನೀಡಿ ಆತ್ಮಹತ್ಯೆ ಯತ್ನದ ಬಗ್ಗೆ ವಿಚಾರಿಸಿದರು. ಅವರಿಗೂ ಅದೆಲ್ಲಾ ಸುಳ್ಳು ಎಂದು ತಿಳಿಸಿದ್ದಾನೆ ಎಂದು ವಿವರಿಸಿದರು.

ಅರವಿಂದ ಮಿತ್ರಗೆ ಪಿಹೆಚ್.ಡಿ



ಮೈಸೂರು, ಮೇ 27– ಡಾ. ವಿಜಯ್‌ಕುಮಾರ್ ಎಂ ಬೊರಟ್ಟಿ ಅವರ ಮಾರ್ಗದರ್ಶನದಲ್ಲಿ ಅರವಿಂದ ಮಿತ್ರ.ಕೆ. ಅವರು ಇಂಗ್ಲಿಷ್ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾಲಯ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ನಿಧನ

ಬಿ.ರಾಜಮ್ಮ



ಮೈಸೂರು, ಮೇ27–ಚಾಮರಾಜನಗರ ತಾಲೂಕು ಹರವೆ ಗ್ರಾಮದ ಲೇಟ್ ಸಂಗಣ್ಣ ಅವರ ಪತ್ನಿ ಬಿ.ರಾಜಮ್ಮ (84) ಮೈಸೂರಿನ ಜೆಎಸ್‌ಎಸ್ ಲೇಔಟ್‌ನಲ್ಲಿರುವ ನಿವಾಸದಲ್ಲಿ ಬುಧವಾರ ನಿಧನರಾದರು. ಮೃತರು 'ಡೆಕ್ಕನ್‌ಹೆರಾಲ್ಡ್' ಹಾಗೂ 'ಪ್ರಜಾವಾಣಿ' ಪತ್ರಿಕೆ ಮೈಸೂರು ಪ್ರಸರಣ ವಿಭಾಗದ ಹಿರಿಯ ವ್ಯವಸ್ಥಾಪಕ ಎಸ್.ಪ್ರಕಾಶ್ ಸೇರಿ ಇಬ್ಬರು ಪುತ್ರರು, ಇಬ್ಬರು ಸೊಸೆಯಂದಿರು, ಮೂವರು ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಅವರ ಹರವೆ ಗ್ರಾಮದಲ್ಲಿರುವ ಜಮೀನಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲ ತಿಳಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

28.5.2026 ಗುರುವಾರ, ಮಳೆ ನಕ್ಷತ್ರ: ರೋಹಿಣಿ 25.05.2026ರಿಂದ 07.06.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ (ಅಧಿಕ) ಮಾಸ, ಶುಕ್ಲ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಚಿತ್ತ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಮಧುಮೇಹದ ಗಾಯಗಳು, ವೆರಿಕೋಸ್ ವೇನ್ಸ್, ಆರೋಗ್ಯಾಯುಷ್ಯ ಆರೋಗ್ಯ ವರ್ಧಕ ಶಿಬಿರ, ಮೂತ್ರಪಿಂಡ (ಕಿಡ್ನಿ) ಕಾಯಿಲೆಗೆ ಚಿಕಿತ್ಸಾ ಶಿಬಿರ, ಬೆಳಗ್ಗೆ 9.30ರಿಂದ. ಕಣ್ಣಿನ ದೃಷ್ಟಿ ಸಮಸ್ಯೆಗಳಿಗೆ ವಿಶೇಷ ಬೇಸಿಗೆ ಶಿಬಿರ, ಬೊಜ್ಜು, ಸಕ್ಕರೆ ಕಾಯಿಲೆ, ಬಿಪಿ, ಕೀಲುನೋವು, ಅಲರ್ಜಿ, ಚರ್ಮದ ರೋಗಗಳು, ಒತ್ತಡ, ಆತಂಕ, ಬಾಲನೆರೆ, ತಲೆನೋವು, ಅಸ್ತಮಾ, ಪಿಸಿಓಡಿ, ಪುರುಷ ಹಾಗೂ ಸ್ತ್ರೀ ಬಂಜೆತನ, ಪಿಎಂಒಎಸ್ ತೊಂದರೆಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಆಲನಹಳ್ಳಿ.
- **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ:** ಪಾರಂಪರಿಕ ಹಾಸು ಆಟಗಳ 11ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.
- **ಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಸಂಗೀತ ಕಲಾನಿಧಿ ಮೈಸೂರು ವಾಸುದೇವಾಚಾರ್ಯರ ಜನ್ಮ ದಿನಾಚರಣೆ ಮಹೋತ್ಸವ, ಬೆಳಗ್ಗೆ 10.30ಕ್ಕೆ ಉದ್ಘಾಟನೆ: ಶಾಸಕ ಟಿ.ಎಸ್.ಶ್ರೀವತ್ಸ, ಮಧ್ಯಾಹ್ನ 11ರಿಂದ ಸಂಗೀತ ವಿದುಷಿ ಡಾ. ಟಿ.ಎಸ್. ಸತ್ಯವತಿ ಮತ್ತು ವೃಂದದವರಿಂದ ಸಂಗೀತ ಪ್ರಾತ್ಯಕ್ಷಿಕೆ 'ವಾಸುದೇವ ವಾಗ್ಗೇಯ ವೈಭವ', ಅರ್ಚನಾ ಭೋಜ್, ಶಿಲ್ಪಾ ಶಶಿಧರ್, ಅಂಜನಾ ಪಿ.ರಾವ್, ಲಾವಣ್ಯ ಕೃಷ್ಣಮೂರ್ತಿ ಅವರಿಂದ ಗಾಯನ, ವಿದುಷಿ ಅದಿತಿ ಕೃಷ್ಣಪ್ರಕಾಶ್–ವಯೋಲಿನ್, ಪ್ರೊ.ಜಿ.ಎಸ್.ರಾಮಾನುಜನ್ –ಮೃದಂಗ, ಸ್ಥಳ: ಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರ, ನಾರಾಯಣಶಾಸ್ತ್ರಿ ರಸ್ತೆ.
- **ಸಪಸ ಸಂಗೀತ ವಿದ್ಯಾಲಯ:** ಹೆಸರಾಂತ ಹಿನ್ನಲೆ ಗಾಯಕ ಪುರುಷೋತ್ತಮ ಕಿರಗಸೂರು ಅವರಿಂದ ಭಾವಗೀತೆಗಳ ಕಾರ್ಯಾಗಾರ, ಸ್ಥಳ: ಸಪಸ ಸಂಗೀತ ಶಾಲೆ, ಗಾನಭಾರತಿ ಹತ್ತಿರ, ಕುವೆಂಪುನಗರ, ಬೆಳಗ್ಗೆ 11.30ರಿಂದ ಸಂಜೆ 5ರಿಂದ.
- **ಅಖಿಲ ಭಾರತ ಸಂಗೀತ ನೃತ್ಯ ಕಲಾವಿದರ ಸಂಘ:** ಸಾಂಸ್ಕೃತಿಕ ಸೇವಾ ವೇದಿಕೆಗಳ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಶಾಸಕ ಟಿ.ಎಸ್.ಶ್ರೀವತ್ಸ, ಅಧ್ಯಕ್ಷತೆ: ಎಐಎಂಡಿಎ ಅಧ್ಯಕ್ಷ ಸಾಯಿ ನಾರಾಯಣ ಕಲ್ಮಡ್ಕ, ಸನ್ಮಾನಿತರು: ಹಿರಿಯ ಸಂಗೀತ ಹಾಗೂ ಸಾಹಿತ್ಯ ಕಲಾವಿದರಾದ ವಿದುಷಿ ಭಾರತಿ ಮಂಜುನಾಥ್, ವಿದುಷಿ ಎಂ.ಎಲ್.ಭಾರತಿ, ಮುಖ್ಯ ಅತಿಥಿಗಳು : ಮಾಜಿ ಸಿಂಡಿಕೇಟ್ ಸದಸ್ಯ ಈ.ಸಿ. ನಿಂಗರಾಜ್‌ಗೌಡ, ಶ್ರೀ ಸಪ್ತಮಾತೃಕೆ ದೇವಸ್ಥಾನದ ಅಧ್ಯಕ್ಷ ಎಸ್.ಕೆ.ಭಾಸ್ಕರ್, ಎಐಎಂಡಿಎ ಗೌರವ ಅಧ್ಯಕ್ಷ ಜಿ.ವಿ. ಶ್ರೀನಿವಾಸ್ ರಾವ್, ಸ್ಥಳ: ಶ್ರೀ ಸಪ್ತಮಾತೃಕೆ ಚೌಡೇಶ್ವರಿ ದೇವಸ್ಥಾನ, ವಿಜಯನಗರ 3ನೇ ಹಂತ, ಸಂಜೆ 4.30ಕ್ಕೆ.
- **ಯುವ ಪ್ರತಿಷ್ಠಾನ:** ವಿನಾಯಕ ದಾಮೋದರ ಸಾವರ್ಕರ್ ಜಯಂತಿ, ಉದ್ಘಾಟನೆ: ಶಾಸಕ ಟಿ.ಎಸ್.ಶ್ರೀವತ್ಸ, ಸಾವರ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ: ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ವೀರಸಾವರ್ಕರ್ ಕುರಿತು: ಯುವ ಚಿಂತಕ ವಿಕಾಸ್ ಶಾಸ್ತ್ರಿ, ಅಧ್ಯಕ್ಷತೆ: ಹಿರಿಯ ಸಂಸ್ಕೃತ ವಿದುಷಿ ಡಾ.ಕೆ.ಲೀಲಾಪ್ರಕಾಶ್, ಮುಖ್ಯ ಅತಿಥಿಗಳು: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹಿಮಾಲಯ ಪ್ರತಿಷ್ಠಾನ ಅಧ್ಯಕ್ಷ ಎನ್. ಅನಂತ, ವಾಸುದೇವ ಮಹಾರಾಜ್ ಪ್ರತಿಷ್ಠಾನ ಅಧ್ಯಕ್ಷ ಎಂ.ವಿ.ನಾಗೇಂದ್ರಬಾಬು, ಸ್ಥಳ: ವಾಸವಿ ವಿದ್ಯಾನಿಕೇತನ, ಕುವೆಂಪುನಗರ, ಸಂಜೆ 5ಕ್ಕೆ.
- **ಶ್ರೀ ಉತ್ತರಾದಿ ಮಠ, ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ:** ಅಧಿಕ ಮಾಸೋತ್ಸವ, ಪರಮಪೂಜ್ಯ ಶ್ರೀ ಶ್ರೀ 1008 ಶ್ರೀ ಸತ್ಯಾತ್ಮ ತೀರ್ಥ ಶ್ರೀಪಾದಂಗಳವರ 33 ದಿನಗಳ ಮೈಸೂರು ದಿಗ್ವಿಜಯ–2026, ಸಾಂಸ್ಕೃತಿಕ ಕಾರ್ಯಕ್ರಮಗಳು, ವಿದ್ವಾನ್ ಸುಮಂತ್ ವಸಿಷ್ಠ ಅವರಿಂದ ದಾಸಾಂಜಲಿ, ಸ್ಥಳ: ಶ್ರೀ ಕಾಶಿ ವಿಶ್ವೇಶ್ವರ ಸನ್ನಿಧಿ ಆವರಣ, ಅಗ್ರಹಾರ, ಸಂಜೆ 5.30ಕ್ಕೆ.
- **ಶ್ರೀ ರಾಮಕೃಷ್ಣ ಆಶ್ರಮ:** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ರಿಂದ.
- **ಶ್ರೀ ನಾದಬ್ರಹ್ಮ ಸಂಗೀತ ಸಭಾ :** ಸಂಗೀತ ಕಲಾನಿಧಿ ಮೈಸೂರು ಕೆ. ವಾಸುದೇವಾಚಾರ್ಯ ಸಂಸ್ಮರಣೆ ಕಾರ್ಯಕ್ರಮ, ಸುರಭಿ ಗಾನ ಕಲಾಮಂದಿರದ ಕಲಾವಿದರಿಂದ ಮೈಸೂರು ವಾಸುದೇವಾಚಾರ್ಯರಿಗೆ ಸಂಗೀತ ನಮನ, ಪರಿಕಲ್ಪನೆ ಮತ್ತು ನಿರ್ದೇಶನ: ವಿದುಷಿ ಡಾ.ಸುಕನ್ಯಾ ಪ್ರಭಾಕರ್, ಮುಖ್ಯ ಅತಿಥಿಗಳು: ಶಾಸಕ ಟಿ.ಎಸ್.ಶ್ರೀವತ್ಸ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 6ರಿಂದ.
- **ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ :** ಸಂವತ್ಸರ, (ಸಾಗರ) ಅವರಿಂದ ಹಿಂದೂಸ್ಥಾನಿ ಗಾಯನ ಹಾಗೂ ರಂಗಗೀತೆಗಳು, ಸಂತೋಷ್ ಹೂಗಾರ್–ತಬಲಾ, ಸಾಯಿ ಪ್ರಸಾದ– ಸಂವಾದಿನಿ, ಸ್ಥಳ: ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ, ಸಂಜೆ 6ಕ್ಕೆ.
- **ರಂಗಾನಂದ ಕಲಾ ಸಂಘ :** ಕರ್ನಾಟಕ ರತ್ನ ಡಾ. ರಾಜ್‌ಕುಮಾರ್‌ರವರಿಗೆ ರಂಗನಮನ, ರಂಗಸ್ವಾಮಿ ನಿರ್ದೇಶಿಸಿ ಅಭಿನಯಿಸಿರುವ ಕಾಕೋಳು ಸರೋಜರಾವ್ ವಿರಚಿತ ಕರ್ನಾಟಕ ರಮಾರಮಣ ಶ್ರೀ ಕೃಷ್ಣದೇವರಾಯ ಐತಿಹಾಸಿಕ ನಾಟಕ ಪ್ರದರ್ಶನ, ಮುಖ್ಯ ಅತಿಥಿಗಳು : ಸಾಹಿತಿ ಪ್ರೊ. ಕಾಳೇಗೌಡ ನಾಗವಾರ, ನಿವೃತ್ತ ಪ್ರಾದೇಶಿಕ ಸಾರಿಗೆ ಅಧಿಕಾರಿ ಬಿ.ಆರ್.ಮಂಜುನಾಥ, ಅಧ್ಯಕ್ಷತೆ : ನಿವೃತ್ತ ಪರಿಸರ ಅಧಿಕಾರಿ ಜಿ.ಆರ್.ಗಣೇಶನ್, ಸ್ಥಳ: ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ, ಸಂಜೆ 6.30ಕ್ಕೆ

ಮೈಸೂರು ಆಕಾಶವಾಣಿ




ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 'ದೈಹಿಕ ದೀಕ್ಷೆ' ಅರಿವಿನಿಂದ ಆರೋಗ್ಯದತ್ತ ಬಾನುಲಿ ಸರಣಿ ಕಾರ್ಯಕ್ರಮ, ಪ್ರಸ್ತುತಿ–ಡಾ.ಕುಲದೀಪ್.ಎನ್, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ನಾ ಕಸ್ತೂರಿ ಅವರ ಪಾತಾಳದಲ್ಲಿ ಪಾಪಚ್ಚಿ –ಮಕ್ಕಳ ಸಾಹಿತ್ಯ ಕೃತಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ ಎಸ್.ಎಸ್., 8.45 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಎಂ.ಕೆ.ಸರಸ್ವತಿ–ವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಸುತ್ತಮುತ್ತ: ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳ ಪ್ರಮುಖ ಸಭೆ ಸಮಾರಂಭಗಳ ಪರಿಚಯಾತ್ಮಕ ಕಾರ್ಯಕ್ರಮ. ಪ್ರಸ್ತುತಿ–ಚಂದನಾ .ಸಿ ಹಾಗೂ ಅರ್ಚನಾ ಪಿ. ಆರ್ಯ **ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ಕನ್ನಡ ಭಾರತಿ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಹಣ್ಣು ಹೊನ್ನು–ತೋಟಗಾರಿಕಾ ಬೆಳೆಗಳ ಸುಸ್ಥಿರ ಬೇಸಾಯ ಕುರಿತ ಬಾನುಲಿ ಸರಣಿ. ಹುಣಸೂರು ತಾಲೂಕಿನಲ್ಲಿ ತೋಟಗಾರಿಕಾ ಬೆಳೆಗಳ ಅಭಿವೃದ್ಧಿಗೆ ಇರುವ ವಿಪುಲ ಅವಕಾಶಗಳು ಈ ಕುರಿತು ಹುಣಸೂರು ತಾಲೂಕು ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕ ಡಾ.ಎಚ್.ನಾಗರಾಜ್ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಎನ್.ಕೇಶವಮೂರ್ತಿ, 7.45 ಚಿತ್ರಗೀತೆಗಳು, 8.00 ಯುವವಾಣಿ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ವಾದ್ಯವೃಂದ–ತಿರುವಾರೂರು ಭಕ್ತವತ್ಸಲಂ ನಿರ್ದೇಶನ, 10.00 ನಾಟಕ ಗಡಿದಾಟಿದಾಗ, ರಚನೆ–ಡಾ.ಹೆಚ್.ರಾಚಪ್ಪ, ನಿರ್ಮಾಣ–ಪ್ರಭುಸ್ವಾಮಿ ಮಳಿಮಠ, 10.30 ಸವಿನೆನಪು

ಮೈಸೂರು ನಗರದ ಬಹುತೇಕ ರಸ್ತೆಯಲ್ಲಿ ಹಳ್ಳಕೊಳ್ಳ; ಇದು ವಿವಿಧ ಕಾಮಗಾರಿ ಮಾಡಿದವರ ಕೈಚಳಕ; ಮತ್ತೇನಲ್ಲ!

● ಮೂಲ ಸೌಲಭ್ಯಕ್ಕೆ ರಸ್ತೆ ಅಗೆಯುವುದು ಅನಿವಾರ್ಯ ● ಆದರೆ ಕಾಮಗಾರಿ ಬಳಿಕ ವೈಜ್ಞಾನಿಕ ವಿಧಾನದಲ್ಲಿ ಗುಂಡಿ ಮುಚ್ಚುತ್ತಿಲ್ಲ ● ಪರಿಣಾಮ ವಾಹನ ಸವಾರರು ಹೈರಾಣು ● ಕಾಮಗಾರಿ ನಂತರ ಬೇಕಾಬಿಟ್ಟಿ ಮಣ್ಣು ಮುಚ್ಚಿ ಕೈತೊಳೆದುಕೊಳ್ಳುವುದೇ ಹೆಚ್ಚು ● ಸಮರ್ಪಕ ರೀತಿ ಗುಂಡಿ ಮುಚ್ಚಲು ಮೈಸೂರು ಮಹಾನಗರ ಪಾಲಿಕೆಗಿಲ್ಲ ಕಳಕಳಿ-ಬದ್ಧತೆ ; ನಾಗರಿಕರ ಆಕ್ರೋಶ


ನಾರಾಯಣಶಾಸ್ತ್ರಿ ರಸ್ತೆಯ ಕ್ರಾಸ್‌ನಲ್ಲಿ ಅಧ್ವಾನ.


ಬನ್ನಿಮಂಟಪದ ಜೋಡಿ ತೆಂಗಿನಮರ ಸ್ಮಶಾನ ರಸ್ತೆಯಲ್ಲಿ ಒಳಚರಂಡಿ ಪೈಪ್‌ಲೈನ್ ಕಾಮಗಾರಿ ಪೂರ್ಣಗೊಳಿಸಿದ ಬಳಿಕ ಬೇಕಾಬಿಟ್ಟಿಯಾಗಿ ಮಣ್ಣು ಸುರಿದು ಮುಚ್ಚಲಾಗಿದ್ದು, ಇದರಿಂದ ಬಿಸಿಲಿನ ತಾಪಕ್ಕೆ ವಿಪರೀತ ಧೂಳು ವಾಹನ ಸವಾರರನ್ನು ಇಲ್ಲಿ ಆವರಿಸುವಂತಾಗಿದೆ. ಇನ್ನು ಮಳೆ ಬಂದರೆ ಕೆಸರು ಗದ್ದೆಯಂತಾಗುವುದಲ್ಲಿ ಯಾವುದೇ ಅನುಮಾನ ಬೇಡ. ಸವಾರರು, ಪಾದಚಾರಿಗಳು ಬಿದ್ದು ಅನಾಹುತಕ್ಕೆ ಒಳಗಾಗುವುದಕ್ಕೆ ಆಸ್ಪದ ನೀಡದೇ ಅಗೆದಿರುವ ಗುಂಡಿಯನ್ನು ಕೂಡಲೇ ಸಮರ್ಪಕ ರೀತಿ ಮುಚ್ಚಬೇಕೆಂದು ನಾಗರಿಕರು ಆಗ್ರಹಿಸಿದ್ದಾರೆ.

> ‘ಯಾರೂ ಕಾಮಗಾರಿ ಮಾಡುತ್ತಾರೋ ಅವರೇ ಸಮರ್ಪಕವಾಗಿ ಗುಂಡಿ ಮುಚ್ಚಬೇಕು. ನಗರದ ವ್ಯಾಪ್ತಿ ಸಂಬಂಧ ಆಗೆಂದು ನಿಯಮಾವಳಿಯೇ ಇದೆ. ಕಾಮಗಾರಿ ನಂತರ ಮತ್ತೆ ಸಮರ್ಪಕವಾಗಿ ಗುಂಡಿ ಮುಚ್ಚಲು ಸದರಿ ಕಾಮಗಾರಿ ಡಿಪಿಆರ್‌ನಲ್ಲೇ ಅವಕಾಶ ಮಾಡಿಕೊಳ್ಳಬೇಕು. ಇಲ್ಲವಾದರೆ ಕಾಮಗಾರಿಗಾಗಿ ಮಾಡಿಕೊಂಡ ಡಿಪಿಆರ್ ಅಪೂರ್ಣ ಎಂದೇ ಪರಿಗಣಿಸಬೇಕಾಗುತ್ತದೆ. ಉದ್ದೇಶಿತ ಕಾಮಗಾರಿ ಜೊತೆಗೇ ಗುಂಡಿ ಮುಚ್ಚುವುದೂ ಸೇರಿರಬೇಕು.
>
> 
>
> -ವಿಶ್ವನಾಥ್, ನಿವೃತ್ತ ಉಪ ಮುಖ್ಯ ಇಂಜಿನಿಯರ್, ಕರ್ನಾಟಕ ಜಲಮಂಡಳಿ.



ರಸ್ತೆ ಗುಂಡಿಗೆ ಅವೈಜ್ಞಾನಿಕವಾಗಿ ಇಂಟರ್‌ಲಾಕ್ ಟೈಲ್ಸ್ ಹಾಕಿರುವುದು. ಬಲಚಿತ್ರದಲ್ಲಿ ಚಾಮರಾಜಪುರಂನ ದೇವ ಪಾರ್ಥೀವ ರಸ್ತೆ ಹಾಗೂ ವಾಣಿವಿಲಾಸ ರಸ್ತೆ ಜಂಕ್ಷನ್‌ನಲ್ಲಿ ರಸ್ತೆ ಅಗೆದು ಅರೆಬರೆ ಮುಚ್ಚಿರುವುದನ್ನು ಕಾಣಬಹುದು.

ಮೈಸೂರು, ಮೇ 27(ಪಿಎಂ)– ವಿವಿಧ ಮೂಲಸೌಲಭ್ಯ ಕಲ್ಪಿಸಲು ರಸ್ತೆಗಳನ್ನು ಅಗೆಯುವುದು ಅನಿವಾರ್ಯ. ಆದರೆ ಕಾಮಗಾರಿ ಬಳಿಕ ತಾಂತ್ರಿಕತೆಯ ಸಮರ್ಪಕ ಬಳಕೆ ಮೂಲಕ ವೈಜ್ಞಾನಿಕ ವಿಧಾನದಲ್ಲಿ ಗುಂಡಿಗಳನ್ನು ಮುಚ್ಚುವುದಕ್ಕೆ ಆದ್ಯತೆ ನೀಡದ ಕಾರಣ ಮೈಸೂರು ನಗರದಾದ್ಯಂತ ಹಲವೆಡೆ ಚೆನ್ನಾಗಿದ್ದ ರಸ್ತೆಗಳೀಗ ಗುಂಡಿಮಯವಾಗಿದ್ದು, ಇದರ ಪರಿಣಾಮ ವಾಹನ ಸವಾರರು ಸಂಕಷ್ಟ ಅನುಭವಿಸುವಂತಾಗಿದೆ.

ಕುಡಿಯುವ ನೀರಿನ ಪೈಪ್‌ಲೈನ್ ಅಳವಡಿಕೆ, ಒಳಚರಂಡಿ (ಯುಜಿಡಿ), ಮಳೆ ನೀರು ಚರಂಡಿ ಕಾಮಗಾರಿ, ವಿದ್ಯುತ್ ಕೇಬಲ್, ಟೆಲಿಕಾಂ ಕೇಬಲ್, ಇಂಟರ್‌ನೆಟ್ ಕೇಬಲ್, ರಸ್ತೆ ಅಗಲೀಕರಣ ಮೊದಲಾದ ಮೂಲಸೌಕರ್ಯ ಒದಗಿಸಲು ರಸ್ತೆ ಅಗೆಯುವುದು ಸಾಮಾನ್ಯ. ಆದರೆ ಕಾಮಗಾರಿ ನಂತರದಲ್ಲಿ ಕಾಲಮಿತಿಯೊಳಗೆ ಗುಂಡಿಗಳನ್ನು ಮುಚ್ಚುತ್ತಿಲ್ಲ. ಇದು ನಗರದಲ್ಲಿ ವಾಹನ ಸವಾರರ ಸುಗಮ ಸಂಚಾರಕ್ಕೆ ಅಡಚಣೆ ಉಂಟು ಮಾಡಿದೆ.

ತಾಂತ್ರಿಕತೆ ಬಳಕೆಯೊಂದಿಗೆ ವೈಜ್ಞಾನಿಕ ವಿಧಾನದಲ್ಲಿ ತ್ವರಿತಗತಿಯಲ್ಲಿ ಗುಂಡಿಗಳನ್ನು ಸಮರ್ಪಕವಾಗಿ ಮುಚ್ಚಲು ಆದ್ಯತೆ ನೀಡದೇ ರಸ್ತೆಗಳ ಅವ್ಯವಸ್ಥೆಗೆ ದೂಡಲಾಗುತ್ತಿದೆ ಎಂಬುದು ತಜ್ಞರು ಹಾಗೂ ಪ್ರಜ್ಞಾವಂತ ನಾಗರಿಕರ ಆಪಾದನೆಯಾಗಿದೆ. ಕಾಮಗಾರಿ ಮಾಡುವ ಗುತ್ತಿಗೆದಾರರಿಗೆ ಸಮರ್ಪಕ ರೀತಿಯಲ್ಲಿ ಗುಂಡಿ ಮುಚ್ಚಲು ಮೈಸೂರು ಮಹಾನಗರ ಪಾಲಿಕೆ ಕಟ್ಟುನಿಟ್ಟಿನ ಸೂಚನೆ ನೀಡದೇ ಇರುವುದೇ ಇಂತಹ ಅವ್ಯವಸ್ಥೆಗೆ ಕಾರಣ ಎಂಬುದು ನಾಗರಿಕರ ಆರೋಪ.

ಧೂಳಿನ ಮಜ್ಜನ ಗ್ಯಾರಂಟಿ: ಕಾಮಗಾರಿ ಬಳಿಕ ರಸ್ತೆ ಗುಂಡಿಗಳಿಗೆ ಬೇಕಾಬಿಟ್ಟಿ ಮಣ್ಣು ಹಾಕಿ ಕೈತೊಳೆದುಕೊಳ್ಳುವ ಪರಿಪಾಠದಿಂದ ನಾಗರಿಕರು ತೊಂದರೆ ಅನುಭವಿಸಬೇಕಾಗಿದೆ. ವಾಹನ ಸವಾರರು ಮಳೆ ಬಂದರೆ ಕೆಸರು ನಡುವೆ ಹರಸಾಹಸದಲ್ಲಿ ಸಾಗಬೇಕು. ಇನ್ನು ಬಿಸಿಲಿದ್ದರೆ, ಧೂಳಿನ ಮಜ್ಜನದ ಗ್ಯಾರಂಟಿ ದೊರೆಯಲಿದೆ. ಇಂತಹ ಸನ್ನಿವೇಶದಲ್ಲಿ ಆಯತಪ್ಪಿದರೆ ಅನಾಹುತಕ್ಕೂ ಒಳಗಾಬೇಕಾಗುತ್ತದೆ. ಜೊತೆಗೆ ಕಣ್ಣಿಗೆ ಬೀಳುವ ಧೂಳು ಕಿರಿಕಿರಿ ಉಂಟು ಮಾಡಲಿದ್ದು, ಎಚ್ಚರ ತಪ್ಪಿದರೆ ಕಣ್ಣಿನ ಧೂಳು ಒರೆಸಿಕೊಳ್ಳುವಷ್ಟರಲ್ಲೇ ಅಪಘಾತ ಬಂದಪ್ಪಳಿಸಲಿದೆ.

ದೇವರಾಜ ಮಾರುಕಟ್ಟೆಯ ಪಕ್ಕದ ಕೋತ್ವಾಲ್ ರಾಮಯ್ಯ ಸ್ಟ್ರೀಟ್‌ನಲ್ಲಿ ಕಾಮಗಾರಿಗಾಗಿ ರಸ್ತೆ ಅಗೆದು ಅಧ್ವಾನ ಮಾಡಿದ್ದು, ಕಾಮಗಾರಿ ಬಳಿಕ ಸಮರ್ಪಕವಾಗಿ ಮುಚ್ಚಿಲ್ಲ ಯದ್ವಾತದ್ವಾ ಮಣ್ಣು ಹಾಕಿ ಬಿಟ್ಟಿದ್ದು, ಇದರಿಂದ ಇಲ್ಲಿ ವಾಹನ ಸಂಚಾರ ದುಸ್ತರವಾಗಿದೆ. ಧನ್ವಂತರಿ ರಸ್ತೆ ಹಾಗೂ ನಾರಾಯಣಶಾಸ್ತ್ರಿ ರಸ್ತೆ ಜಂಕ್ಷನ್‌ನಲ್ಲಿಯೂ ಒಳಚರಂಡಿ ಕಾಮಗಾರಿಗಾಗಿ ರಸ್ತೆ ಅಗೆದು ಹದಗೆಡಿಸಲಾಗಿದೆ. ಕಾಮಗಾರಿ ಮುಗಿದು ದಿನಗಳು ಉರುಳುತ್ತಿದ್ದರೂ ಸಮರ್ಪಕವಾಗಿ ಗುಂಡಿ ಮುಚ್ಚುವ ಗೋಜಿಗೆ ಹೋಗದ ಕಾರಣ ಇಲ್ಲಿ ನಿತ್ಯ ಸಂಚರಿಸುವ ಜನ ಪರಿತಪಿಸುವಂತಾಗಿದೆ.

ಚಾಮರಾಜಪುರಂನ ಗೀತಾ ರಸ್ತೆಯ ಬದಿಯಲ್ಲಿ ಕೇಬಲ್ ಅಳವಡಿಕೆ ಕಾಮಗಾರಿ ಅರೆಬರೆ ಮಾಡಿ ಹಾಗೆಯೇ ಬಿಟ್ಟಿದ್ದು, ನಾಗರಿಕರ ಸುರಕ್ಷತೆ ದೃಷ್ಟಿಯಿಂದ ಅಲ್ಲಿ ಉಂಟಾಗಿರುವ ಹಳ್ಳದ ಸುತ್ತಲೂ ಟೇಪ್ ಆದರೂ ಅಳವಡಿಸಿಲ್ಲ. ಇಲ್ಲಿಗೆ ಸಮೀಪದಲ್ಲಿ ರಸ್ತೆ ಅಗೆದು ಮನ ಬಂದಂತೆ ಮುಚ್ಚಿ ಇಂಟರ್‌ಲಾಕ್ ಟೈಲ್ಸ್‌ಗಳನ್ನು ಬೇಕಾಬಿಟ್ಟಿಯಾಗಿ ಹಾಕಲಾಗಿದೆ. ಇದರ ಮೇಲೆ ವಾಹನಗಳು ಸಂಚರಿಸಿದರೆ ಅನಾಹುತ ಸಂಭವಿಸುವುದನ್ನು ತಳ್ಳಿ ಹಾಕಲಾಗದು. ಆ ಪರಿಜ್ಞಾನವೂ ಇಲ್ಲದೇ ಈ ರೀತಿಯಲ್ಲಿ ಮಾಡಿ ಬೇಜವಾಬ್ದಾರಿತನ ತೋರಲಾಗಿದೆ.


ಚಾಮರಾಜಪುರಂನ ಗೀತಾ ರಸ್ತೆಬದಿಯಲ್ಲಿ ಕೇಬಲ್ ಅಳವಡಿಕೆ ಕಾಮಗಾರಿ ಅರೆಬರೆ ಮಾಡಿರುವುದು.

ಇಲ್ಲಿಗೆ ಸಮೀಪದ ದೇವ ಪಾರ್ಥೀವ ರಸ್ತೆಯ ಬದಿಯಲ್ಲಿ ಡಾಂಬರ್ ತೆಗೆದು ಕೇಬಲ್ ಅಳವಡಿಸಿದ್ದು, ಆ ಬಳಿಕ ಸಮತಟ್ಟಾಗಿ ಮರು ಡಾಂಬರೀಕರಣ ಮಾಡಿಲ್ಲ. ಇನ್ನು ಈ ರಸ್ತೆಯ ವಾಣಿವಿಲಾಸ ರಸ್ತೆ ಜಂಕ್ಷನ್‌ನಲ್ಲಿಯೂ ಕೇಬಲ್ ಅಳವಡಿಕೆಗಾಗಿ ಹಳ್ಳ ತೆಗೆದು ಅರೆಬರೆಯಾಗಿ ಮುಚ್ಚಿದ್ದು, ಹಳ್ಳಕೊಳ್ಳದ ನಡುವೆ ಜನ ಓಡಾಡಬೇಕಿದೆ.

ಕುವೆಂಪುನಗರದ ಆದಿಚುಂಚನಗಿರಿ ರಸ್ತೆಯಲ್ಲಿ ಇತ್ತೀಚೆಗಷ್ಟೇ ವಿವಿಧ ಕಾಮಗಾರಿ ಮುಗಿಸಿದ್ದು, ಇದಕ್ಕೂ ಪೂರ್ವದಲ್ಲಿ ರಸ್ತೆ ಅಗಲಕ್ಕೂ ತೆಗೆದಿದ್ದ ಹಳ್ಳಕೊಳ್ಳ ಮುಚ್ಚಿ ಮರು ಡಾಂಬರೀಕರಣ ಮಾಡಲಾಗಿದೆ. ಆದರೆ ಈ ರಸ್ತೆಯ ಆರ್‌ಎಂಪಿ ಕ್ವಾಟ್ರಸ್ ಸಮೀಪದಿಂದ ಸುಮಾರು ದೂರದವರೆಗೆ ಮತ್ತೆ ರಸ್ತೆ ಅಗೆದು ಹಾಗೆ ಬಿಡಲಾಗಿದೆ.

ರಾಮಕೃಷ್ಣನಗರದ ದಕ್ಷಿಣೇಶ್ವರ ರಸ್ತೆ ಹಾಗೂ ಸಾಯಿ ಬಾಬಾ ದೇವಸ್ಥಾನ ರಸ್ತೆಗೆ ಇದೀಗ ಕಾಲಕಲ್ಪ ನೀಡಲಾಗುತ್ತಿದೆ. ಆದರೆ ಹಲವು ವರ್ಷಗಳಿಂದ ಇಲ್ಲಿ ಒಳಚರಂಡಿ, ವಿದ್ಯುತ್ ಕೇಬಲ್ ಅಳವಡಿಕೆಗಾಗಿ ವಿವಿಧ ಕಾಮಗಾರಿಗಾಗಿ ಇಡೀ ರಸ್ತೆಯನ್ನೇ ಅಗೆದು ಅಧ್ವಾನ ಮಾಡಲಾಗಿತ್ತು. ವರ್ಷಗಟ್ಟಲೇ ಇಲ್ಲಿನ ಜನ ಇಂತಹ ಅವ್ಯವಸ್ಥೆಯ ನಡುವೆಯೇ ಓಡಾಡುವ ಅನಿವಾರ್ಯತೆ ಸೃಷ್ಟಿಸಲಾಗಿತ್ತು. ಇದಿಷ್ಟು ಸ್ಯಾಂಪಲ್ ಆಗಿದ್ದು, ನಗರದಾದ್ಯಂತ ಇಂತಹ ಅದ್ವಾನ ಅಸಂಖ್ಯಾ.

ಈ ಸಂಬಂಧ ‘ಮೈಸೂರು ಮಿತ್ರ’ನೊಂದಿಗೆ ಮಾತನಾಡಿದ ಕರ್ನಾಟಕ ಜಲ ಮಂಡಳಿ ನಿವೃತ್ತ ಉಪ ಮುಖ್ಯ ಇಂಜಿನಿಯರ್ ವಿಶ್ವಾಥ್, ಮೂಲಸೌಲಭ್ಯ ಒದಗಿಸುವ ಕಾಮಗಾರಿಗಾಗಿ ರಸ್ತೆ ಅಗೆಯುವುದು ಅನಿವಾರ್ಯ. ಆದರೆ ಕಾಮಗಾರಿ ಪೂರ್ಣಗೊಂಡ ಬಳಿಕ ಮಣ್ಣು ಮುಚ್ಚುವುದನ್ನು ವೈಜಾನಿಕ ವಿಧಾನ ಹಾಗೂ ತಾಂತ್ರಿಕತೆ ಬಳಸಿಕೊಂಡು ಮಾಡುವುದು ಮುಖ್ಯ ಎಂದು ತಿಳಿಸಿದರು.

ಕಾಮಗಾರಿಗಾಗಿ ಅಗೆದ ಮಣ್ಣು ಒಂದು ಕಾಲು ಪಟ್ಟು ಹೆಚ್ಚಳವಾಗಲಿದೆ. 1 ಕ್ಯೂಬಿಕ್ ಮೀಟರ್ ಅಗೆದರೆ ಅದು ಒಂದೂಕಾಲು ಕ್ಯೂಬಿಕ್ ಮೀಟರ್ ಹೆಚ್ಚಾಗಲಿದೆ. ಅಂದರೆ ಶೇ.25ರಷ್ಟು ಹೆಚ್ಚಳವಾಗಲಿದೆ. ಇಂತಹ ಸನ್ನಿವೇಶದಲ್ಲಿ ಮತ್ತೆ ಗುಂಡಿ ಮುಚ್ಚಬೇಕಾದರೆ ವೈಜ್ಞಾನಿಕವಾಗಿ ತಾಂತ್ರಿಕ ವಿಧಾನ ಅನುಸರಿಸಬೇಕು. ಆದರೆ ಆ ರೀತಿಯಲ್ಲಿ ಗುಂಡಿಗಳನ್ನು ಮುಚ್ಚುತ್ತಿಲ್ಲ. ಮನಬಂದಂತೆ ಮುಚ್ಚುವುದೇ ಹೆಚ್ಚು. ಹೆಚ್ಚುವರಿ ಮಣ್ಣನ್ನು ಮೇಲೆ ಹಾಕಿ ಉಳಿದ ಮಣ್ಣನ್ನು ಸ್ಥಳಾಂತರ ಮಾಡುತ್ತಾರೆ. ಬಳಿಕ ವಾಹನ ಸಂಚಾರದಿಂದ ಮಣ್ಣು ಕೆಳಗೆ ಇಳಿಯುತ್ತದೆ. ಹೀಗೆ ಹಳ್ಳಗಳು ನಿರ್ಮಾಣಗೊಳ್ಳಲಿವೆ. ತಾಂತ್ರಿಕತೆಯ ಸಮರ್ಪಕ ಬಳಕೆ ಹಾಗೂ ವೈಜ್ಞಾನಿಕ ವಿಧಾನದಿಂದ ಇದನ್ನು ತಡೆಹಿಡಿಯಬಹುದು ಎಂದರು. ಮತ್ತೆ ಮಣ್ಣು ಮುಚ್ಚಿ ಡಾಂಬರೀಕರಣ ಮಾಡಲು ಒಂದು ಮಳೆ ಅಗತ್ಯವಾದರೂ ತಾಂತ್ರಿಕ ವಿಧಾನ ಬಳಸಿದರೆ ಅದಿಲ್ಲದೆಯೂ ತ್ವರಿತವಾಗಿ ಮುಚ್ಚಲು ಸಾಧ್ಯವಿದೆ. ಆದರೆ ಆ ವಿಧಾನ ಅನುಸರಿಸುತ್ತಿಲ್ಲ. ಈ ಕಾರಣದಿಂದಲೇ ಹಳ್ಳ ಉಂಟಾಗಿ ವಾಹನ ಸಂಚಾರಕ್ಕೆ ತೊಡಕು ಉಂಟಾಗುತ್ತಿದೆ ತಾಂತ್ರಿಕ ವಿಧಾನಕ್ಕೆ ಅಗತ್ಯವಾದ ಸಾಧನ-ಸಲಕರಣೆಗಳು ಇವೆ. ಆದರೆ ವೈಜ್ಞಾನಿಕ ವಿಧಾನ, ತಾಂತ್ರಿಕತೆಯಲ್ಲಿ ಮಾಡದೇ ಸುಮ್ಮನೆ ಮಣ್ಣು ಹಾಕಿದರೆ ಸಮಸ್ಯೆ ಉದ್ಭವಿಸುತ್ತವೆ ಎಂದು ಹೇಳಿದರು.

ಗುಂಡಿ ಮುಚ್ಚಿದ ಮೇಲೆ ರಸ್ತೆ ಡುಬ್ಬದ ಮಾದರಿಯಲ್ಲಿ ಉಬ್ಬಿ ಬರುವಷ್ಟು ಮಣ್ಣು ಹಾಕುತ್ತಾರೆ. ಆ ಮೂಲಕ ವಾಹನ ಚಾಲನೆಯಿಂದ ಅದು ಸಮತಟ್ಟು ಆಗುತ್ತದೆ ಎಂಬ ಉದ್ದೇಶವಿದೆ. ಆದರೆ ಸಹ ಸರಿಯಲ್ಲ. ಹಾಗೆ ಮಾಡಿದರೂ ಮಣ್ಣು ಕೆಳಗಿಳಿದು ಹಳ್ಳ ನಿರ್ಮಾಣವಾಗುತ್ತದೆ. ತಾಂತ್ರಿಕ ವಿಶ್ಲೇಷಣೆಯ ನಿಬಂಧನೆಯಂತೆ ಮಾಡದ ಹಿನ್ನೆಲೆಯಲ್ಲಿ ಗುಂಡಿಗಳು ಉದ್ಭವಗೊಂಡು ಸಮಸ್ಯೆಗಳು ಸೃಷ್ಟಿಯಾಗುತ್ತಿವೆ ಎಂದು ವಿವರಿಸಿದರು.


ರಾಮಕೃಷ್ಣನಗರದ ದಕ್ಷಿಣೇಶ್ವರ ರಸ್ತೆಯ ಡಾಂಬರೀಕರಣ ಕಾಮಗಾರಿ ಆರಂಭಗೊಂಡಿರುವುದು.

ತೆಂಕು-ಬಡಗು ಯಕ್ಷಗಾನ ನಾಟ್ಯ ತರಗತಿ

ಮೈಸೂರು, ಮೇ 27– ಮೈಸೂರಿನ ಕರಾವಳಿ ಯಕ್ಷಗಾನ ಕೇಂದ್ರದ ವತಿಯಿಂದ ಜೂ. 14 ರಂದು ಸಂಜೆ 4 ಗಂಟೆಗೆ ಸರಸ್ವತಿಪುರಂನ ವಿಜಯ ವಿಠಲ ಶಾಲೆಯ ಆವರಣದಲ್ಲಿ ತೆಂಕು-ಬಡಗು ಯಕ್ಷಗಾನ ನಾಟ್ಯ ತರಗತಿಗಳು ಪ್ರಾರಂಭವಾಗಲಿವೆ.

ಪ್ರತಿ ಭಾನುವಾರ ಮಧ್ಯಾಹ್ನ 3 ರಿಂದ ಸಂಜೆ 6 ರವರೆಗೆ ಯಕ್ಷಗಾನ ಪ್ರಾಥಮಿಕ ಹಾಗೂ ಪ್ರೌಢನಾಟ್ಯಗಳ ತರಬೇತಿ ನಡೆಯಲಿದೆ.

ಹೆಚ್ಚಿನ ಮಾಹಿತಿಗೆ ಮೊ. 9008181172, 9844161748, 9449322514 ಸಂಪರ್ಕಿಸಬಹುದು.

ಡಾ. ಅಂಬೇಡ್ಕರ್ ಪುತ್ಥಳಿ ಸ್ಥಾಪನೆಗೆ ಅನುಮತಿ ನೀಡದ ಪಾಲಿಕೆ ವಿರುದ್ಧ ಪ್ರತಿಭಟನೆ

ಮೈಸೂರು, ಮೇ 27(ಎಂಟಿವೈ)– ಮೈಸೂರಿನ ಬಸವನಗುಡಿ ಉದ್ಯಾನದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿ ಸ್ಥಾಪನೆಗೆ ಅನುಮತಿ ನೀಡದ ಮಹಾನಗರ ಪಾಲಿಕೆ ತಾರತಮ್ಯ ಧೋರಣೆ ಖಂಡಿಸಿ ಕರ್ನಾಟಕ ರಾಜ್ಯ ಭೀಮ್ ಸೇನೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಮಹಾನಗರ ಪಾಲಿಕೆ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ, ಆಕ್ರೋಶ ವ್ಯಕ್ತಪಡಿಸಿದರು.

ಬಸವನಗುಡಿ ಉದ್ಯಾನದಲ್ಲಿ ಕುವೆಂಪು ಪುತ್ಥಳಿ ಹಾಗೂ ಬಾಲಗಂಗಾಧರನಾಥ ಸ್ವಾಮೀಜಿಯವರ ಪುತ್ಥಳಿ ಸ್ಥಾಪನೆಗೆ ಅನುಮತಿ ನೀಡಿರುವ ಪಾಲಿಕೆ ಅಂಬೇಡ್ಕರ್ ಪುತ್ಥಳಿ ಸ್ಥಾಪನೆ ಕುರಿತು ತಾರತಮ್ಯ ಅನುಸರಿಸುತ್ತಿದೆ. ಜತೆಗೆ ನಗರದಲ್ಲಿ ಹಲವಾರು ಕಡೆಗಳಲ್ಲಿ ಅನುಮತಿ ಪಡೆಯದೇ ಅನೇಕ ಪ್ರತಿಮೆ ಸ್ಥಾಪಿಸಿದ್ದರೂ ಕ್ರಮ ಕೈಗೊಂಡಿಲ್ಲ. ಹೀಗಾಗಿ ಇವನ್ನು ಸಹ ತೆರವುಗೊಳಿಸಬೇಕು. ತಾರತಮ್ಯ ನೀತಿ ಅನುಸರಿಸದೆ ಅಂಬೇಡ್ಕರ್ ಪುತ್ಥಳಿ ಸ್ಥಾಪನೆಗೆ ಅನುಮತಿ ನೀಡಬೇಕೆಂದು ಆಗ್ರಹಿಸಿದರು. ಜನಪ್ರತಿನಿಧಿಗಳು ಇಲ್ಲದ ಕಾರಣ ಪಾಲಿಕೆಯಲ್ಲಿ ಜನಸಾಮಾನ್ಯರ ಕೆಲಸ ಕಾರ್ಯಕ್ಕೆ ಜಡತ್ವ ಹಿಡಿದಿದೆ. ಎಲ್ಲ ವಲಯಗಳಲ್ಲಿಯೂ ಭ್ರಷ್ಟಾಚಾರ ತುಂಬಿ ತುಳುಕುತ್ತಿದೆ. ಕೇಂದ್ರ ಸರ್ಕಾರ ಸಹ ಇಂಧನ ದರ ಏರಿಸುವ ಮೂಲಕ ಜನಸಾಮಾನ್ಯರ ಮೇಲೆ ದೊಡ್ಡ ಪ್ರಹಾರ ಮಾಡಿದೆ. ಕೂಡಲೇ ಏರಿಸಿರುವ ಬೆಲೆಗಳನ್ನು ಕಡಿಮೆ ಮಾಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಮಾಜಿ ಮೇಯರ್ ಪುರುಷೋತ್ತಮ್, ಮುಖಂಡರಾದ ಹೆಚ್.ಧರ್ಮರಾಜ, ಎಸ್.ಸರ್ವೇಶ್, ಕಿರಣ್, ಸಿದ್ದರಾಜು, ಮಲ್ಲೇಶ್ ಸೇರಿದಂತೆ ಹಲವರು ಭಾಗವಹಿಸಿದ್ದರು.


ಮೈಸೂರಿನ ಬಸವನಗುಡಿ ಉದ್ಯಾನದಲ್ಲಿ ಡಾ.ಅಂಬೇಡ್ಕರ್ ಪುತ್ಥಳಿ ನಿರ್ಮಾಣಕ್ಕೆ ಆಗ್ರಹಿಸಿ ಮೈಸೂರು ಮಹಾನಗರ ಪಾಲಿಕೆ ಕಚೇರಿ ಮುಂದೆ ಕರ್ನಾಟಕ ರಾಜ್ಯ ಭೀಮ್ ಸೇನೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಭಗವಂತ ನಮ್ಮ ಆಸೆ ಈಡೇರಿಸಿದ್ದಾನೆ ಎಂದ ಶಾಸಕ ಇಕ್ಬಾಲ್ ಹುಸೇನ್

ಬೆಂಗಳೂರು : ಭಗವಂತನ ದಯೆಯಿಂದ ಒಳ್ಳೆಯ ಕಾಲ ಬಂದಿದೆ. ನಮ್ಮ ನಾಯಕರಿಗೆ ಇಡೀ ರಾಜ್ಯದ ಜನರು ಬಯಸಿದ್ದನ್ನು ನೆರವೇರಿಸಿದ್ದಾನೆ ಎಂದು ಶಾಸಕ ಇಕ್ಬಾಲ್ ಹುಸೇನ್ ಹೇಳಿಕೆ ನೀಡಿದ್ದಾರೆ.



ಡಿ.ಕೆ.ಶಿವಕುಮಾರ್‌ಗೆ ಅವರಿಗೆ ಮುಖ್ಯಮಂತ್ರಿ ಪಟ್ಟ ಸಿಗುವ ವಿಚಾರವಾಗಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಎಲ್ಲದಕ್ಕೂ ಇತಿಮಿತಿ ಇರುತ್ತದೆ. ಪಕ್ಷದ ವರಿಷ್ಠರು ಶಿಸ್ತಿನಿಂದ ಇರಿ, ಕಾಲ ಬಂದಾಗ ಮಾತನಾಡಿ ಎಂದು ಹೇಳಿದ್ದರು. ಈಗ ಆ ಕಾಲ ಬಂದಿದೆ ಎಂದು ಹೇಳಿದರು.

ನಾಯಕರು ಬೆಂಗಳೂರಿಗೆ ಬರಲಿ, ಅವರ ಜೊತೆ ಮಾತನಾಡುತ್ತೇನೆ. ಬಳಿಕ ಕಾರ್ಯಕರ್ತರ ಜೊತೆ ಚರ್ಚೆ ನಡೆಸಿ ತೀರ್ಮಾನ ಮಾಡಲಾಗುತ್ತದೆ ಎಂದು ತಿಳಿಸಿದರು. ನಾವೆಲ್ಲರೂ ಪಕ್ಷದ ಶಿಸ್ತನ್ನು ಕಾಪಾಡಬೇಕು. ನಿನ್ನೆ ರಾತ್ರಿ ನನಗೆ ನಿದ್ದೆಯೇ ಬರಲಿಲ್ಲ. ದೆಹಲಿಯಲ್ಲಿ ಯಾರ ಜೊತೆ ಮಾತನಾಡಬೇಕಿತ್ತೋ ಅವರ ಜೊತೆ ನಿರಂತರ ಸಂಪರ್ಕದಲ್ಲಿದ್ದೆ. ಕ್ಷಣಕ್ಷಣದ ಮಾಹಿತಿ ಪಡೆಯುತ್ತಿದ್ದೆ ಎಂದರು. ಭಗವಂತ ನನ್ನ ಆಸೆ ಈಡೇರಿಸುವ ಕೆಲಸ ಮಾಡಿದ್ದಾನೆ. ಅವನಿಗೆ ಕೋಟಿ ಕೋಟಿ ನಮಸ್ಕಾರಗಳು ಎಂದು ಭಗವಂತನಿಗೆ ಧನ್ಯವಾದ ತಿಳಿಸಿದ್ದಾರೆ.

ಸೂರ್ಯವಂಶಿ ವೈಭವದಾಟ; ಎಸ್‌ಆರ್‌ಹೆಚ್ ಮಣಿಸಿ ಕ್ವಾಲಿಫೈಯರ್-2ಕ್ಕೆ ಲಗ್ಗೆಯಿಟ್ಟ ಆರ್‌ಆರ್

ನ್ಯೂ ಚಂಡೀಗಢ, ಮೇ 27(ವಿವಿಹೆಚ್)– ವೈಭವ್ ಸೂರ್ಯವಂಶಿ ಅಬ್ಬರದ ಬ್ಯಾಟಿಂಗ್ ಹಾಗೂ ಜೋಫ್ರಾ ಆರ್ಚರ್ ಅವರ ಮಾರಕ ದಾಳಿಯ ನೆರವಿನಿಂದ ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು 47 ರನ್‌ಗಳಿಂದ ಮಣಿಸಿದ ರಾಜಸ್ಥಾನ್ ರಾಯಲ್ಸ್ ಕ್ವಾಲಿಫೈಯರ್-2ಗೆ ಎಂಟ್ರಿಕೊಟ್ಟಿದೆ.

ಈ ಗೆಲುವಿನೊಂದಿಗೆ ಮೇ.29ರಂದು ನಡೆಯಲಿರುವ ಕ್ವಾಲಿಫೈಯರ್-2 ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ವಿರುದ್ಧ ಫೈನಲ್ಸ್ ಟಿಕೆಟ್‌ಗಾಗಿ ಕಾದಾಡಲಿದೆ.

ಇಲ್ಲಿನ ಮುಲ್ಲಾನ್‌ಪುರ್‌ನ ಮಹಾರಾಜ ಯದವೀಂದ್ರ ಸಿಂಗ್ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಐಪಿಎಲ್ 2026ರ ಎಲಿಮಿನೇಟರ್ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಆರ್‌ಆರ್ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 243 ರನ್ ಕಲೆಹಾಕಿತು. ಈ ಮೊತ್ತ ಬೆನ್ನತ್ತುವಲ್ಲಿ ವಿಫಲವಾದ ಎಸ್‌ಆರ್‌ಹೆಚ್ 19.2 ಓವರ್‌ಗಳಲ್ಲಿ ಸರ್ವಪತನ ಕಂಡು 196 ರನ್ ಗಳಿಸಲಷ್ಟೆ ಶಕ್ತವಾಯಿತು.

ಮೊದಲು ಇನ್ನಿಂಗ್ಸ್ ಆರಂಭಿಸಿದ ಆರ್‌ಆರ್‌ಗೆ ಸೂರ್ಯವಂಶಿ ಹಾಗೂ ಯಶಸ್ವಿ ಜೈಸ್ವಾಲ್ ಜೋಡಿ 8 ಓವರ್‌ಗಳಲ್ಲಿ 125 ರನ್‌ಗಳ ಭರ್ಜರಿ ಆರಂಭ ಒದಗಿಸಿತು. ಸೂರ್ಯವಂಶಿ ಕೇವಲ 29 ಎಸೆತಗಳಲ್ಲಿ 5 ಬೌಂಡರಿ ಹಾಗೂ 12 ಸಿಕ್ಸ್ ಸಹಿತ 97 ರನ್ ಬಾರಿಸಿದರೆ, ಯಶಸ್ವಿ ಜೈಸ್ವಾಲ್ 29 ರನ್ ಬಾರಿಸಿದರು.

ವೈಭವ್ ವಿಕೆಟ್ ಬಿದ್ದ ಬಳಿಕ ಕಣಕ್ಕಿಳಿದು ಅಬ್ಬರಿಸಿದ ಧ್ರುವ್ ಜುರೆಲ್ 21 ಎಸೆತಗಳಲ್ಲಿ 5 ಬೌಂಡರಿ ಹಾಗೂ 3 ಸಿಕ್ಸರ್ ಸಹಿತ 50 ರನ್ ಬಾರಿಸಿ ತಂಡದ ರನ್ ವೇಗವನ್ನು ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸಿದರು. ನಾಯಕ ರಿಯಾನ್ ಪರಾಗ್ 12 ಎಸೆತಗಳಲ್ಲಿ 26 ರನ್ ಬಾರಿಸಿದರೆ, ಡೊನೊವನ್ ಫೆರೆರಾ 12, ದಸುನ್ ಶನಕ 5, ಜೋಫ್ರಾ ಆರ್ಚರ್ 4, ಬರ್ಗರ್ 1, ಸುಶಾಂತ್ ಮಿಶ್ರಾ ಅಜೇಯ 1 ರನ್ ಹಾಗೂ ರವೀಂದ್ರ ಜಡೇಜಾ ಅಜೇಯ 12 ರನ್ ಗಳಿಸಿದರು.

ಸನ್ ರೈಸರ್ಸ್ ಹೈದರಾಬಾದ್ ಪರ ಪ್ರಫುಲ್ ಹಿಂಗೆ 3 ವಿಕೆಟ್, ಈಶಾನ್ ಮಲಿಂಗ, ಶಿವಾಂಗ್ ಕುಮಾರ್ ಹಾಗೂ ನಿತೀಶ್ ಕುಮಾರ್ ರೆಡ್ಡಿ ತಲಾ ಒಂದೊಂದು ವಿಕೆಟ್ ಪಡೆದರು. ಈ ಬೃಹತ್ ಮೊತ್ತ ಬೆನ್ನತ್ತಿದ ಎಸ್‌ಆರ್‌ಹೆಚ್ ಬ್ಯಾಟರ್‌ಗಳು ಆರ್‌ಆರ್ ದಾಳಿಗೆ ಮಂಕಾಗಿ ಪೆವಿಲಿಯನ್ ಪೆರೇಡ್ ನಡೆಸಿದರು. ಅಭಿಷೇಕ್ ಶರ್ಮಾ ಡಕ್ ಔಟ್, ಟ್ರಾವಿಸ್ ಹೆಡ್ 17, ಸ್ಮರಣ್ ರವಿಚಂದ್ರನ್ 1, ಹೆನ್ರಿಚ್ ಕ್ಲಾಸೆನ್ 18 ರನ್‌ಗಳಿಸಿ ಬಂದಷ್ಟೆ ವೇಗವಾಗಿ ವಾಪಸ್ಸಾದರು.

ಈ ವೇಳೆ ಇಶಾನ್ ಕಿಶನ್ 33, ನಿತೀಶ್ ಕುಮಾರ್ ರೆಡ್ಡಿ 38, ಸಲೀಲ್ ಅರೋರಾ 35 ರನ್ ಬಾರಿಸಿ ಕೊಂಚ ಹೋರಾಟ ತೋರಿದರೂ ತಂಡವನ್ನು ಗೆಲುವಿನ ದಡ ಸೇರಿಸಲು ಸಾಧ್ಯವಾಗಲಿಲ್ಲ. ಉಳಿದಂತೆ ನಾಯಕ ಪ್ಯಾಟ್ ಕಮಿನ್ಸ್ 1, ಶಿವಾಂಗ್ ಕುಮಾರ್ 27, ಇಶಾನ್ ಮಲಿಂಗಾ 5, ಶಕೀಬ್ ಹುಸೇನ್ ಅಜೇಯ 5 ರನ್ ಗಳಿಸಿದರು.

ಆರ್‌ಆರ್ ಪರ ಜೋಫ್ರಾ ಆರ್ಚರ್ 3, ಬರ್ಗರ್, ಸುಶಾಂತ್ ಮಿಶ್ರಾ ಹಾಗೂ ಜಡೇಜಾ ತಲಾ 2, ಯುಶ್‌ರಾಜ್ ಪುಂಜಾ ಒಂದು ವಿಕೆಟ್ ಪಡೆದರು.



> ಈ ಪಂದ್ಯದಲ್ಲಿ 29 ಎಸೆತಗಳಲ್ಲಿ 97 ರನ್ ಬಾರಿಸಿ ಅರ್ಧಶತಕ ಪೂರೈಸಿದ ವೈಭವ್ ಸೂರ್ಯವಂಶಿ 5 ಬೌಂಡರಿ ಹಾಗೂ 12 ಸಿಕ್ಸರ್‌ಗಳನ್ನು ಚಚ್ಚಿದರು. ಆ ಮೂಲಕ ಐಪಿಎಲ್ ಆವೃತ್ತಿಯೊಂದರಲ್ಲಿ ಅತಿ ಹೆಚ್ಚು ಸಿಕ್ಸರ್ ಬಾರಿಸಿದ ಆಟಗಾರ ದಾಖಲೆಯನ್ನು ಮಾಡಿದ್ದ ಕ್ರಿಸ್ ಗೇಲ್‌ರನ್ನು ಹಿಂದಿಕ್ಕಿ ಆ ದಾಖಲೆಯನ್ನು ವೈಭವ್ ಸೂರ್ಯವಂಶಿ ತನ್ನ ಹೆಸರಿಗೆ ಬರೆದುಕೊಂಡಿದ್ದಾರೆ.
>
> 2012ರಲ್ಲಿ ಆರ್‌ಸಿಬಿ ಪರ 59 ಸಿಕ್ಸರ್‌ಗಳನ್ನು ಬಾರಿಸಿದ್ದ ಕ್ರಿಸ್ ಗೇಲ್ ದಾಖಲೆಯನ್ನು ಸೂರ್ಯವಂಶಿ ಧೂಳೀಪಟ ಮಾಡಿದ್ದು, ಸದ್ಯ ಟೂರ್ನಿಯಲ್ಲಿ 65 ಸಿಕ್ಸರ್‌ಗಳನ್ನು ಬಾರಿಸಿದ್ದಾರೆ.

ಹೆಣ್ಣು ಮಕ್ಕಳಿಂದಲೂ ಸಾಧನೆ ಸಾಧ್ಯ ಎಂಬುದನ್ನು ನಾನು ಸಾಕ್ಷೀಕರಿಸಿದ್ದೇನೆ

ಅಂತಾರಾಷ್ಟ್ರೀಯ ಖೋಖೋ ಕ್ರೀಡಾಪಟು ಬಿ.ಚೈತ್ರಾ ಹೆಮ್ಮೆಯ ನುಡಿ

ಮೈಸೂರು, ಮೇ 27(ವಿವಿಹೆಚ್)– ಹೆಣ್ಣು ಮಕ್ಕಳಿಂದ ಸಾಧನೆ ಅಸಾಧ್ಯ ಎಂದವರಿಗೆಲ್ಲಾ ಮಹಿಳಾ ಸಮುದಾಯದ ಪರವಾಗಿ ಆಟದ ಮೂಲಕವೇ ಉತ್ತರ ನೀಡಿದ್ದೇನೆ ಎಂದು 2025ರ ಖೋ-ಖೋ ವಿಶ್ವಕಪ್ ವಿಜೇತೆ ಹಾಗೂ ಅಂತಾರಾಷ್ಟ್ರೀಯ ಖೋ-ಖೋ ಕ್ರೀಡಾಪಟು ಬಿ.ಚೈತ್ರಾ ತಿಳಿಸಿದರು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸೆಂಟರ್ ಸಭಾಂಗಣದಲ್ಲಿ ರೋಟರಿ ಮಿಡ್‌ಟೌನ್ ವತಿಯಿಂದ ನೀಡಲಾದ ‘ರೋಟರಿ ಮಿಡ್‌ಟೌನ್ ವಿಕ್ರಿಯೇಟ್ ಸ್ಪೇಸ್ ಸ್ಪೋರ್ಟ್ಸ್ ಅವಾರ್ಡ್–2026’ ಸ್ವೀಕರಿಸಿ ಅವರು ಮಾತನಾಡಿದರು.

ಮೂಲತಃ ನರಸೀಪುರ ತಾಲೂಕಿನ ಕುರುಬೂರು ಗ್ರಾಮದವಳಾದ ನಾನು, 4ನೇ ತರಗತಿಯಲ್ಲಿಯೇ ಖೋ-ಖೋ ಆಡಲು ಆರಂಭಿಸಿದೆ. ಈ ವೇಳೆ ಹಲವು ಟೀಕೆ, ದುಮ್ಮಾನಗಳನ್ನು ಅನುಭವಿಸಿದ್ದೇನೆ. ಈ ಎಲ್ಲವನ್ನು ಮೆಟ್ಟಿನಿಂತು ಕ್ರೀಡೆಯಲ್ಲಿ ಉನ್ನತ ಮಟ್ಟದ ಸಾಧನೆ ಮಾಡಲು ಕುಟುಂಬದ ಸಹಕಾರ, ಮುಖ್ಯ ಕೋಚ್ ಮಂಜುನಾಥ್ ಅವರ ತರಬೇತಿಯೇ ಮುಖ್ಯ ಕಾರಣ. ಅವರ ಬೆಂಬಲದಿಂದ ಇಂದು ಜನಮನ ಗೆದ್ದಿದ್ದೇನೆ ಎಂದರು.

ಹಳ್ಳಿಗಳ ಭಾಗಗಳಲ್ಲಿ ಇನ್ನೂ ಮಹಿಳೆಯರು ಕ್ರೀಡೆಯಲ್ಲಿ ಭಾಗವಹಿಸುವುದನ್ನು ಕೀಳಾಗಿ ಕಾಣಲಾಗುತ್ತಿದೆ. ಕುಟುಂಬದ ಬೆಂಬಲದೊಂದಿಗೆ ಈ ಎಲ್ಲಾ ಸಮಾಜಿಕ ಪಿಡುಗುಗಳನ್ನು ಮೆಟ್ಟಿನಿಂತ ಬಳಿಕ, ನನ್ನಂತೆ ಹತ್ತಾರು ಮಂದಿ ಕ್ರೀಡೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಉನ್ನತ ಸಾಧನೆಗಳನ್ನು ಮಾಡಿ ಸರ್ಕಾರಿ ಹುದ್ದೆಗಳನ್ನು ಅಲಂಕರಿಸಿದ್ದಾರೆ ಎಂದರು.

ವಿಶ್ವಕಪ್ ಗೆದ್ದ ಬಳಿಕ ರಾಜ್ಯ ಸೇರಿದಂತೆ ರಾಷ್ಟ್ರದಾದ್ಯಂತ ನನ್ನನ್ನು ಗುರುತಿಸುತ್ತಿದ್ದಾರೆ. ಕರ್ನಾಟಕ ಸರ್ಕಾರದಿಂದ ಕ್ರೀಡಾರತ್ನ ಪ್ರಶಸ್ತಿ ಸೇರಿದಂತೆ ಹತ್ತಾರು ಪ್ರಶಸ್ತಿಗಳು ನನ್ನನ್ನು ಹರಸುತ್ತಾ ಬಂದಿವೆ. ಕ್ರೀಡೆ ನನಗೆ ಇವೆಲ್ಲವನ್ನೂ ನೀಡಿತು ಎಂದರು. ಹೆಣ್ಣು ಮಗಳು ಸಾಧನೆ ಮಾಡುವುದಿಲ್ಲ ಎಂದವರಿಗೆಲ್ಲ ವಿಶ್ವಕಪ್ ಗೆಲ್ಲುವ ಮೂಲಕ ಉತ್ತರ ನೀಡಿದ್ದೇನೆ ಎಂದು ಸಂತಸ ವ್ಯಕ್ತಪಡಿಸಿದರು.

ಯುವ ಪೀಳಿಗೆ ಶಿಕ್ಷಣದೊಂದಿಗೆ ಯಾವುದಾದರೊಂದು ಕ್ರೀಡೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಿ. ಅದು ಮಾನಸಿಕ ಬೆಳವಣಿಗೆ ಜೊತೆಗೆ ದೈಹಿಕವಾಗಿ ಸದೃಢವಾಗಲು ಹಾಗೂ ಮುಂದಿನ ದಿನಗಳಲ್ಲಿ ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಸಹಕಾರಿಯಾಗುತ್ತದೆ. ಕ್ರೀಡೆಯ ಮೂಲಕವೇ ಇಂದು ಶಿಕ್ಷಣ ಪಡೆಯುತ್ತಿರುವುದೇ ಅದಕ್ಕೆ ಉತ್ತಮ ಉದಾಹರಣೆ ಎಂದು ಸಲಹೆ ನೀಡಿದರು.

ಅಂತಾರಾಷ್ಟ್ರೀಯ ಕಬಡ್ಡಿಪಟು ಹಾಗೂ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಸಹಾಯಕ ನಿರ್ದೇಶಕಿ ಸುಶ್ಮಿತಾ ಪವಾರ್ ಮಾತನಾಡಿ, ಆಟೋಟಪಾಠಗಳ ಮೇಲಿನ ಆಸಕ್ತಿ ಹಾಗೂ ನಿರಂತರ ಪರಿಶ್ರಮದಿಂದ ರಾಷ್ಟ್ರೀಯ ಮಟ್ಟದಲ್ಲಿ ಕ್ರೀಡಾಪಟುವಾಗಿ ಗುರುತಿಸಿಕೊಳ್ಳಲು ಸಾಧ್ಯವಾಯಿತು. ಮುಂದೆ 2014ರ ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಗೆದ್ದು ಸಾಧನೆ ಮಾಡಲು ಕುಟುಂಬ ಸಹಕಾರ ಹೆಚ್ಚಾಗಿತ್ತು ಎಂದರು.

ಕ್ರೀಡೆಯಿಂದಲೇ 2006ರಲ್ಲಿ ಪೊಲೀಸ್ ಇಲಾಖೆಯಲ್ಲಿ ಹುದ್ದೆ ಪಡೆದೆ. ಕಳೆದ ವರ್ಷವಷ್ಟೆ ‘ಬಿ’ ಗ್ರೂಪ್ ಹುದ್ದೆಯನ್ನು ಕೂಡ ಅಲಂಕರಿಸಿದೆ. ಇದಕ್ಕೆಲ್ಲಾ ಕ್ರೀಡೆಯೇ ಕಾರಣ. ಇಂದಿನ ದಿನಗಳಲ್ಲಿ ಕ್ರೀಡೆಯಲ್ಲಿ ಹತ್ತಾರು ಅವಕಾಶಗಳಿದ್ದು, ಇವುಗಳನ್ನು ಸದ್ಬಳಕೆ ಮಾಡಿಕೊಳ್ಳುವ ಮೂಲಕ ಉತ್ತಮ ಜೀವನ ರೂಪಿಸಿಕೊಳ್ಳಿ ಎಂದು ಮಕ್ಕಳಿಗೆ ಸಂದೇಶ ನೀಡಿದರು. ಈ ವೇಳೆ ರೋಟರಿ ಮಿಡ್ ಟೌನ್ ಅಧ್ಯಕ್ಷ ಕೆ.ಎಲ್. ರಾಕೇಶ್ ಬಾಬು, ಕಾರ್ಯದರ್ಶಿ ಭಾಸ್ಕರ್ ಸೈನಿಕ್, ಆರ್‌ಟಿಐನ್ ಅಯ್ಯಣ್ಣ ಉಪಸ್ಥಿತರಿದ್ದರು.


ಅಂತಾರಾಷ್ಟ್ರೀಯ ಖೋ-ಖೋ ಕ್ರೀಡಾಪಟು ಬಿ.ಚೈತ್ರಾ ಅವರಿಗೆ ಸುಶ್ಮಿತಾ ಪವಾರ್ ‘ರೋಟರಿ ಮಿಡ್‌ಟೌನ್ ವಿಕ್ರಿಯೇಟ್ ಸ್ಪೇಸ್ ಸ್ಪೋರ್ಟ್ಸ್ ಅವಾರ್ಡ್–2026’ ನೀಡಿ ಗೌರವಿಸಿದರು.

ನಕ್ಕರೆ ಅದೇ ಸ್ವರ್ಗ

ಟೀಚರ್ : ಕರೆಂಟು ಇಲ್ಲದೇ ಹೋಗಿದ್ರೆ ಏನಾಗುತ್ತಿತ್ತು?
ಪಪ್ಪು : ರಾತ್ರಿ ವೇಳೆ ಕ್ಯಾಂಡಲ್ ಹಿಡ್ಕೊಂಡು ಟಿವಿ ನೋಡಬೇಕಾಗುತ್ತಿತ್ತು.

ಮೈಸೂರು ಮಿತ್ರ

ಗುರುವಾರ, ಮೇ 28, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಬದುಕು ಹೇಗಿರಬೇಕು ಎಂದರೆ, ಬೆಳಗ್ಗೆ ಎದ್ದಾಗ ದೃಢವಾಗಿರಬೇಕು. ರಾತ್ರಿ ಮಲಗುವಾಗ ಆತ್ಮತೃಪ್ತಿ ಇರಬೇಕು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಪೀತಾಂಬರ ಉಟ್ಟರೂ ಕೊತ್ತಂಬರಿ ಮಾರೋದು ತಪ್ಪಲಿಲ್ಲ.

ನಿಮ್ಮ ಪತ್ರಗಳು

ಮೆಡಿಕಲ್ ಸ್ಟೋರ್‌ಗಳ ಬಂದ್ ಎಷ್ಟು ಸರಿ?

ಮಾನ್ಯರೆ,

ಇ–ಫಾರ್ಮಸಿ ಹಾಗೂ ಆನ್‌ಲೈನ್ ಔಷಧ ಮಾರಾಟ ವಿರೋಧಿಸಿ ಬುಧವಾರ ಅಖಿಲ ಭಾರತ ಔಷಧ ವ್ಯಾಪಾರಿಗಳ ಸಂಘಟನೆ (ಎಐಒಸಿಡಿ) ದೇಶಾದ್ಯಂತ ಮೆಡಿಕಲ್ ಸ್ಟೋರ್ ಬಂದ್ ಮಾಡಲು ಕರೆ ನೀಡಿತ್ತು.

ಇ–ಫಾರ್ಮಸಿಗಳು ಶೇ.40% ರವರೆಗೆ ರಿಯಾಯಿತಿ ನೀಡುವುದರಿಂದ ಮೆಡಿಕಲ್ ಸ್ಟೋರ್ ನವರಿಗೆ ನಷ್ಟವಾಗುತ್ತದೆಂಬುದು ಅವರ ದುರಾಲೋಚನೆಯಲ್ಲವೇ?

ಆನ್‌ಲೈನ್ ಔಷಧ ಮಾರಾಟದಿಂದ ಗ್ರಾಹಕರಿಗೆ ಯಾವ ತೊಂದರೆಯೂ ಆಗದು.ಈ–ಫಾರ್ಮಸಿಗಳು 40% ವರೆಗೆ ರಿಯಾಯಿತಿ ಕೊಡುವ ಹಾಗೆಯೇ ಮೆಡಿಕಲ್ ಸ್ಟೋರಿನವರೂ ಗ್ರಾಹಕರಿಗೆ ರಿಯಾಂಯತಿ ಕೊಡಬಹುದಲ್ಲವೇ?

ಇ–ಫಾರ್ಮಸಿ ಹಾಗೂ ಆನ್ ಲೈನ್ ಔಷಧ ಮಾರಾಟಗಾರರು 40% ರಿಯಾಯಿತಿ ನೀಡುವುದರಿಂದ ಮೆಡಿಕಲ್ ಸ್ಟೋರ್ ನವರ ಅಕ್ರಮ ಲಾಭಕ್ಕೆ ಅಡ್ಡಿಯಾದರೆ ಅದಕ್ಕೆ ಯಾರು ಹೊಣೆ? ಮೆಡಿಕಲ್ ಸ್ಟೋರ್‌ನವರೇ ಹೊಣೆ.

ಹೊಟ್ಟೆ ನೋವು, ಹಲ್ಲು ನೋವು, ಜ್ವರ, ಮೈಕೈ ನೋವು, ವಾಂತಿ–ಭೇದಿ, ಶೀತ, ನೆಗಡಿ, ಕೆಮ್ಮು, ಚರ್ಮರೋಗ ಇತ್ಯಾದಿಗಳಿಂದ ಬಳಲುವ ಗ್ರಾಹಕರು ವೈದ್ಯರ ಬಳಿ ಹೋಗುವ ಬದಲು ನೇರವಾಗಿ ಮೆಡಿಕಲ್ ಸ್ಟೋರಿಗೆ ಬಂದು ತಮ್ಮ ಸಮಸ್ಯೆಗಳನ್ನು ಹೇಳುತ್ತಾರೆ. ಮೆಡಿಕಲ್ ಸ್ಟೋರಿನವರು ಬೃಹಸ್ಪತಿಗಳಂತೆ ಔಷಧ ನೀಡುತ್ತಾರೆ.ವೈದ್ಯರ ಸಲಹೆಯಿಲ್ಲದೆ ಔಷಧ ನೀಡಿ ವೈದ್ಯರ ಹೊಟ್ಟೆಗೆ ಕಲ್ಲು ಹಾಕುವ ಮೆಡಿಕಲ್ ಸ್ಟೋರ್‌ಗಳ ಹೊಟ್ಟೆ ಮೇಲೆ ಹೊಡೆಯಲು ಇ–ಫಾರ್ಮಸಿ ಹಾಗೂ ಆನ್ ಲೈನ್ ಔಷಧ ಮಾರಾಟಗಾರರು ನಿಂತಿದ್ದಾರೆ.

ಔಷಧ ಚೀಟಿಯಿಲ್ಲದೆ ಮೆಡಿಕಲ್ ಸ್ಟೋರ್ ನವರು ಗ್ರಾಹಕರಿಗೆ ಔಷಧ ನೀಡುವುದರಿಂದ ವೈದ್ಯರಿಗೆ ನಷ್ಟವಾಯಿತೆಂದು ವೈದ್ಯಕೀಯ ಸಂಘಟನೆಯವರು ಬಂದ್ ಗೆ ಕರೆ ನೀಡಿದರೆ ಗ್ರಾಹಕರ ಕಥೆ ಏನಾಗಬೇಕು?

ಆನ್ ಲೈನ್ ಔಷಧ ಮಾರಾಟ ಹಾಗೂ ಇ–ಫಾರ್ಮಸಿಯಿಂದ ಗ್ರಾಹಕರಿಗೆ ತೊಂದರೆಯಾದರೆ ಗ್ರಾಹಕರು ಕಾನೂನು ಕ್ರಮ ಕೈಗೊಳ್ಳಬಹುದೇ ಹೊರತು ಮೆಡಿಕಲ್ ಸ್ಟೋರ್ ನವರ ಭಾರಿ ಲಾಭಕ್ಕೆ ಹೊಡೆತ ಬೀಳುತ್ತದೆ ಎಂಬ ಕಾರಣಕ್ಕೆ ಇ–ಫಾರ್ಮಸಿಯನ್ನು ನಿಷೇಧಿಸಲಾಗದು.

ಡ್ಯಾಮ್ನಮ್ ಸಿನೆ ಇಂಜುರಿಯಾ (Damnum Sine Injuria) ಎನ್ನುವುದು ಅಪಕೃತ್ಯಗಳ ಕಾನೂನಿನ (Law of Torts) ಒಂದು ಪ್ರಮುಖ ಲ್ಯಾಟಿನ್ ಗಾದೆ ಯಾಗಿದ್ದು, ಇದರ ಅರ್ಥ "ಕಾನೂನುಬಾಹಿರವಲ್ಲದ ಕೃತ್ಯದಿಂದ ಉಂಟಾಗುವ ಹಾನಿ" ಅಂದರೆ ಕಾನೂನು ಬಾಹಿರವಲ್ಲದ ಯಾವುದೇ ಕೃತ್ಯದಿಂದ ಬೇರೆಯ ವರಿಗೆ ನಷ್ಟವಾದರೆ ಅದಕ್ಕೆ ಯಾರನ್ನೂ ಹೊಣೆಯಾಗಿಸಲಾಗದು.

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು

ಟ್ರಾಫಿಕ್ ಸಿಗ್ನಲ್ ಅವಶ್ಯಕತೆ

ಮಾನ್ಯರೆ,

ಮೈಸೂರು ನಗರದಲ್ಲಿ ಹಲವೆಡೆ ಅನಾವಶ್ಯಕವಾಗಿ ಟ್ರಾಫಿಕ್ ಸಿಗ್ನಲ್ ಅಳವಡಿಸಲಾಗಿದೆ. ಹೆಜ್ಜೆ ಹೆಜ್ಜೆಗೂ ನಿಂತು ಹೊರಡಬೇಕಿದೆ.ಇದರಿಂದ ಸಮಯ, ಇಂಧನ ವ್ಯರ್ಥವಾಗುತ್ತಿದೆ. ಎಂದು ಅನೇಕರು ದೂರುತ್ತಿದ್ದಾರೆ,

ಆದರೆ ನಗರದ ಬಹುತೇಕ ಎಲ್ಲಾ ಜಂಕ್ಷನ್‌ಗಳಲ್ಲಿ ವಾಹನ ದಟ್ಟಣೆ ಸಮಸ್ಯೆ ಇದೆ. ಅದರಲ್ಲೂ ಬೆಳಿಗ್ಗೆ ಶಾಲೆ, ಕಚೇರಿ ವೇಳೆ,ಹಾಗೂ ಸಂಜೆ ವಿಪರೀತ ದಟ್ಟಣೆಯಿಂದ ಸಮಸ್ಯೆಯಾಗುತ್ತಿದೆ. ಅದರಲ್ಲೂ ಮದುವೆ, ಶುಭ ಕಾರ್ಯ ಗಳಿದ್ದಾಗ ಸಂಜೆ ವೇಳೆ ವಾಹನ ದಟ್ಟಣೆಯ ಸಮಸ್ಯೆ ಕಾಡುತ್ತದೆ. ಪ್ರತಿ ದಿನ ಹೊಸ ಹೊಸ ವಾಹನಗಳು ರಸ್ತೆಗಿಳಿಯುತ್ತಿವೆ. ಆದರೆ ವಾಹನ ಹೆಚ್ಚಳಕ್ಕೆ ತಕ್ಕಂತೆ ರಸ್ತೆ ವಿಸ್ತಾರವಾಗುತ್ತಿಲ್ಲ. ಬಡಾವಣೆಯ ಯಾವುದೋ ವೃತ್ತದಲ್ಲಿ ಅಪಘಾತ ವಾದಾಗ ಅಲ್ಲಿ ಟ್ರಾಫಿಕ್ ಸಿಗ್ನಲ್ ಇಲ್ಲ. ಆದ್ದರಿಂದಲೇ ಅಪಘಾತವಾಗಿದೆ. ಸಿಗ್ನಲ್ ಅಳವಡಿಸಿ.ಎಂದು ನಿವಾಸಿಗಳು ಮನವಿ ಮಾಡುತ್ತಾರೆ. ಇದು ವಾಸ್ತವ.

ವಾಹನ ದಟ್ಟಣೆ ಇಲ್ಲದ ಸಮಯ ದಲ್ಲಿ, ಹಾಗೂ, ದಟ್ಟಣೆ ಇಲ್ಲದ ವೃತ್ತ ಗಳಲ್ಲಿ ಅವುಗಳನ್ನು ಚಾಲೂ ಮಾಡದೆ ಇಟ್ಟರೆ ಅವಶ್ಯಕತೆ ಇದ್ದಾಗ ಉಪಯೋಗ ವಾಗುತ್ತದೆ. ಜೀವಕ್ಕೂ, ಸಮಯಕ್ಕೂ ಬೆಲೆ ಕಟ್ಟಲು ಸಾಧ್ಯವಿಲ್ಲ ನಿಜ. ಆದರೆ ಮೊದಲ ಆದ್ಯತೆ ಜೀವಕ್ಕೆ. ಅಪಘಾತವಾದಾಗ ಟ್ರಾಫಿಕ್ ಸಿಗ್ನಲ್ ಇಲ್ಲ ಎಂದು ಹೇಳುವವರು ನಾವೇ. ಟ್ರಾಫಿಕ್ ಸಿಗ್ನಲ್ ಅಳವಡಿಸಿದಾಗ ಅದು ಅನಾವಶ್ಯಕ ಎಂದು ಹೇಳುವವರು ಕೂಡ ನಾವೇ ಇದೆಂತಹ ವಿಪರ್ಯಾಸ!

–ಮುಳ್ಳೂರು ಪ್ರಕಾಶ್, ಕನಕದಾಸ ನಗರ, ಮೈಸೂರು.

ಪಾಲಿಕೆ, ಅರಣ್ಯ ಇಲಾಖೆ ನಾಲಾಯಕ್!?

ಮಾನ್ಯರೆ,

ಒಂದು ಇಂಟರ್‌ನ್ಯಾಷನಲ್ ಪ್ರಿಸ್ಕೂಲ್‌ನವರು ಇದೇ ಮೈಸೂರಲ್ಲಿ ಪ್ರವೇಶಾತಿ ಗಾಗಿ ಜಾಹೀರಾತು ಪೋಸ್ಟರ್‌ಗಳನ್ನು ರಸ್ತೆ ಬದಿಯ ಮರಗಳಿಗೆ ಮೊಳೆ ಹೊಡೆದು ಹಾಕಿದ್ದರು. ಇವರಿಗೆ ಅಧಿಕಾರ ಕೊಟ್ಟವರು ಯಾರು? ಏನು ಧೈರ್ಯ ಇವರದು!? ಬಹುಶಃ ಇವರಿಗೂ ತಿಳಿದಿರಬೇಕು ಮೈಸೂರು ನಗರ ಪಾಲಿಕೆ, ಅರಣ್ಯ ಇಲಾಖೆ ನಾಲಾಯಕ್ ಎಂಬುದು.

ಇದಪ್ಪಾ 'ಧಂ' ಮುಖ್ಯಮಂತ್ರಿಗಳ ತವರಲ್ಲಿ ಏನು ಬೇಕಾದರೂ ನಡೆಯಬಹುದು ಎಂಬುದಕ್ಕೆ ಇದೊಂದು ಸಾಕ್ಷಿ.

–ರಾಮಚಂದ್ರ, ಒಂಟಿಕೊಪ್ಪಲ್, ಮೈಸೂರು.

ಬಿಪಿಎಲ್ ಆದಾಯ ಮಿತಿ ಹೆಚ್ಚಿಸಿ

ಮಾನ್ಯರೆ,

ರಾಜ್ಯಾದ್ಯಂತ ಹೊಸ ಬಿಪಿಎಲ್ ಕಾರ್ಡ್‌ಗಾಗಿ ಮೂರು ಲಕ್ಷ ಅರ್ಜಿಗಳು ನಾಲ್ಕು ವರ್ಷಗಳಿಂದ ವಿಲೇವಾರಿಯಾಗದೆ ಬಾಕಿ ಉಳಿದಿರುವುದು ತೀವ್ರ ಆತಂಕಕಾರಿ ಸಂಗತಿಯಾಗಿದೆ. ತಾಂತ್ರಿಕ ಮಾನದಂಡಗಳ ನೆಪದಲ್ಲಿ ಅರ್ಹ ಬಡ ಕುಟುಂಬಗಳು ಸರ್ಕಾರದ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ. ಈಗಾಗಲೇ ಅನರ್ಹರ ಐದು ಲಕ್ಷ ಕಾರ್ಡ್‌ಗಳನ್ನು ರದ್ದುಗೊಳಿಸಿರುವುದು ಶ್ಲಾಘನೀಯ. ಆದರೆ ಹೆಚ್ಚುತ್ತಿರುವ ಬೆಲೆ ಏರಿಕೆ ಮತ್ತು ಜೀವನ ವೆಚ್ಚಕ್ಕೆ ಅನುಗುಣವಾಗಿ ಆದಾಯದ ಮಿತಿಯನ್ನು ತಕ್ಷಣವೇ ಪರಿಷ್ಕರಿಸುವುದು ಅತ್ಯಗತ್ಯ.

ಬದಲಾಗುತ್ತಿರುವ ಆರ್ಥಿಕ ಪರಿಸ್ಥಿತಿಯಲ್ಲಿ ಬಿಪಿಎಲ್ ಕಾರ್ಡ್ ಪಡೆಯಲು ಕುಟುಂಬದ ವಾರ್ಷಿಕ ಆದಾಯ ಮಿತಿಯನ್ನು ಒಂದು ಲಕ್ಷದಿಂದ ಮೂರು ಲಕ್ಷಕ್ಕೆ ಹೆಚ್ಚಿಸಲು ಆಡಳಿತ ಸುಧಾರಣಾ ಆಯೋಗ ಮಾಡಿರುವ ಶಿಫಾರಸನ್ನು ಸರಕಾರ ಅನುಷ್ಠಾನ ಮಾಡಬೇಕು. ಇನ್ನೂ ಸರ್ಕಾರವು ಈ ಹಿನ್ನೆಲೆಯಲ್ಲಿ ವಿಳಂಬ ಮಾಡದೆ ಸೂಕ್ತ ನಿರ್ಧಾರ ಕೈಗೊಂಡು ಬಾಕಿ ಇರುವ ಲಕ್ಷಾಂತರ ಬಡವರ ಅರ್ಜಿಗಳನ್ನು ಕೂಡಲೇ ವಿಲೇವಾರಿ ಮಾಡಿ ನ್ಯಾಯ ಒದಗಿಸಬೇಕೆಂದು ಈ ಮೂಲಕ ಆಗ್ರಹಿಸುತ್ತೇನೆ.

–ಡಾ. ಎಚ್.ಕೆ.ವಿಜಯಕುಮಾರ್, ಮೈಸೂರು.

ಕರ್ನಾಟಕದ ಕಸ್ತೂರ ಬಾ 'ಯಶೋಧರಾ ದಾಸಪ್ಪ'



ಯಶೋಧರಾ ದಾಸಪ್ಪ

ನಮ್ಮ ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಪಾತ್ರ ಅತ್ಯಂತ ಪ್ರಮುಖವಾದದ್ದು. ಬ್ರಿಟಿಷರ ದಬ್ಬಾಳಿಕೆ, ದೌರ್ಜನ್ಯ, ಅಧಿಕಾರ ಶಾಹಿಯ ವಿರುದ್ಧ ಸತ್ಯ, ಅಹಿಂಸೆ ಹಾಗೂ ಅಸಹಕಾರದ ಮೂಲ ಮಂತ್ರಗಳನ್ನು ಉಸಿರಾಗಿಸಿಕೊಂಡು ಅನೇಕ ರೀತಿಯ ವಿಶಿಷ್ಟವಾದ ಜನಾಕರ್ಷಣೀಯ ಚಳವಳಿಗಳನ್ನು ರೂಪಿಸಿ ಹಿರಿಯರು, ಕಿರಿಯರು, ಬಡವರು, ಬಲ್ಲಿದರು, ಹೆಣ್ಣು, ಗಂಡುಗಳೆಂಬ ಭೇದ ಭಾವವಿಲ್ಲದೆ ಅಬಾಲವೃದ್ಧರಾದಿಯಾಗಿ ದೇಶದ ಪ್ರತಿಯೊಬ್ಬ ಪ್ರಜೆಯೂ ಈ ಸ್ವಾತಂತ್ರ್ಯ ಚಳವಳಿಯಲ್ಲಿ ಪಾಲ್ಗೊಳ್ಳುವಂತೆ ಮಾಡಿ ಸಮಸ್ತ ಭಾರತೀಯರನ್ನೂ ಜೊತೆ ಜೊತೆಯಲಿ ಕಿಂದರಿ ಜೋಗಿಯಂತೆ ಕರೆದೊಯ್ದವರು ಮಹಾತ್ಮ ಗಾಂಧೀಜಿ. ಹಾಗಾಗಿ ಭಾರತದ ಚರಿತ್ರೆಯಲ್ಲಿ 1919ರಿಂದ 1947ರವರೆಗಿನ ಕಾಲಘಟ್ಟವನ್ನು 'ಗಾಂಧಿಯುಗ' ಎಂದೇ ಕರೆಯಲಾಗುತ್ತದೆ. ಗಾಂಧೀಜಿಯವರ ಸ್ವಾತಂತ್ರ್ಯ ಹೋರಾಟದ ಮಹಾ ಸಂಗ್ರಾಮದ ಹಾದಿಯಲ್ಲಿ ಒಟ್ಟಾಗಿ ಹೆಜ್ಜೆ ಹಾಕಿದವರು ಜವಾಹರಲಾಲ್ ನೆಹರು, ಸರ್ದಾರ್ ವಲ್ಲಭ ಭಾಯ್ ಪಟೇಲ್, ಸುಭಾಷ್ ಚಂದ್ರ ಬೋಸ್, ಸರೋಜಿನಿ ನಾಯ್ಡು ಕಮಲಾದೇವಿ ಚಟ್ಟೋಪಾಧ್ಯಾಯ ಸೇರಿದಂತೆ ಸಹಸ್ರ ಸಹಸ್ರ ಮಂದಿ ನೇತಾರರು. ಇವರೆಲ್ಲರ ಜೊತೆ ಮಹಾತ್ಮ ಗಾಂಧೀಜಿಯ ವೈಯಕ್ತಿಕ ಜೀವನದಲ್ಲಿ ಜೀವ ದಾತೆಯಂತೆ ಹೆಚ್ಚಿನ ಪ್ರಭಾವ ಬೀರಿದವರು ಅವರ ಮಡದಿ ಕಸ್ತೂರಬಾ ಗಾಂಧಿ.

ಕಸ್ತೂರ ಬಾ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯ ಮಡದಿಯಷ್ಟೇ ಆಗಿರಲಿಲ್ಲ. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯ ವೀರ ಸೇನಾನಿಯೂ ಹೌದು. ಗಾಂಧಿ ಸೇವಾಗ್ರಾಮದ ಆಶ್ರಮದಲ್ಲಿದ್ದ ಮಹಿಳಾ ಸ್ವಾತಂತ್ರ್ಯ ಹೋರಾಟಗಾರರಿಗೆ ಸ್ಫೂರ್ತಿಯ ಚಿಲುಮೆಯಂತೆ ನಿಂತು ದೇಶಕ್ಕಾಗಿ ಪತಿಯೊಡನೆ ತಮ್ಮನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡು ಕರ್ಮಯೋಗಿ ಎಂದೇ ಹೆಸರಾಗಿದ್ದವರು. ಇಂತಹ ಮಹಾಚೇತನ ಗಾಂಧಿ ಪತ್ನಿ ಕಸ್ತೂರಬಾ ಗಾಂಧಿಯ ನಿಕಟವರ್ತಿಯಾಗಿ ಅವರ ಪ್ರಭಾವಲಯದಲ್ಲಿದ್ದ ಅಪ್ಪಟ ಗಾಂಧಿವಾದಿ ಯಶೋಧರಾ ದಾಸಪ್ಪನವರು ಕರ್ನಾಟಕದ ಕಸ್ತೂರಬಾ ಗಾಂಧಿ ಎಂದೇ ನಾಡಿನ ಉದ್ದಗಲಕ್ಕೂ ಪ್ರಸಿದ್ಧರು.

ಸ್ವಾತಂತ್ರ್ಯ ಹೋರಾಟಗಾರ್ತಿ, ಕರ್ನಾಟಕ ಏಕೀಕರಣ ಹೋರಾಟಗಾರ್ತಿಯಾಗಿ, ಗಾಂಧೀ ಮಾರ್ಗದಲ್ಲಿ ನಡೆದು ಸಮಾಜ ಸೇವಕಿಯಾಗಿ ಮತ್ತು ಕರ್ನಾಟಕ ರಾಜ್ಯದ ಮೊದಲ ಮಹಿಳಾ ಮಂತ್ರಿಯಾಗಿ ಸೇವೆ ಸಲ್ಲಿಸಿದವರು ಯಶೋಧರಾ ದಾಸಪ್ಪ. ಅವರು 1905ರ ಮೇ 28 ರಂದು ಬೆಂಗಳೂರಿನಲ್ಲಿ ಜನಿಸಿದರು. ಜನಸೇವೆಯೇ ಜನಾ ರ್ದನನ ಸೇವೆಯೆಂದು ನಂಬಿದ್ದ ಹಾಗೆಯೇ ನಡೆದು ಕೊಳ್ಳುತ್ತಿದ್ದ ಎಲ್ಲರ ಪಾಲಿನ ಆಪದ್ಬಾಂಧವ ಕುಟುಂಬವಾಗಿ ಖ್ಯಾತಿಗಳಿಸಿದ್ದ ದೊಡ್ಡ ಬಳ್ಳಾಪುರ ತಾಲೂಕಿನ ಕಲ್ಲುದೇವನ ಹಳ್ಳಿಯ ಚಿಕ್ಕಣ್ಣೇಗೌಡರ ವಂಶದ ಕುಡಿ ಇವರು. ತಂದೆ ಮೈಸೂರು ಮಹಾರಾಜರ ಒಡನಾಡಿಯಾಗಿ ರಾಜರಂತೆಯೇ ಇದ್ದು ಜನಸೇವಕರಾಗಿದ್ದ ಸುಪ್ರಸಿದ್ಧ ಸಮಾಜ ಸೇವಕರಾದ ಕೆ.ಎಚ್. ರಾಮಯ್ಯ ಹಾಗೂ ತಾಯಿ ಸುಸಂಸ್ಕೃತ ಮನೆತನದ ರೇವಮ್ಮ. ಇವರ ಸುಪುತ್ರಿಯೇ ಯಶೋಧರಾ ದಾಸಪ್ಪ. ಬುದ್ಧನ ಮಾನವೀಯ ಚಿಂತನೆಗಳ ಮೇರು ವ್ಯಕ್ತಿತ್ವದ ಕೆ.ಹೆಚ್.ರಾಮಯ್ಯ ದಂಪತಿ ತಮ್ಮ ಸುಪುತ್ರಿಗೆ ಪ್ರೀತಿಯಿಂದ ಇಟ್ಟ ಹೆಸರು ಯಶೋಧರೆ. ಇದು ಭಗವಾನ್ ಬುದ್ಧದೇವನ ಆದರ್ಶ ಪತ್ನಿಯ ಹೆಸರು. ಬಹುಶಃ ಆ ದಿನಗಳಲ್ಲಿ ಇಂಥ ಹೆಸರನ್ನು ಅಷ್ಟಾಗಿ ಯಾರೂ ಇಡುತ್ತಿರಲಿಲ್ಲ. ಈಗಲೂ ಅಷ್ಟೆ, ಇದೊಂದು ಅಪರೂಪದ ನಾಮಾಂಕಿತ. ಬುದ್ಧನ ಮಾನವೀಯ ತತ್ವಾನುಸಾರಿ ಕೆ.ಹೆಚ್. ರಾಮಯ್ಯ ದಂಪತಿಗಳ ಬುದ್ಧ ಮತ್ತು ಯಶೋಧರೆಯ ತತ್ವಾದರ್ಶಗಳ ಸಂಕೇತವಿದು.

ಇಂದು ಜನುಮ ದಿನ

ಯಶೋಧರಾ ದಾಸಪ್ಪ ಅವರು ಚಿನ್ನದ ಚಮಚವನ್ನು ಬಾಯಲ್ಲಿಟ್ಟುಕೊಂಡು ಬಂದವರೆನ್ನುತ್ತಾರಲ್ಲ ಹಾಗೆ ಆಗರ್ಭ ಶ್ರೀಮಂತ ಕುಟುಂಬದಲ್ಲಿ ಜನಿಸಿದರೂ, ಓರ್ವ ಸಾಮಾನ್ಯ ಸಾಮಾಜಿಕ ಕಾರ್ಯಕರ್ತೆಯಾಗಿ ಭಾರತೀಯ ಸ್ವಾತಂತ್ರ್ಯ ಹೋರಾಟಕ್ಕೆ ಸೇರಲು ನಿರ್ಧರಿಸಿದರು. ಅವರು ಲಂಡನ್ ಮಿಷನ್ ಸ್ಕೂಲ್ ಮತ್ತು ಮದ್ರಾಸಿನ ಕ್ವೀನ್ ಮೇರಿ ಕಾಲೇಜಿ ನಲ್ಲಿ ವಿದ್ಯಾರ್ಥಿಯಾಗಿದ್ದರು.

ಯಶೋಧರಾ ದಾಸಪ್ಪ ಅವರು ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ದಿನದಿಂದ ದಿನಕ್ಕೆ ಸಕ್ರಿಯ ರಾಗುತ್ತಾ ಹೋದರು. ಇವರು ಕೆಚ್ಚಿನಿಂದ ಪಾಲ್ಗೊಂ ಡಿದ್ದ 1930ರ ಅರಣ್ಯ ಸತ್ಯಾಗ್ರಹ ಚಳವಳಿಯಲ್ಲಿ 1200ಕ್ಕೂ ಹೆಚ್ಚು ಜನ ಸೆರೆವಾಸಕ್ಕೆ ಸೇರಿದರು. 1938ರ ವಿದುರಾಶ್ವತ್ಥ ಚಳುವಳಿಯಲ್ಲಿ 35 ಮಂದಿ ಪೊಲೀಸ್ ಗುಂಡಿನ ದಾಳಿಯಲ್ಲಿ ಸಾವನ್ನಪ್ಪಿದರು. ಈ ಚಳವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಇವರೂ ಸಹ ಕಠಿಣವಾದ ಸೆರೆವಾಸ ಅನುಭವಿಸಿದ್ದರು.

ಯಶೋಧರಾ ಅವರ ಮನೆಯು ಸ್ವಾತಂತ್ರ್ಯ ಸಂಗ್ರಾಮದಲ್ಲಿದ್ದ ಭೂಗತ ಸತ್ಯಾಗ್ರಹಿಗಳ ಚಟುವಟಿಕೆ ಕೇಂದ್ರವಾಗಿತ್ತು. ಸ್ವಾತಂತ್ರ್ಯ ಆಂದೋಲನಕಾರರ ಮೇಲೆ ಕ್ರೂರ ಕಾರ್ಯಾಚರಣೆಗಳಿಗೆ ಕುಖ್ಯಾತನಾಗಿದ್ದ ಹ್ಯಾಮಿಲ್ಟನ್ ಹೆಸರನ್ನು ಕಟ್ಟಡವೊಂದಕ್ಕೆ ಇಡಲು ನಿರ್ಧರಿಸಿದಾಗ ಯಶೋಧರಾ ಅವರು ಸರ್ಕಾರದ ವಿರುದ್ಧ ಅನೇಕ ಆಕ್ರಮಣಕಾರಿ ಭಾಷಣಗಳನ್ನು ಮಾಡಿದರು. ಯಶೋಧರಾ ದಾಸಪ್ಪ ಅವರು ಮುಖ್ಯಮಂತ್ರಿಗಳಾಗಿದ್ದ ಎಸ್.ಆರ್.ಕಂಠಿ ಮತ್ತು ಎಸ್.ನಿಜಲಿಂಗಪ್ಪ ಅವರ ಕರ್ನಾಟಕ ರಾಜ್ಯ ಸರ್ಕಾರಗಳಲ್ಲಿ ಸಚಿವೆಯಾಗಿ ಸೇವೆ ಸಲ್ಲಿಸಿದ್ದರು. ನಿಜಲಿಂಗಪ್ಪನವರ ಸಚಿವ ಸಂಪುಟದಲ್ಲಿ ಹಿರಿಯ ಸಚಿವೆಯಾಗಿ ಸೇವೆ ಸಲ್ಲಿಸುತ್ತಿದ್ದ ಸಂದರ್ಭದಲ್ಲಿ ಕರ್ನಾಟಕ ರಾಜ್ಯದಲ್ಲಿ ಪಾನನಿರೋಧದ ಕುರಿತಾಗಿದ್ದ ಆಜ್ಞೆಯನ್ನು ತೆರವುಗೊಳಿಸಿದ್ದನ್ನು ವಿರೋಧಿಸಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

> ಸ್ವಾತಂತ್ರ್ಯ ಹೋರಾಟಗಾರ್ತಿ ಯಶೋಧರಾ ದಾಸಪ್ಪ, ನೊಂದು ಬೆಂದವರಿಗಾಗಿ, ಸಾಮಾಜಿಕ ಸುಧಾರಣೆಗಾಗಿ ಅರಸೀಕೆರೆಯಲ್ಲಿ ಕಸ್ತೂರಬಾ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ನಿರ್ಮಾಣ ಮಾಡಿ ಉಳಿದ ಜೀವಿತಾವಧಿಯನ್ನು ಸಮಾಜ ಮುಖಿ ಕೆಲಸಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ದೇಶ ಕಟ್ಟುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ಯಶೋಧರಾ ಅವರು ಖ್ಯಾತ ವಕೀಲರೂ ಹಾಗೂ ಜವಾಹರಲಾಲ್ ನೆಹರು ಅವರ ಸರ್ಕಾರದಲ್ಲಿ ಸಚಿವರಾಗಿದ್ದ ಎಚ್.ಸಿ.ದಾಸಪ್ಪ ಅವರನ್ನು 1926ರಲ್ಲಿ ವಿವಾಹವಾಗಿದ್ದರು. ಈ ದಂಪತಿಯ ಕಿರಿಯ ಪುತ್ರ ತುಳಸಿದಾಸ್‌ದಾಸಪ್ಪ ಅವರು ಚರಣ್ ಸಿಂಗ್ ಅವರ ಕೇಂದ್ರ ಸಂಪುಟದಲ್ಲಿ ರಾಜ್ಯ ಸಚಿವರಾಗಿದ್ದರು. ಯಶೋಧರಾ ದಾಸಪ್ಪ ಅವರಿಗೆ ಭಾರತ ಸರ್ಕಾರವು 1972ರಲ್ಲಿ ಪದ್ಮಭೂಷಣ ಗೌರವವನ್ನು ಸಲ್ಲಿಸಿದೆ. ಯಶೋಧರಾದಾಸಪ್ಪ ಅವರು 1980ರ ವರ್ಷದಲ್ಲಿ ನಿಧನರಾದರು. ಇಂದು ಕೂಡಾ ಅವರ ಹೆಸರಿನಲ್ಲಿ ಅನೇಕ ಸಮಾಜಮುಖಿ ಕಾರ್ಯಗಳು ನಡೆಯುತ್ತಿವೆ.

ಅವರು ಕರ್ನಾಟಕದಲ್ಲಿ ಕ್ಯಾಬಿನೆಟ್ ಸಚಿವರಾದ ಮೊದಲ ಮಹಿಳೆಯಾಗಿ ಜನಪರ ಮತ್ತು ಸಾಮಾಜಿಕ ಅನಿಷ್ಟ ಪದ್ಧತಿಗಳ ವಿರುದ್ಧ ವಿಶೇಷವಾಗಿ ಸ್ತ್ರೀಪರ ಕಾಳಜಿಯಿಂದ ಯೋಜನಾಬದ್ಧವಾಗಿ ಬದ್ಧತೆಯಿಂದ ಕೆಲಸ ಮಾಡಿದವರು. ಒಟ್ಟಾರೆ ಜನಪರ ಕಾಳಜಿಯ ದಿಟ್ಟ ಮಹಿಳೆ ಎಂಬ ಹೆಗ್ಗಳಿಕೆಗೂ ಪಾತ್ರರಾದವರು. ವಿಪರ್ಯಾಸವೆಂದರೆ ಗಾಂಧಿ ತತ್ವಕ್ಕೆ ಮಾರು ಹೋಗಿದ್ದ ಯಶೋಧರಾ ದಾಸಪ್ಪ ದಂಪತಿ ಸ್ವಾತಂತ್ರ್ಯ ಹಾಗೂ ದೇಶ ಸೇವೆ ಬಗ್ಗೆ ಜನ ಜಾಗೃತಿ ಮೂಡಿ ಸುತ್ತಿದ್ದ ಇವರ ಪ್ರಾಮಾಣಿಕ ಸಮಾಜ ಸೇವೆ ಹಾಗು ದೇಶ ಸೇವೆಯ ಕೆಲಸಕ್ಕೆ ಬ್ರಿಟೀಷ್ ಸರ್ಕಾರ ರಾಜದ್ರೋಹದ ಪಟ್ಟವನ್ನೂ ಕಟ್ಟಿದ್ದರು. ಒಮ್ಮೆ ಯಶೋಧರಾ ದಾಸಪ್ಪ ದಂಪತಿ ಗಾಂಧಿ ಸೇವಾ ಗ್ರಾಮಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಮಹಾತ್ಮ ಗಾಂಧಿಯವರು ದಲಿತ ಸಮುದಾಯದ ಅನಾಥ ಮಗುವೊಂದನ್ನು ಪೋಷಣೆಗೆ ಇವರಿಗೆ ನೀಡಿರುತ್ತಾರೆ. ಅದನ್ನು ಪ್ರಸಾದವೆಂಬಂತೆ ಸ್ವೀಕರಿಸುವ ದಂಪತಿ ತಮ್ಮ ಎರಡು ಮಕ್ಕಳ ಜತೆ ಮೂರನೆಯವರಾಗಿ ಕಂಡು ಮಗುವನ್ನು ಸಾಕಿ ಸಲಹಿ ಪ್ರಾಯಕ್ಕೆ ಬಂದಾಗ ಮದುವೆ ಮಾಡುತ್ತಾರೆ. ತಮ್ಮ ಆಸ್ತಿಯನ್ನು ಸಹ ಕೊಟ್ಟ ಧೀಮಂತ ವ್ಯಕ್ತಿತ್ವ ದಾಸಪ್ಪ ದಂಪತಿಗಳದು. 1964ರಲ್ಲಿ ದಾಸಪ್ಪನವರು ಹೃದಯಾ ಘಾತದಿಂದ ನಿಧನ ಹೊಂದುತ್ತಾರೆ. ನಂತರದ ದಿನಗಳಲ್ಲಿ ಪತಿಯ ಆಶಯದಂತೆ ನಾಡಿಗಾಗಿ ಸಂಪೂರ್ಣ ತಮ್ಮನ್ನು ತೊಡಗಿಸಿ ಕೊಂಡು ಸೇವಾ ಪಥದಲ್ಲಿ ಮುಂದುವರಿದು ನೊಂದವರ ಕಂಬನಿವರೆಸುವ ಕೈಗಳಾಗುತ್ತಾರೆ.

ಮಂತ್ರಿಯಾಗಿ ಯಶೋಧರಾ ದಾಸಪ್ಪ

1962ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಗಂಡಸಿ ವಿಧಾನಸಭಾ ಕ್ಷೇತ್ರದಿಂದ ಮೈಸೂರು ರಾಜ್ಯದ ವಿಧಾನಸಭೆಗೆ ಸರಿ ಸುಮಾರು 11,498 ಮತಗಳ ಅಂತರದಿಂದ ಆಯ್ಕೆಗೊಂಡು ಪ್ರಥಮವಾಗಿ ಪಾದಾರ್ಪಣೆ ಮಾಡುತ್ತಾರೆ. ಯಶೋಧರಾ ದಾಸಪ್ಪ ನವರು ಎಸ್.ನಿಜಲಿಂಗಪ್ಪ ಅವರ ಸಂಪುಟದಲ್ಲಿ ಸಮಾಜ ಕಲ್ಯಾಣ ಸಚಿವರಾಗಿರುತ್ತಾರೆ. ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪ ಅವರು ಪಾನನಿರೋಧ ಕಾಯ್ದೆ ವಾಪಸ್ ಪಡೆಯುವ ವಿಷಯದಲ್ಲಿ ಅನುಮೋದನೆ ಪಡೆಯಲು 1969ರಲ್ಲಿ ಒಮ್ಮೆ ಮಂತ್ರಿಮಂಡಲದ ಸಭೆ ಕರೆದಿದ್ದರು. ಈ ಸಂದರ್ಭದಲ್ಲಿ ಕಳ್ಳಬಟ್ಟಿಯಿಂದ ನೊಂದವರ ಕಣ್ಣು ಮತ್ತು ಕಿವಿಗಳೆರಡೂ ಆಗಿದ್ದ ಯಶೋಧರಾ ದಾಸಪ್ಪ ಅವರು ಇದನ್ನು ಪ್ರಬಲವಾಗಿ ವಿರೋಧಿಸಿದ್ದರು. ಚುನಾವಣೆಗೂ ಮುನ್ನ ಗಾಂಧಿ ಕರೆಗೆ ಓಗೊಟ್ಟು ಚಿತ್ರದುರ್ಗ ಜಿಲ್ಲೆಯ ತುರುವನೂರಿನಲ್ಲಿ ಈಚಲು ಮರ ಕಡಿಯುವ ಚಳವಳಿಯಲ್ಲಿ ಭಾಗವಹಿಸಿದ್ದ ನಿಜ ಲಿಂಗಪ್ಪನವರು ಅಧಿಕಾರ ಬಂದಾಗ ಅವರು ಬದಲಾದ ಪರಿ ಕಂಡು ಯಶೋಧರಾ ದಾಸಪ್ಪ ನವರು ಅಕ್ಷರಶಃ ಕೆಂಡಾ ಮಂಡಲರಾಗುತ್ತಾರೆ. ಬದ್ಧತೆಗೆ ಹೆಸರಾದ ಮಹಾ ಸ್ವಾಭಿಮಾನಿಯಾದ ಅವರು ಒಂದು ಕ್ಷಣವೂ ಅಲ್ಲಿರದೆ ತಾನು ಮಂತ್ರಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುವುದಾಗಿ ಹೇಳಿ ಸ್ವಂತ ಕಾರಿನಲ್ಲಿ ಮಂತ್ರಿ ಮಂಡಲ ಸಭೆಗೆ ಹೋಗಿ ರಾಜೀನಾಮೆ ನೀಡಿ ಬರುತ್ತಾರೆ. ನೊಂದು ಬೆಂದವರಿಗಾಗಿ, ಸಾಮಾಜಿಕ ಸುಧಾರಣೆಗಾಗಿ ಅರಸೀಕೆರೆಯಲ್ಲಿ ಕಸ್ತೂರ ಬಾ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ನಿರ್ಮಾಣ ಮಾಡಿ ಉಳಿದ ಜೀವಿತಾವಧಿಯನ್ನು ಸಮಾಜಮುಖಿ ಕೆಲಸಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ದೇಶ ಕಟ್ಟುವಲ್ಲಿ ಪ್ರಮುಖ ಪಾತ್ರ ವಹಿಸಿದರು.



ಬನ್ನೂರು ಕೆ.ರಾಜು
ಸಾಹಿತಿ, ಪತ್ರಕರ್ತ
ಮೊ.94815 33167

ಮೇ 31ಕ್ಕೆ ಅಂಚೆ ನೌಕರರ ದ್ವೈವಾರ್ಷಿಕ ಅಧಿವೇಶನ

ಮೈಸೂರು,ಮೇ 27(ಎಂಕೆ)–ಅಖಿಲ ಭಾರತ ಅಂಚೆ ನೌಕರರ ಸಂಘದ ವತಿಯಿಂದ ಮೇ 31ರಂದು ಬೆಳಗ್ಗೆ 10.30ಕ್ಕೆ 41ನೇ ದ್ವೈವಾರ್ಷಿಕ ಅಧಿವೇಶನ ಹಮ್ಮಿಕೊಳ್ಳಲಾಗಿದೆ.

ನಗರದ ಸರಸ್ವತಿಪುರಂನಲ್ಲಿರುವ ಪ್ರಾದೇಶಿಕ ದೂರ ಸಂಪರ್ಕ ತರಬೇತಿ ಕೇಂದ್ರದಲ್ಲಿ ಅಧಿವೇಶನ ನಡೆಯಲಿದ್ದು, ಸಂಸದ ಯದುವೀರ್ ಒಡೆಯರ್ ಉದ್ಘಾಟಿಸಲಿದ್ದಾರೆ. ಅಖಿಲ ಭಾರತ ಅಂಚೆ ನೌಕರರ ಸಂಘದ ಉಪಾಧ್ಯಕ್ಷ ಎನ್.ಭೈರಯ್ಯ ಅಧ್ಯಕ್ಷತೆ ವಹಿಸಲಿದ್ದು, ಮೈಸೂರು ವಿಭಾಗದ ಹಿರಿಯ ಅಂಚೆ ಅಧೀಕ್ಷಕ ಜಿ.ಹರೀಶ್, ಕರ್ನಾಟಕ ವಲಯ ಅಧ್ಯಕ್ಷ ರವಿ ಜಿ.ಪಾಟೀಲ್ ಸೇರಿದಂತೆ ಇನ್ನಿತರೆ ಗಣ್ಯರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಚಂದ್ರನಲ್ಲಿ ಶಾಶ್ವತ ನೆಲೆಗೆ ನಾಸಾದಿಂದ 3 ಹಂತದ ಯೋಜನೆ ಘೋಷಣೆ

ವಾಷಿಂಗ್ಟನ್: ಯಶಸ್ವಿ ಚಂದ್ರಯಾನದ ನಂತರ, ಭೂಮಿಯ ನೈಸರ್ಗಿಕ ಉಪಗ್ರಹದಲ್ಲಿ ಶಾಶ್ವತ ನೆಲೆ ಸ್ಥಾಪಿಸುವ ಪ್ರಯತ್ನಗಳ ಭಾಗವಾಗಿ ನಾಸಾ ಮೂರು ಹಂತದ ಮಿಷನ್ ಅನ್ನು ಘೋಷಿಸಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ನಾಸಾ ಆಡಳಿತಾಧಿಕಾರಿ ಜೇರೆಡ್ ಐಸಾಕ್ ಮನ್, ಚಂದ್ರನ ಮೇಲೆ ಶಾಶ್ವತ ನೆಲೆ ಸ್ಥಾಪಿಸಲು 20 ಬಿಲಿಯನ್ ಡಾಲರ್ ಮೊತ್ತದ ಯೋಜನೆ ಅನಾವರಣಗೊಳಿಸಿದರು. ಈ ಯೋಜನೆಯು ಚಂದ್ರನ ಅಪಾಯಕಾರಿ ಪರಿಸರದಲ್ಲಿ ವಾಸಿಸಲು ಮತ್ತು ಕಾರ್ಯ ನಿರ್ವಹಿಸುವ ಕೌಶಲ್ಯ ಕರಗತ ಮಾಡಿ ಕೊಳ್ಳುವ ನಿಟ್ಟಿನಲ್ಲಿ ಪ್ರಯೋಗ ನಡೆಸಲು ರೋವರ್‌ಗಳು ಮತ್ತು ಡ್ರೋನ್‌ಗಳನ್ನು ಒಳಗೊಂಡಿರುತ್ತದೆ ಎಂದರು.



ಅಮೆರಿಕ ಚಂದ್ರನತ್ತ ಮರಳುತ್ತಿದೆ. ಚಂದ್ರನ ಅಂಗಳದಲ್ಲಿ ನೆಲೆ ನಿರ್ಮಾಣವಾಗಲಿದೆ. ಆಕಾಶದ ಜಗತ್ತಿನಲ್ಲಿ ಅಮೆರಿಕ ಮತ್ತು ಮಾನವರ ಮೊದಲ ನೆಲೆ ಇದಾಗಲಿದೆ 2028ರಲ್ಲಿ ಚಂದ್ರನ ಮೇಲೆ ಗಗನಯಾತ್ರಿಗಳನ್ನು ಇಳಿಸುವ ಗುರಿಯನ್ನು ನಾಸಾ ಹೊಂದಿದೆ. ಈ ವರ್ಷದ ಸೆಪ್ಟೆಂಬರ್‌ಗೆ ಮೊದಲು ಯೋಜಿಸಲಾಗಿ ರುವ ಮೂನ್ ಬೇಸ್–I ಮಿಷನ್‌ಗಾಗಿ ಬ್ಲೂ ಆರಿಜಿನ್‌ನ ಬ್ಲೂ ಮೂನ್ ಮಾರ್ಕ್ 1 ಎಂಡ್ಯೂರೆನ್ಸ್ ಲ್ಯಾಂಡರ್ ಆಯ್ಕೆ ಮಾಡಲಾಗಿದೆ ಎಂದು ಬಾಹ್ಯಾಕಾಶ ಸಂಸ್ಥೆ ತಿಳಿಸಿದೆ.

ಕುಂಭಾಭಿಷೇಕ, ಅಖಂಡ; ಮಹಾ ಸುದರ್ಶನ ಹೋಮ





ಮೈಸೂರು ವಿಜಯನಗರದಲ್ಲಿರುವ ಶ್ರೀ ಯೋಗಾ ನರಸಿಂಹಸ್ವಾಮಿ ದೇವಾಲಯದಲ್ಲಿ ದೇವಾಲಯದ ಸಂಸ್ಥಾಪಕರಾದ ನಾಡೋಜ ಪ್ರೊ.ಡಾ.ಭಾಷ್ಯಂ ಸ್ವಾಮೀಜಿ, ಪ್ರಧಾನ ಅರ್ಚಕರಾದ ಶೇಷಾದ್ರಿ ಹಾಗೂ ಆಡಳಿತಾಧಿಕಾರಿ ಎನ್.ಶ್ರೀನಿವಾಸನ್ ಸಮ್ಮುಖದಲ್ಲಿ ಶ್ರೀ ಸ್ವಾಮಿಯ ಕುಂಭಾಭಿಷೇಕ ಮಹೋತ್ಸವದ ಅಂಗವಾಗಿ ಅಖಂಡ ಮಹಾ ಸುದರ್ಶನ ಹೋಮ ವಿಶೇಷ ಪೂಜಾ ಕಾರ್ಯಗಳೊಂದಿಗೆ ಜರುಗಿತು. ಈ ವೇಳೆ ವರನಟ ಡಾ.ರಾಜ್‌ಕುಮಾರ್ ಅವರ ಅಳಿಯ ಗೋವಿಂದರಾಜು, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ರಘುಲಾಲ್ ಕಂಪನಿಯ ಮುಖ್ಯಸ್ಥರಾದ ರಾಘವನ್, ಚಾಮುಂಡಿಬೆಟ್ಟದ ದೇವಾಲಯದ ಪ್ರಧಾನ ಅರ್ಚಕ ಶಶಿಶೇಖರ್ ದೀಕ್ಷಿತ್, ಚಾರ್ಟರ್ಡ್ ಅಕೌಂಟೆಂಟ್ ಲಕ್ಷ್ಮೀಶ್ ಇನ್ನಿತರರು ಉಪಸ್ಥಿತರಿದ್ದರು. ಅಲ್ಲದೆ, ಭಕ್ತಾದಿಗಳಿಗೆ ಅನ್ನಸಂತರ್ಪಣೆ ನೆರವೇರಿತು.

ಮೈಸೂರು ಶ್ರೀ ಯೋಗಾ ನರಸಿಂಹಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ

ಮೈಸೂರು: ಇಲ್ಲಿನ ವಿಜಯನಗರದಲ್ಲಿರುವ ಶ್ರೀ ಯೋಗಾ ನರಸಿಂಹಸ್ವಾಮಿ ದೇವಾಲಯದಲ್ಲಿ ಶ್ರೀ ಸ್ವಾಮಿಯ ಕುಂಭಾಭಿಷೇಕ ಮಹೋತ್ಸವದ ಅಂಗವಾಗಿ ಬುಧವಾರ ಅಖಂಡ ಮಹಾ ಸುದರ್ಶನ ಹೋಮ ವಿಶೇಷ ಪೂಜಾ ಕಾರ್ಯಗಳೊಂದಿಗೆ ಜರುಗಿತು.

ದೇವಾಲಯದ ಸಂಸ್ಥಾಪಕರಾದ ನಾಡೋಜ ಪ್ರೊ.ಡಾ.ಭಾಷ್ಯಂ ಸ್ವಾಮೀಜಿ, ಪ್ರಧಾನ ಅರ್ಚಕರಾದ ಶೇಷಾದ್ರಿ ಹಾಗೂ ಆಡಳಿತಾಧಿಕಾರಿ ಎನ್.ಶ್ರೀನಿವಾಸನ್ ಸಮ್ಮುಖದಲ್ಲಿ ನಡೆದ ಅಖಂಡ ಮಹಾ ಸುದರ್ಶನ ಹೋಮದಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡು ಶ್ರೀ ಸ್ವಾಮಿಯ ಕೃಪೆಗೆ ಪಾತ್ರರಾದರು. ತದನಂತರ ಮಹಿಳಾ ಸಂಘದವರಿಂದ ವಿಷ್ಣು ಸಹಸ್ರನಾಮ ಪಾರಾಯಣ ಜರುಗಿತಲ್ಲದೆ, ಮಧ್ಯಾಹ್ನ 12 ಗಂಟೆಗೆ ಪೂರ್ಣಾಹುತಿ ನಡೆದು, ಬಳಿಕ ಎಲ್ಲಾ ಭಕ್ತರಿಗೂ ಪ್ರಸಾದದ ರೂಪದಲ್ಲಿ ಅನ್ನ ಸಂತರ್ಪಣೆ ಮಾಡಲಾಯಿತು.

ವರನಟ ಡಾ.ರಾಜ್‌ಕುಮಾರ್ ಅವರ ಅಳಿಯ ಗೋವಿಂದರಾಜು, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್, ರಘುಲಾಲ್ ಕಂಪನಿಯ ಮುಖ್ಯಸ್ಥರಾದ ರಾಘವನ್, ಚಾಮುಂಡಿ ಬೆಟ್ಟದ ದೇವಾಲಯದ ಪ್ರಧಾನ ಅರ್ಚಕರಾದ ಶಶಿಶೇಖರ್ ದೀಕ್ಷಿತ್, ಚಾರ್ಟರ್ಡ್ ಅಕೌಂಟೆಂಟ್ ಲಕ್ಷ್ಮೀಶ್ (ಸಿಎ) ಸೇರಿದಂತೆ ಸಾಕಷ್ಟು ಗಣ್ಯರು, ಹಿರಿಯರು ಮಹಾ ಸುದರ್ಶನ ಹೋಮದಲ್ಲಿ ಪಾಲ್ಗೊಂಡು ಪ್ರಸಾದ ಪಡೆದರು.

ಸೋಮವಾರದಿಂದಲೇ ಆರಂಭಗೊಂಡ ಶ್ರೀ ಸ್ವಾಮಿಯ ಕುಂಭಾಭಿಷೇಕ ಮಹೋತ್ಸವವು 3 ದಿನಗಳ ಕಾಲ ವಿಶೇಷ ಧಾರ್ಮಿಕ ಪೂಜಾ–ಕೈಂಕರ್ಯ ಗಳೊಂದಿಗೆ ನಡೆಯಿತಲ್ಲದೆ, ಕೊನೆ ದಿನವಾದ ಬುಧವಾರದಂದು ಶ್ರೀ ಯೋಗಾನರಸಿಂಹ ಸ್ವಾಮಿಗೆ ಕುಂಭಾಭಿಷೇಕ ಮತ್ತು ಅಖಂಡ ಮಹಾ ಸುದರ್ಶನ ಹೋಮ ಜರುಗಿತು.

ಈ ವೇಳೆ ಡಾ.ಭಾಷ್ಯಂ ಸ್ವಾಮೀಜಿ ಮಾತನಾಡಿ, ಅಖಂಡ ಮಹಾ ಸುದರ್ಶನ ಹೋಮವು ಭಗವಾನ್ ವಿಷ್ಣುವಿನ ಸುದರ್ಶನ ಚಕ್ರಕ್ಕೆ ಸಮರ್ಪಿತವಾದ ಅತ್ಯಂತ ಶಕ್ತಿಶಾಲಿ ಹಾಗೂ ಮಂಗಳಕರವಾದ ವೈದಿಕ ಆಚರಣೆಯಾಗಿದೆ. ಇದು ನಕಾರಾತ್ಮಕ ಶಕ್ತಿಗಳ ನಿವಾರಣೆ, ರಕ್ಷಣೆ, ಆರೋಗ್ಯ, ಮತ್ತು ಸಮೃದ್ಧಿಗಾಗಿ ನಡೆಸಲ್ಪಡುವ ಮಹಾಯಜ್ಞವಾಗಿದೆ ಎಂದರು.

ಮಹಾ ಸುದರ್ಶನ ಹೋಮವು 10 ಹೋಮಗಳಿಗೆ ಸಮನಾಗಿರುತ್ತದೆ, ಇದು ಜೀವನದ ಹೆಚ್ಚಿನ ಪ್ರಯೋಜನಗಳನ್ನು ಹೇಗೆ ದೃಢೀಕರಿಸುತ್ತದೆ ಎಂಬುದನ್ನು ತೋರಿಸುತ್ತದೆ. ಪ್ರಾಚೀನ ವೈದಿಕ ಬರಹಗಳಲ್ಲಿ ವಿವರಿಸಲಾಗಿದೆ. ಮಹಾನ್ ದೇವರು, ಭಗವಾನ್ ವಿಷ್ಣು, ಶಾಂತಿಯುತ ಜೀವನವನ್ನು ಸುಲಭಗೊಳಿಸುವ ಗ್ರಹದ ರಕ್ಷಕನಾಗಿ ಪೂಜಿಸಲ್ಪಟ್ಟಿದ್ದಾನೆ. ಭಗವಾನ್ ವಿಷ್ಣುವಿನ ಸುದರ್ಶನ ಚಕ್ರವು ಪ್ರಬಲವಾಗಿದೆ ಎಂದು ಮಾಹಿತಿ ನೀಡಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮುಖ್ಯಮಂತ್ರಿ ಮಾಡುವುದಾಗಿ ದಲಿತರಿಗೆ ನಕ್ಷತ್ರ ತೋರಿಸಿ ಕಾಂಗ್ರೆಸ್ ಮೋಸ!

ದಲಿತರು ಸಚಿವ ಸ್ಥಾನ ತಿರಸ್ಕರಿಸಿ ಕಾಂಗ್ರೆಸ್‌ಗೆ ಬಿಸಿ ಮುಟ್ಟಿಸಿ; ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಸಲಹೆ

- ದಲಿತರು ಸಿಎಂ ಆಗುವ ಅವಕಾಶ ಬಂದಾಗ ಸಮಾಧಿ ಕಟ್ಟುತ್ತಾರೆ
- ಸಿಎಂ ಸ್ಥಾನ ಕೇಳುವ ತಾಕತ್ತು ಕಾಂಗ್ರೆಸ್‌ನ ದಲಿತ ನಾಯಕರಿಗಿಲ್ಲ
- ದಲಿತರು ಸಿಎಂ ಆಗುವ ಅವಕಾಶ ಬಿಜೆಪಿ ಸರ್ಕಾರದಲ್ಲಿ ಮಾತ್ರ

ಮೈಸೂರು, ಮೇ27(ಬಿಎಲ್‌ಯು)– ದಲಿತರನ್ನು ಮುಖ್ಯಮಂತ್ರಿ ಮಾಡುವುದಾಗಿ ನಕ್ಷತ್ರ ತೋರಿಸಿದ ಕಾಂಗ್ರೆಸ್‌ಗೆ ತಕ್ಕ ಪಾಠ ಕಲಿಸಲು ದಲಿತ ಸಮುದಾಯದವರು ಸಚಿವ ಸ್ಥಾನವನ್ನು ತಿರಸ್ಕರಿಸಿ ಬಿಸಿ ಮುಟ್ಟಿಸಬೇಕು ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಸಲಹೆ ನೀಡಿದರು.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದಲಿತರನ್ನು ಸಿಎಂ ಮಾಡುವುದಾಗಿ ಕಳೆದ 70 ವರ್ಷಗಳಿಂದ ಓಟ್ ಬ್ಯಾಂಕ್ ಮಾಡಿಕೊಂಡು ವಂಚನೆ ಮಾಡುತ್ತಿರುವ ಕಾಂಗ್ರೆಸ್‌ಗೆ ದಲಿತರು ತಮ್ಮ ಶಕ್ತಿ ತೋರಿಸಬೇಕು ಎಂದು ಕಿವಿಮಾತು ಹೇಳಿದರು.

ಎನ್.ರಾಚಯ್ಯ, ಬಸವಲಿಂಗಪ್ಪ, ಶ್ರೀನಿವಾಸಪ್ರಸಾದ್, ಮಲ್ಲಿಕಾರ್ಜುನ ಖರ್ಗೆ, ಮುನಿಯಪ್ಪ, ಡಾ.ಪರಮೇಶ್ವರ್ ತನಕ ಎಲ್ಲರಿಗೂ ಮುಖ್ಯಮಂತ್ರಿ ಮಾಡುವುದಾಗಿ ನಕ್ಷತ್ರ ತೋರಿಸಿದೆಯೇ ಹೊರತು. ಕೊಟ್ಟ ಮಾತು ಉಳಿಸಿಕೊಂಡಿಲ್ಲ. ಕೊನೆಗೂ ಕರ್ನಾಟಕದಲ್ಲಿ ಅಧಿಕಾರ ಹಸ್ತಾಂತರದ

“ ಕಾಂಗ್ರೆಸ್ ದಲಿತ ನಾಯಕರು ಸೀಡ್ ಲೆಸ್ ತರಹ. ಸಿಎಂ ಸ್ಥಾನ ಕೊಡಿ ಎಂದು ಗಟ್ಟಿಯಾಗಿ ಕೇಳುವ ತಾಕತ್ತು ಯಾರಿಗೂ ಇಲ್ಲ. ಇದನ್ನು ಅರಿತೆ ಕಾಂಗ್ರೆಸ್‌ನವರು ದಲಿತ ಸಮುದಾಯದವರಿಗೆ ನಿರಂತರವಾಗಿ ಮೋಸ ಮಾಡುತ್ತಿದೆ. ದಲಿತರು ಸಿಎಂ ಆಗಬೇಕಾದ ಸಮಯದಲ್ಲಿ ದಲಿತರಿಗೆ ಸಮಾಧಿ ಕಟ್ಟಿದರು. ತಾವು ಅಧಿಕಾರಕ್ಕೆ ಬರಲು ಅಡ್ಡಿಯಾಗುತ್ತಾರೆಂದು ಡಾ.ಪರಮೇಶ್ವರ್ ಸೋಲಿಸಿ ಹಲವು ರಾಜಕೀಯ ತಂತ್ರ ರೂಪಿಸುವಲ್ಲಿ ಯಶಸ್ವಿಯಾದರು ಎಂದು ಸಿದ್ದರಾಮಯ್ಯ ವಿರುದ್ಧ ಛಲವಾದಿ ನಾರಾಯಣ ಸ್ವಾಮಿ ವಾಗ್ದಾಳಿ ನಡೆಸಿದರು.

ಗಜ ಪ್ರಸವ ಪ್ರಹಸನ ಆಗಿದೆ. ಡಿ.ಕೆ.ಶಿವಕುಮಾರ್ ಅವರು ಸಿಎಂ ಆದರೆ ನಮ್ಮ ತಕರಾರು ಇಲ್ಲ. ಆದರೆ ಆಸೆ ತೋರಿಸಿ ದಲಿತರಿಗೆ ಮೋಸ ಮಾಡಬಾರದು ಎಂದು ಅಭಿಪ್ರಾಯಪಟ್ಟರು.

ಬಿಜೆಪಿ ಸಂವಿಧಾನ ವಿರೋಧಿ ಎಂದು ಕಾಂಗ್ರೆಸ್‌ನವರು ಟೀಕಿಸುತ್ತಾರೆ. ಆದರೆ ವಾಸ್ತವವಾಗಿ ಕಾಂಗ್ರೆಸ್ ಎಂಬ ದೆವ್ವ ದಲಿತರನ್ನು ಕಾಡುತ್ತಿದೆ. ತಮಗೆ ಕಾಂಗ್ರೆಸ್‌ನಿಂದ ಅನ್ಯಾಯ ಆಗುವುದನ್ನು ದಲಿತರು ಇನ್ನಾದರೂ ಅರಿತುಕೊಳ್ಳಬೇಕು ಎಂದರು.



ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ, ಮಾಜಿ ಉಪಮೇಯರ್ ವಿ.ಶೈಲೇಂದ್ರ ಇದ್ದಾರೆ.

ಪರಿಶಿಷ್ಟ ಜಾತಿಯವರಿಗೆ ಮೀಸಲಾದ ಯೋಜನೆಗಳಿಗೆ ಹಣ ನೀಡದೆ ಕನ್ನ ಹಾಕಿದ್ದಾರೆ. ಹಾಸ್ಟೆಲ್‌ಗಳಿಗೆ ದವಸ-ಧಾನ್ಯ ನೀಡುತ್ತಿಲ್ಲ. ಒಳ ಮೀಸಲಾತಿಯಲ್ಲಿ ಗೊಂದಲ ಉಂಟಾಗಿದ್ದು, ಜಾತಿ ಮುಕ್ತ ಮಾಡುವ ಬದಲು ಜಾತಿ ಮನೋಭಾವವನ್ನು ಮತ್ತಷ್ಟು ಗಟ್ಟಿಗೊಳಿಸಿದ್ದಾರೆ ಎಂದು ಆರೋಪಿಸಿದರು.

ಬಿಜೆಪಿಯಿಂದ ದಲಿತ ಸಿಎಂ: ಹಾಗಾದರೆ 2028ಕ್ಕೆ ಬಿಜೆಪಿ ಅಧಿಕಾರಕ್ಕೆ ಬಂದರೆ ದಲಿತರನ್ನು ಸಿಎಂ ಮಾಡುತ್ತೀರಾ ಎಂಬ ಪ್ರಶ್ನೆಗೆ, ನಮ್ಮ ಪಕ್ಷದಲ್ಲಿ ಕೇಳದೆ ಎಲ್ಲವನ್ನು ಮಾಡುತ್ತಾರೆ. ಇಂತಹ ಪವಾಡ ನಮ್ಮ ಪಕ್ಷದಲ್ಲಿ ಮಾತ್ರ ನಡೆಯುತ್ತದೆ. ಕರ್ನಾಟಕದಲ್ಲಿ ದಲಿತರು ಮುಖ್ಯಮಂತ್ರಿ ಆಗುವುದಾದರೆ ಅದು ಬಿಜೆಪಿ ಸರ್ಕಾರದಲ್ಲಿ ಮಾತ್ರ ಎಂದು ಪ್ರತಿಕ್ರಿಯೆ ನೀಡಿದರು.

ಡಿ.ಕೆ.ಶಿವಕುಮಾರ್ ಅವರು ದೆಹಲಿಯಲ್ಲಿ ಪಕ್ಷದ ಕೆಲವು ನಾಯಕರನ್ನು ಭೇಟಿ ಆಗುತ್ತಿದ್ದರು. ಆದ ಕಾರಣದಿಂದ ಹೈಕಮಾಂಡ್ ಈಗ ಬದಲಾವಣೆ ಮಾಡುತ್ತಿದೆ. ಆದರೆ ಈ ರಾಜಕೀಯ ಬೆಳವಣಿಗೆಯಲ್ಲಿ ಬಿಜೆಪಿ ಯಾವುದೇ ಲಾಭ ಪಡೆಯಲು ಇಚ್ಛೆ ಪಡುವುದಿಲ್ಲ. ಮುಂದಿನ ಚುನಾವಣೆಯಲ್ಲಿ ಜನರೇ ಸ್ಪಷ್ಟ ಬಹುಮತ ನೀಡಿ ನಮ್ಮ ಪಕ್ಷವನ್ನು ಅಧಿಕಾರಕ್ಕೆ ತರಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ವೋಟ್ ಬ್ಯಾಂಕ್ ರಾಜಕೀಯಕ್ಕೆ ಹಿಜಾಬ್ ತಂದು ಮುಸ್ಲಿಂರನ್ನು ಓಲೈಸಿದರು. ಮುಸ್ಲಿಂರ ವಿರುದ್ಧ ಕ್ರಿಮಿನಲ್ ಕೇಸ್ ವಾಪಸ್ಸು ಪಡೆದರು. ಇದು ಕಾಂಗ್ರೆಸ್ ಸರ್ಕಾರವಲ್ಲ, ತಾಲಿಬಾನ್ ಸರ್ಕಾರ. ಹೋದ್ಯಾ ಪಿಶಾಚಿ ಅಂದರೆ ಬಂದ್ಯಾ ಗವಾಕ್ಷಿ ಎಂಬಂತೆ ಸಿದ್ದರಾಮಯ್ಯ ಬದಲು ಈಗ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗುತ್ತಿದ್ದಾರೆ. ಆದರೆ ರಾಜ್ಯದ ಅಭಿವೃದ್ಧಿಯಲ್ಲಿ ಯಾವ ಬದಲಾವಣೆಯೂ ಆಗುವುದಿಲ್ಲ ಎಂದು ಆರೋಪಿಸಿದರು. ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ, ಮಾಜಿ ಉಪಮೇಯರ್ ವಿ.ಶೈಲೇಂದ್ರ, ಮಾಧ್ಯಮ ಸಂಚಾಲಕ ಮಹೇಶ್‌ರಾಜ್ ಅರಸ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮೈಸೂರು ವಿವಿ ಕುಲಸಚಿವೆ ಸವಿತಾ ಮಂಡಿಸುವ ಪಿಹೆಚ್‌ಡಿ ಬಗ್ಗೆ ಸಂಶಯ

ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ಎಂ.ಕೆ.ಸವಿತಾ ಅವರು ಪಿಹೆಚ್‌ಡಿ ಮಾಡುತ್ತಿದ್ದು, ಅವರು ಮಂಡಿಸುವ ಪ್ರಬಂಧದ ಪಾರದರ್ಶಕತೆ ಬಗ್ಗೆ ಸಂಶಯ ಮೂಡಿದೆ ಎಂದು ಛಲವಾದಿ ನಾರಾಯಣಸ್ವಾಮಿ ಆರೋಪಿಸಿದರು.

ತಾವು ಪಡೆಯುವ ಪಿ.ಹೆಚ್‌ಡಿಗೆ ಕುಲಸಚಿವರೇ ಸಹಿ ಮಾಡಿಕೊಳ್ಳುತ್ತಾರೆ. ಇದು ಅವರ ಪಿಹೆಚ್.ಡಿ ಬಗ್ಗೆ ಅನುಮಾನ ಹುಟ್ಟು ಹಾಕದೇ ಇರುತ್ತದೆಯೇ ಎಂದು ಪ್ರಶ್ನಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಆಡಳಿತ ಕುಲಗೆಟ್ಟಿದ್ದು, ನೌಕರರಿಗೆ ವೇತನ ನೀಡಲು ಹಣವಿಲ್ಲ. ಕೇವಲ 20 ಮಂದಿಗೆ ಶಿಷ್ಯ ವೇತನ ನೀಡಿದ್ದು, ಉಳಿದ 170 ಮಂದಿಗೆ ಹಣ ನೀಡದೆ ಕಾಯಿಸುತ್ತಿದ್ದಾರೆ. ಗುಣಮಟ್ಟದ ಶಿಕ್ಷಣ ನೀಡುವ ಬದಲು ಕುಲಪತಿ, ಕುಲಸಚಿವರು ಬಿಲ್ಡಿಂಗ್ ಕಟ್ಟಲು ನಿಂತಿದ್ದಾರೆ ಎಂದು ದೂರಿದರು.

ಮೈಸೂರು, ಮಂಡ್ಯ ಡಯಟ್ ಉನ್ನತೀಕರಣಕ್ಕೆ ಅನುದಾನ ನೀಡಿದ ಕೇಂದ್ರ ಸಚಿವ ಹೆಚ್‌ಡಿಕೆ, ಸಂಸದ ಯದುವೀರ್‌ಗೆ ಎಂಎಲ್‌ಸಿ ಕೆ.ವಿವೇಕಾನಂದ ಅಭಿನಂದನೆ



ಕುಮಾರಸ್ವಾಮಿ



ಯದುವೀರ್

ಮೈಸೂರು, ಮೇ27(ಜಿಎ)–ಮೈಸೂರು, ಮಂಡ್ಯ ಡಯಟ್ ಉನ್ನತೀಕರಣಕ್ಕೆ ಅನುದಾನ ನೀಡಿದ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ಶಿಕ್ಷಣ ಸಚಿವ ಮಧುಬಂಗಾರಪ್ಪರಿಗೆ ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಧನ್ಯವಾದ ತಿಳಿಸಿದ್ದಾರೆ.

ಈ ಸಂಬಂಧ ಪತ್ರ ಬರೆದಿರುವ ಅವರು, ಕೇಂದ್ರ ಸರ್ಕಾರದಿಂದ ಶೇ.60 ಮತ್ತು ರಾಜ್ಯ ಸರ್ಕಾರದ ಶೇ.40 ಪಾಲುದಾರಿಕೆಯೊಂದಿಗೆ ಕರ್ನಾಟಕ ರಾಜ್ಯದ 6 ಡಯಟ್ (ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ)ಗಳನ್ನು ಉನ್ನತೀಕರಿಸುವ ಡಯಟ್ ಆಫ್ ಎಕ್ಸೆಲೆನ್ಸ್ ಪ್ರಾಜೆಕ್ಟ್ ಅಪ್ರೂವಲ್ ಬೋರ್ಡ್ ವತಿಯಿಂದ ನನ್ನ ಮತ ಕ್ಷೇತ್ರ ವ್ಯಾಪ್ತಿಯ ದಕ್ಷಿಣ ಶಿಕ್ಷಕ ಕ್ಷೇತ್ರ ವ್ಯಾಪ್ತಿಯ ಮೈಸೂರು ಡಯಟಿನ ಅಭಿವೃದ್ಧಿಗೆ 7.56 ಕೋಟಿ ಅನುದಾನ, ಮಂಡ್ಯ ಡಯಟಿನ ಅಭಿವೃದ್ಧಿಗೆ 7.12 ಕೋಟಿ ಅನುದಾನವು ಬಿಡುಗಡೆಗೆ ಸಮ್ಮತಿ ದೊರಕಿದೆ.

ಅದರಲ್ಲಿ ಮೈಸೂರಿನ ಡಯಟಿಗೆ ಮೊದಲ ಕಂತಾಗಿ 4.38 ಕೋಟಿ ಅನುದಾನ ಮತ್ತು ಮಂಡ್ಯ ಡಯಟಿಗೆ 4.03 ಕೋಟಿ ಅನುದಾನ ಬಿಡುಗಡೆಯಾಗಿದೆ. ಈ ವಿಚಾರವಾಗಿ ರಾಜ್ಯ ಸರ್ಕಾರಕ್ಕೆ ಮತ್ತು ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಕುಮಾರಸ್ವಾಮಿ ಹಾಗೂ ಸಂಸದ ಯದುವೀರ್ ಒಡೆಯರ್ ರವರಿಗೆ ಮನವಿ ಮಾಡಿಕೊಳ್ಳಲಾಗಿತ್ತು. ಅದರಂತೆ ಡಯಟ್‌ಗಳ ಅಭಿವೃದ್ಧಿಗೆ ಅನುದಾನ ಬಿಡುಗಡೆಯಾಗಿದೆ. ಈ ಕಾರ್ಯಕ್ಕೆ ಸಹಕರಿಸದ ಕೇಂದ್ರದ ಸಚಿವ ಕುಮಾರಸ್ವಾಮಿ ಮತ್ತು ಮೈಸೂರಿನ ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮತ್ತು ಶಿಕ್ಷಣ ಸಚಿವ ಮಧುಬಂಗಾರಪ್ಪರಿಗೆ ಧನ್ಯವಾದ ತಿಳಿಸಿದ್ದಾರೆ.

ಪರಿಸರ ದಿನಾಚರಣೆ; ಮೀನಾಕ್ಷಿಪುರ ಬಳಿ ಕೆಆರ್‌ಎಸ್ ಹಿನ್ನೀರಲ್ಲಿ ಸ್ವಚ್ಛತಾ ಅಭಿಯಾನ

ಮೈಸೂರು, ಮೇ 27(ಎಂಕೆ)– ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಕಾವೇರಿ ನದಿ ಹಿನ್ನೀರು ಪ್ರದೇಶವಾದ ಮೀನಾಕ್ಷಿಪುರದಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಮೈಸೂರು ನಗರ ಮತ್ತು ಗ್ರಾಮಾಂತರ ವಿಭಾಗ, ಆನಂದೂರು ಗ್ರಾಪಂ, ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು, ಮಹಾರಾಜ ತಾಂತ್ರಿಕ ವಿಶ್ವವಿದ್ಯಾಲಯ, ಮಡಿಲು ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ ಸಹಯೋಗದಲ್ಲಿ ಸ್ವಚ್ಛತಾ ಅಭಿಯಾನ ನಡೆಸಲಾಯಿತು.



ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ವಿವಿಧ ಸಂಘ–ಸಂಸ್ಥೆಗಳ ಸಹಯೋಗದಲ್ಲಿ ಬುಧವಾರ ಮೀನಾಕ್ಷಿಪುರದ ಕಾವೇರಿ ಹಿನ್ನೀರಲ್ಲಿ ಸ್ವಚ್ಛತಾ ಅಭಿಯಾನ ನಡೆಸಲಾಯಿತು.

ಕಾವೇರಿ ನದಿ ಹಿನ್ನೀರು ಪ್ರದೇಶದೆಲ್ಲೆಡೆ ಸ್ವಚ್ಛತಾ ಅಭಿಯಾನದಲ್ಲಿ ಪಾಲ್ಗೊಂಡ 250 ಮಂದಿ, 400 ಕೆಜಿ ಪ್ಲಾಸ್ಟಿಕ್ ಸೇರಿದಂತೆ ನಿರುಪಯುಕ್ತ ಪದಾರ್ಥಗಳನ್ನು ಸಂಗ್ರಹಿಸುವ ಮೂಲಕ ಸ್ವಚ್ಛತೆ ಅರಿವು ಮೂಡಿಸಿದರು.

ಪರಿಸರ ಅಧಿಕಾರಿಗಳಾದ ವಿ.ಎಸ್.ಕುಮಾರ್, ವಿ.ಸುನೀಲ್, ಎಂ.ಶೃತಿ, ವಿದ್ಯಾವರ್ಧಕ ಕಾಲೇಜಿನ ಶರ್ಮಿಳಾ, ಮಹಾರಾಜ ತಾಂತ್ರಿಕ ವಿವಿಯ ಪ್ರೊ.ಚೇತನ್ ಕುಮಾರ್, ಆನಂದೂರು ಗ್ರಾಪಂ ಪಿಡಿಒ ಪ್ರಕಾಶ್, ಮಡಿಲು ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಕೆ.ಶ್ರೀನಿವಾಸ್, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳಾದ ಎನ್.ಕವಿತಾ, ಎಂ.ನೇತ್ರಾವತಿ, ಡಿ.ಎನ್.ಅರ್ಪಿತ ಇದ್ದರು.

ನಾಳೆ ಅಭಿನಂದನಾ ಸಮಾರಂಭ; ಸ್ನೇಹ ಮಿಲನ ಕಾರ್ಯಕ್ರಮ

ಮೈಸೂರು, ಮೇ 27–ಬಸವ ಬಳಗಗಳ ಒಕ್ಕೂಟದ ವತಿಯಿಂದ ಮೇ 29 ರಂದು ಬೆಳಗ್ಗೆ 11 ಗಂಟೆಗೆ ಶ್ರೀರಾಂಪುರದ ಶಿವ ಭವನದಲ್ಲಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಆಶೀರ್ವಾದ ಹಾಗೂ ಎಲ್ಲಾ ಹರ ಗುರು ಚರ ಮೂರ್ತಿಗಳ ದಿವ್ಯ ಸಾನ್ನಿಧ್ಯದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾ, ಮೈಸೂರು ನಗರಪಾಲಿಕೆ ಘಟಕ, ಮೈಸೂರು ತಾಲೂಕು ಘಟಕ, ಕೆ.ಆರ್.ನಗರ ತಾಲೂಕು ಹಾಗೂ ಸಾಲಿಗ್ರಾಮ ತಾಲೂಕು ಘಟಕಗಳಿಗೆ ನೂತನವಾಗಿ ಆಯ್ಕೆಯಾದ ಅಧ್ಯಕ್ಷರು, ನಿರ್ದೇಶಕರು, ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಅಭ್ಯರ್ಥಿಗಳಿಗೆ ಅಭಿನಂದನಾ ಸಮಾರಂಭ ಮತ್ತು ಸ್ನೇಹ ಮಿಲನ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಸಮಾಜದ ಮುಖಂಡರು, ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಎಂ.ಪ್ರದೀಪ್‌ಕುಮಾರ್ ತಿಳಿಸಿದ್ದಾರೆ.

ಜೂ.2ಕ್ಕೆ ಗಂಗರಾಜು ಜಾಮೀನು ಅರ್ಜಿ ವಿಚಾರಣೆ



ಮೈಸೂರು, ಮೇ27(ಬಿಎಲ್‌ಯು)– ಹಣದ ವಿಚಾರಕ್ಕೆ ಕಾರು ಡಿಕ್ಕಿ ಹೊಡೆಸಿ ಕೊಲೆ ಯತ್ನ ಆರೋಪ ಎದುರಿಸುತ್ತಿರುವ ಮೈಸೂರಿನ ಆರ್‌ಟಿಐ ಕಾರ್ಯಕರ್ತ ಗಂಗರಾಜು ಜಾಮೀನು ಅರ್ಜಿ ವಿಚಾರಣೆಯನ್ನು ನ್ಯಾಯಾಲಯ ಜೂ.2ಕ್ಕೆ ಮುಂದೂಡಿದೆ. ಮೈಸೂರಿನ 2ನೇ ಎಡಿಜೆ ನ್ಯಾಯಾಲಯದಲ್ಲಿ ಇಂದು ಗಂಗರಾಜು ಜಾಮೀನು ಅರ್ಜಿ ಬಗ್ಗೆ ನ್ಯಾಯಾಧೀಶರಾದ ರೂಪ ಅವರು ವಿಚಾರಣೆ ನಡೆಸಿದರು. ಈ ವೇಳೆ ಜಾಮೀನು ನೀಡದಂತೆ ಸರ್ಕಾರಿ ಅಭಿಯೋಜಕರಾದ ಮಧು ಅವರು ನ್ಯಾಯಾಲಯದಲ್ಲಿ ಆಕ್ಷೇಪಣೆ ಸಲ್ಲಿಸಿದರು. ಈ ವೇಳೆ ಜೂನ್ 2ಕ್ಕೆ ಜಾಮೀನು ಅರ್ಜಿ ವಿಚಾರಣೆಯನ್ನು ಮುಂದೂಡಿದ ನ್ಯಾಯಾಧೀಶರು ಅಂದು ವಾದ ಮಾಡಲು ಗಂಗರಾಜು ಪರ ವಕೀಲರಿಗೆ ಅವಕಾಶ ನೀಡಿದ್ದಾರೆ.

ನಾಳೆಯಿಂದ ಮೂರು ದಿನ ಮೈಸೂರಲ್ಲಿ ಸಾವಯವ ಮಾವು, ಹಲಸಿನ ಹಣ್ಣು ಮೇಳ



ಸಾವಯವ ಮಾವು ಮತ್ತು ಹಲಸು ಮೇಳದ ಅಂಗವಾಗಿ ತೋಟಗಾರಿಕಾ ಇಲಾಖೆಯ ಉಪನಿರ್ದೇಶಕ ಮಂಜುನಾಥ್ ಅಂಗಡಿ ಪೋಸ್ಟರ್ ಬಿಡುಗಡೆ ಮಾಡಿ ವಿವಿಧ ತಳಿಯ ಮಾವಿನಹಣ್ಣುಗಳನ್ನು ಪ್ರದರ್ಶಿಸಿದರು.

ಮೈಸೂರು, ಮೇ 27(ಎಂಟಿವೈ)– ಗ್ರಾಹಕರಿಗೆ ಸಾವಯವ ಪದ್ಧತಿಯಲ್ಲಿ ಬೆಳೆದಿರುವ ಮಾವು, ಹಲಸಿನಹಣ್ಣು ಪೂರೈಸುವ ನಿಟ್ಟಿನಲ್ಲಿ ವಿವಿಧ ಸಂಸ್ಥೆಗಳ ಸಹಯೋಗದಲ್ಲಿ ಮೇ 29ರಿಂದ 31ರವರೆಗೆ ಮೈಸೂರಿನ ನೆಕ್ಸಸ್ ಸೆಂಟರ್ ಸಿಟಿ ಮಾಲ್‌ನಲ್ಲಿ ಸಾವಯವ ಮಾವು–ಹಲಸು ಮೇಳ ಆಯೋಜಿಸಲಾಗಿದೆ ಎಂದು ತೋಟಗಾರಿಕೆ ಜಂಟಿ ನಿರ್ದೇಶಕ ಮಂಜುನಾಥ್ ಅಂಗಡಿ ತಿಳಿಸಿದ್ದಾರೆ.

ಮೈಸೂರಿನ ಕರ್ಜನ್‌ಪಾರ್ಕ್‌ನಲ್ಲಿರುವ ತೋಟಗಾರಿಕಾ ಇಲಾಖೆ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತೋಟಗಾರಿಕೆ ಇಲಾಖೆ ಅನುಷ್ಠಾನಗೊಳಿಸುತ್ತಿರುವ ಪರಂಪರಾಗತ ಕೃಷಿ ವಿಕಾಸ ಕಾರ್ಯಕ್ರಮದ ಅಂಗವಾಗಿ ಸಾವಯವ ಪದ್ಧತಿಯಲ್ಲಿ ಬೆಳೆದ ಮಾವು ಮತ್ತು ಹಲಸಿನ ಮೇಳ ಆಯೋಜಿಸಲಾಗಿದೆ. ಕಳೆದ ವರ್ಷ ಬೆಂಗಳೂರಿನ ಲಾಲ್‌ಬಾಗ್ 3 ದಿನ ಸಾವಯವ ಮಾವು ಮತ್ತು ಹಲಸು ಮೇಳ ನಡೆಸಲಾಗಿತ್ತು. ಈ ಬಾರಿ ಮೈಸೂರಿನ ನೆಕ್ಸಸ್ ಸೆಂಟರ್ ಸಿಟಿ ಮಾಲ್‌ನಲ್ಲಿ ನಡೆಸಲಾಗುತ್ತಿದ್ದು, ಮೇಳದಲ್ಲಿ ಇತರೆ ಸಾವಯವ ಪದಾರ್ಥಗಳನ್ನು ಪ್ರದರ್ಶನ, ಮಾರಾಟ ಮಾಡಲಾಗುತ್ತದೆ ಎಂದರು.

ಮಾವು ಮತ್ತು ಹಲಸು ಆಧಾರಿತ ವಿಶೇಷ ಆಹಾರಗಳ ತಯಾರಿಸುವ ವಿಧಾನಗಳ ಪ್ರದರ್ಶಿಸಿ, ಸಾರ್ವಜನಿಕರು ರುಚಿ ನೋಡುವ ಮತ್ತು ಖರೀದಿಸುವ ಅವಕಾಶ ನೀಡಲಾಗುವುದು. ರಾಜ್ಯದ ವಿವಿಧ ಭಾಗದ ಆಹಾರ, ತಿಂಡಿ ತಿನಿಸುಗಳ ಪರಿಚಯ ಮತ್ತು ಮಾರಾಟ ಕೃಷಿಕರ ಕುಟುಂಬಗಳ ಮೂಲಕ ಈ ಕಾರ್ಯಕ್ರಮ ಜರುಗಲಿದೆ. ಸಾವಯವ ಹಾಗೂ ನೈಸರ್ಗಿಕ ಬಣ್ಣಗಳಿಂದ ತಯಾರಿಸಿದ ಉಡುಪುಗಳು ಮತ್ತು ಕಲಾಕೃತಿಗಳನ್ನು ತಯಾರಿಸಲು ಕಚ್ಚಾ ವಸ್ತುಗಳ ಉತ್ಪಾದನೆ, ಸಂಗ್ರಹಣೆ, ತಯಾರಿಸುವ ವಿಧಾನಗಳನ್ನು ಪ್ರದರ್ಶಿಸಿ ಮಾರಾಟಕ್ಕೆ ಅವಕಾಶ ನೀಡಲಾಗುವುದು ಎಂದು ತಿಳಿಸಿದರು.

80ಕ್ಕೂ ಅಧಿಕ ಮಾವು, 35ಕ್ಕೂ ಅಧಿಕ ಹಲಸು ಮಾರಾಟ: ಜೈವಿಕ ಸೊಸೈಟಿ ಅಧ್ಯಕ್ಷ ಡಾ.ರಾಮಕೃಷ್ಣ ಮಾತನಾಡಿ, 80ಕ್ಕೂ ಹೆಚ್ಚು ಸ್ಥಳೀಯ ಹಾಗೂ ವಿದೇಶಿ ಮಾವಿನ ತಳಿಗಳು, 35ಕ್ಕೂ ಹೆಚ್ಚು ಹಲಸಿನ ತಳಿಗಳನ್ನು ಪ್ರದರ್ಶನದಲ್ಲಿಡಲಾಗುವುದು. ರಾಜ್ಯದಲ್ಲಿರುವ ಮಾವು ಮತ್ತು ಹಲಸಿನ ತಳಿಗಳ ವೈವಿಧ್ಯತೆ, ಅವುಗಳನ್ನು ಗುರುತಿಸುವ ವಿಧಾನ, ಇಂತಹ ಸಸ್ಯ ವೈವಿಧ್ಯತೆ ಸಂರಕ್ಷಣೆ ಮಾಡಲಾಗುತ್ತಿರುವ ಕೃಷಿಕರ ವಿವರ ಇತ್ಯಾದಿಗಳನ್ನು ಸಾರ್ವಜನಿಕರಿಗೆ ಅದರಲ್ಲೂ ಯುವ ಪೀಳಿಗೆಗೆ ತಿಳಿಸಲಾಗುತ್ತದೆ. ಪ್ರತಿ ಮಾವಿನ ವಿಶೇಷತೆ, ಯಾವ ಹವಾಮಾನದಲ್ಲಿ ಉತ್ಕೃಷ್ಟವಾಗಿ ಬೆಳೆಯುತ್ತದೆ ಎಂಬುದನ್ನು ತಿಳಿಸಲಾಗುತ್ತದೆ. ಉದಾ. ಟಿಪ್ಪು ಬಡಾ ಬಾಗ್ ಮಾವಿನ ತಳಿಗಳು, ಆಲೂರಿನ ಹಲಸು ವೈವಿಧ್ಯತೆ ಇತ್ಯಾದಿ.ನೈಸರ್ಗಿಕವಾಗಿ ಬೆಳೆದು ನೈಸರ್ಗಿಕವಾಗಿ ಹಣ್ಣು ಮಾಡಿದ ಮಾವಿನ ಹಣ್ಣುಗಳ ಬಗ್ಗೆ ತಿಳಿಸಲಾಗುವುದು ಎಂದರು.

ನಮ್ಮ ರೈತರ ಮಾರುಕಟ್ಟೆ ಸದಸ್ಯೆ ಕವಿತಾ ಶ್ರೀನಿವಾಸನ್ ಮಾತನಾಡಿ, ನೈಸರ್ಗಿಕ ಕೃಷಿ, ಪರಿಸರ ಸಂರಕ್ಷಣೆ, ಕೃಷಿಯಲ್ಲಿ ಪಶು ಸಂಗೋಪನೆ ಇತ್ಯಾದಿಗಳ ಬಗ್ಗೆ ಮಕ್ಕಳು ಚಿತ್ರ ಬಿಡಿಸಬಹುದಾಗಿದೆ. ನೈಸರ್ಗಿಕ ಜೀವನದ ಮೂಲಾಧಾರ ಮತ್ತು ಗ್ರಾಮೀಣ ಬದುಕಿನ ಒಂದು ಭಾಗವಾದ ಮಣ್ಣಿನ ಮಡಿಕೆಗಳು ಇವುಗಳನ್ನು ಉತ್ತೇಜಿಸಲು ಪ್ರಾಯೋಗಿಕ ಉತ್ಪಾದನಾ ಪ್ರದರ್ಶನವನ್ನು ಈ ಮೇಳದಲ್ಲಿ ಏರ್ಪಡಿಸಲಾಗಿದೆ.

ಪರಿಸರ ಮತ್ತು ಕಲಿಕೆ ವಿಧಾನಗಳ ಬಗ್ಗೆ ಮಕ್ಕಳಿಗೆ ನಾಟಕ ಪ್ರದರ್ಶನ ರಂಗಭೂಮಿ ಕ್ಷೇತ್ರದ ಪ್ರಮುಖರಾದ ಪ್ರಸನ್ನ ಹೆಗ್ಗೋಡು ರಚಿಸಿ ನಿರ್ದೇಶಿಸಿರುವ 'ಪಿಪ್ಪಿಗೊಂದು ಪಪ್ಪಿ' ನಾಟಕವನ್ನು ಭಾರತೀಯ ಶೈಕ್ಷಣಿಕ ಸಂಸ್ಥೆ, ಮೈಸೂರು ಅವರು ಮೇ 30ರಂದು ಸಂಜೆ 7ರಿಂದ 8ರವರೆಗೆ ಮಕ್ಕಳಿಗಾಗಿ ಪ್ರದರ್ಶನವನ್ನು ನೀಡಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಜೈವಿಕ ಸೊಸೈಟಿ ಸದಸ್ಯರಾದ ಸಹನಿ, ಜೈವಿಕ ಸೊಸೈಟಿ ಸದಸ್ಯ ದರ್ಶನ್ ಎ.ಎಂ ಮತ್ತಿತರರು ಉಪಸ್ಥಿತರಿದ್ದರು

ನಾಳೆಯಿಂದ ಮೈಸೂರಲ್ಲಿ ರಾಷ್ಟ್ರೀಯ ಶೃಂಗಸಭೆ

ಮೈಸೂರು, ಮೇ27(ಜಿಎ)–ಮೈಸೂರು ವಿವಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ವಜ್ರ ಮಹೋತ್ಸವದ ಅಂಗವಾಗಿ ವಿವಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ ಹಾಗೂ ಮಿಲನ್ ಹಿರಿಯ ವಿದ್ಯಾರ್ಥಿಗಳ ಸಂಘದ ಸಹಯೋಗದೊಂದಿಗೆ ಮೇ 29 ಮತ್ತು 30 ರಂದು ವಿವಿಯ ವಿಜ್ಞಾನ ಭವನದಲ್ಲಿ ಸುರಕ್ಷಿತ, ನೈತಿಕ ಮತ್ತು ಅಂತರ್ಗತ ಜ್ಞಾನ ಪರಿಸರ ವ್ಯವಸ್ಥೆಗಳ ನಿರ್ಮಾಣ ಕುರಿತ ರಾಷ್ಟ್ರೀಯ ಶೃಂಗಸಭೆ ಆಯೋಜಿಸಲಾಗಿದೆ ಎಂದು ವಿಭಾಗದ ಮುಖ್ಯಸ್ಥ ಪ್ರೊ.ಎನ್.ಎಸ್.ಹರಿನಾರಾಯಣ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 29 ರಂದು 10.15ಕ್ಕೆ ವಿವಿ ಆವರಣದಲ್ಲಿ ವಾಕಥಾನ್ ನಡೆಯಲಿದೆ. ನಂತರ ಮಧ್ಯಾಹ್ನ 3.30ಕ್ಕೆ ವಿಜ್ಞಾನ ಭವನದಲ್ಲಿ ನಡೆಯುವ ಶೃಂಗಸಭೆಯನ್ನು ಖ್ಯಾತ ಲೇಖಕ ಡಾ.ವಿಕ್ರಮ್ ಸಂಪತ್ ಉದ್ಘಾಟಿಸಿ, ದಿಕ್ಸೂಚಿ ಭಾಷಣ ಮಾಡುವರು. ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಮೇ 30ರಂದು ಬೆಳಗ್ಗೆ 10.45ಕ್ಕೆ ತಾಂತ್ರಿಕ ಗೋಷ್ಠಿ ನಡೆಯಲಿದೆ, ಮಧ್ಯಾಹ್ನ 3.30ಕ್ಕೆ ಸಮಾರೋಪ ಸಮಾರಂಭ ನಡೆಯಲಿದೆ, ಈ ವೇಳೆ ಡೇಟಾ ಕಾರ್ಪೆಂಟ್ರಿ, ಮಾಹಿತಿ ಅಸ್ವಸ್ಥತೆಯಿಂದ ಡಿಜಿಟಲ್ ಶಕ್ತಿವರೆಗೆ, ಶೈಕ್ಷಣಿಕ ಸಂಸ್ಥೆಗಳ ಮೇಲೆ ಸೈಬರ್ ಕಾನೂನು ಮತ್ತು ದತ್ತಾಂಶ ಸಂರಕ್ಷಣಾ ಕಾಯ್ದೆ ಪ್ರಭಾವ ಮೊದಲಾದ ವಿಷಯ ಕುರಿತು ವಿಷಯ ಮಂಡನೆ ನಡೆಯಲಿದೆ. ಸಮಾರೋಪ ಸಮಾರಂಭದಲ್ಲಿ ಡಾ.ಎಂ.ವಿ.ಸುನಿಲ್ ಸಂಚಾಲಕತ್ವದಲ್ಲಿ ಶಿಕ್ಷಣ ಮತ್ತು ವೃತ್ತಿ ಬದುಕಿನ ಸಾಧಕ–ಬಾಧಕಗಳ ಕುರಿತು ಸಂವಾದ ಕಾರ್ಯಕ್ರಮ ನಡೆಯಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಬಿ.ಪಿ.ಪ್ರಕಾಶ್, ಡಾ.ಜಯಕುಮಾರ್, ಡಾ.ಎಂ.ಸುನಿಲ್‌ಕುಮಾರ್ ಉಪಸ್ಥಿತರಿದ್ದರು.

ಜಾನುವಾರುಗಳ ಅಕ್ರಮ ಸಾಗಾಣೆ ತಡೆಗೆ ತೀವ್ರ ತಪಾಸಣೆ



ಸಿಎಆರ್‌ನ ಸಬ್ ಇನ್ಸ್‌ಪೆಕ್ಟರ್ ಗಿರೀಶ್ ರಾವ್, ಮಂಡಿ ಪೊಲೀಸ್ ಹೆಡ್ ಕಾನ್ಸ್‌ಟೇಬಲ್ ಎನ್.ಜಯಕುಮಾರ್, ಸಿಎಆರ್ ಕಾನ್ಸ್‌ಟೇಬಲ್‌ಗಳಾದ ಪ್ರಕಾಶ್ ಮತ್ತು ಅಪೂರ್ವ ಯಾದವಗಿರಿ ರೈಲ್ವೆ ಅಂಡರ್ ಬ್ರಿಡ್ಜ್ ಬಳಿ ವಾಹನಗಳ ತಪಾಸಣೆ ನಡೆಸುತ್ತಿರುವುದನ್ನು ಕಾಣಬಹುದು.

ಮೈಸೂರು,ಮೇ27(ಎಂಕೆ)– ಜಾನುವಾರುಗಳ ಅಕ್ರಮ ಸಾಗಾಣಿಕೆ ತಡೆಗಟ್ಟಲು ಮೈಸೂರು ನಗರದ ವಿವಿಧೆಡೆ ಗೂಡ್ಸ್ ಹಾಗೂ ಇನ್ನಿತರೆ ಅನುಮಾನಾಸ್ಪದ ವಾಹನಗಳ ತೀವ್ರ ತಪಾಸಣೆ ನಡೆಸಲಾಗುತ್ತಿದೆ.

ಕಿಡಿಗೇಡಿಗಳು ದನ–ಕರುಗಳನ್ನು ಅಕ್ರಮವಾಗಿ ಸಾಗಾಟ ಮಾಡುವ ಸಾಧ್ಯತೆ ಹಿನ್ನಲೆಯಲ್ಲಿ ಮೈಸೂರು ನಗರ ಪೊಲೀಸರಿಂದ ವ್ಯಾಪಕ ಕಟ್ಟೆಚ್ಚರ ವಹಿಸಲಾಗಿದ್ದು, ವಿವಿಧೆಡೆ ರಸ್ತೆಗೆ ಬ್ಯಾರಿಕೇಡ್‌ಗಳನ್ನು ಅಳವಡಿಸಿ ವಾಹನಗಳ ಪರಿಶೀಲನೆ ನಡೆಸಲಾಗುತ್ತಿದೆ. ಬಕ್ರೀದ್ ಹಿನ್ನಲೆಯಲ್ಲಿ ಕಾನೂನು–ಸುವ್ಯವಸ್ಥೆ ಕಾಯ್ದುಕೊಳ್ಳುವ ಉದ್ದೇಶವೂ ಇದೆ. ಯಾದವಗಿರಿಯ ಜಾವಾ ಫ್ಯಾಕ್ಟರಿ ರೈಲ್ವೆ ಅಂಡರ್ ಬ್ರಿಡ್ಜ್ ಬಳಿ, ತಿಲಕ್‌ನಗರದ ಕೆನರಾ ಬ್ಯಾಂಕ್ ಬಳಿ, ನಾಯ್ಡುನಗರದ ಪುಷ್ಪಾಶ್ರಮ ಮತ್ತು ಮೈಸೂರು–ಬೆಂಗಳೂರು ರಸ್ತೆಯ ದಂಡಿನ ಮಾರಮ್ಮ ದೇವಸ್ಥಾನದ ಬಳಿ ಕಳೆದ 4 ದಿನಗಳಿಂದ ದಿನಕ್ಕೆ ಮೂರು ಪಾಳಿಗಳಲ್ಲಿ ವಾಹನ ತಪಾಸಣೆ ನಡೆಸಲಾಗುತ್ತಿದೆ.

ತಪಾಸಣಾ ಸ್ಥಳದಲ್ಲಿ ನಾಲ್ಕರಿಂದ ಐದು ಪೊಲೀಸ್ ಸಿಬ್ಬಂದಿಗಳಿದ್ದು, ಅವರಲ್ಲಿ ನಗರ ಸಶಸ್ತ್ರ ಮೀಸಲು ಪಡೆ ಮತ್ತು ಆಯಾ ಪೊಲೀಸ್ ಠಾಣೆ ವ್ಯಾಪ್ತಿಯ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. ಸಿಎಆರ್ ಸಿಬ್ಬಂದಿ ಬಂದೂಕು ಹಿಡಿದಿದ್ದರೆ, ಉಳಿದ ಸಿಬ್ಬಂದಿ ಗೂಡ್ಸ್ ವಾಹನಗಳ ಪರಿಶೀಲನೆ ನಡೆಸುತ್ತಿದ್ದಾರೆ.

15ಕ್ಕೂ ಹೆಚ್ಚು ದನ–ಕರುಗಳ ರಕ್ಷಣೆ: ಕುರಿಗಳ ಮಾರಾಟ ಮತ್ತು ಸಾಗಾಣಿಕೆಗೆ ಯಾವುದೇ ನಿರ್ಬಂಧವಿಲ್ಲ. ಆದರೆ, ದನ–ಕರುಗಳನ್ನು ಅಕ್ರಮವಾಗಿ ಸಾಗಾಣಿಕೆ ಮಾಡುವ ಸಾಧ್ಯತೆ ಹಿನ್ನಲೆಯಲ್ಲಿ ತಪಾಸಣೆ ನಡೆಸಲಾಗುತ್ತಿದೆ. ಇದುವರೆಗೆ ಮೂರು ಅಕ್ರಮ ಸಾಗಾಟ ಕಂಡು ಬಂದಿದ್ದು, ಅಕ್ರಮವಾಗಿ ಸಾಗಾಟ ಮಾಡುತ್ತಿದ್ದವರ ವಿರುದ್ಧ ಕಾನೂನು ಕ್ರಮ ಜರುಗಿಸಿ, 15ಕ್ಕೂ ಹೆಚ್ಚು ದನ–ಕರುಗಳನ್ನು ರಕ್ಷಣೆ ಮಾಡಲಾಗಿದೆ ಎಂದು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಮೇಕೆದಾಟು ಯೋಜನೆಗೆ ತಮಿಳ್ನಾಡು ವಿರೋಧ ಖಂಡಿಸಿ ಮೈಸೂರಲ್ಲಿ ಕನ್ನಡ ವೇದಿಕೆ ಪ್ರತಿಭಟನೆ



ಮೇಕೆದಾಟು ಯೋಜನೆಗೆ ತಮಿಳುನಾಡು ಮುಖ್ಯಮಂತ್ರಿ ವಿಜಯ್ ವಿರೋಧಿಸುವುದನ್ನು ಖಂಡಿಸಿ ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಮೈಸೂರು ಕನ್ನಡ ವೇದಿಕೆಯ ಕಾರ್ಯಕರ್ತರು ಬುಧವಾರ ಪ್ರತಿಭಟನೆ ನಡೆಸಿದರು.

ಮೈಸೂರು,ಮೇ 27(ಎಂಟಿವೈ)–ಮೇಕೆದಾಟು ಯೋಜನೆ ವಿರೋಧಿಸುತ್ತಿರುವ ತಮಿಳುನಾಡು ಸರ್ಕಾರದ ವಿರುದ್ಧ ಮೈಸೂರು ಕನ್ನಡ ವೇದಿಕೆ ಕಾರ್ಯಕರ್ತರು ಪ್ರತಿಭಟನೆ ನಡೆಸಿ, ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಿದ ಮೈಸೂರು ಕನ್ನಡ ವೇದಿಕೆ ಕಾರ್ಯಕರ್ತರು ಕನ್ನಡನಾಡಿನ ಜೀವನದಿ ಕಾವೇರಿ ಕರ್ನಾಟಕದ ಆಸ್ತಿ. ಆದರೂ, ಕನ್ನಡಿಗರಿಗೆ ಅನ್ಯಾಯವಾಗುತ್ತಿದೆ. ಸಮುದ್ರಕ್ಕೆ ಹರಿದು ಪೋಲಾಗಿ ಹೋಗುವ ನೀರನ್ನು ಕುಡಿಯುವುದಕ್ಕೆ ಬಳಸಿಕೊಳ್ಳುವ ನಿಟ್ಟಿನಲ್ಲಿ ಮೇಕೆದಾಟು ಯೋಜನೆಯನ್ನು ಕರ್ನಾಟಕ ಸರ್ಕಾರ ಜಾರಿಗೊಳಿಸಲು ಮುಂದಾಗಿದೆ. ಆದರೆ, ತಮಿಳುನಾಡಿನ ಮುಖ್ಯಮಂತ್ರಿ ವಿಜಯ್ ಅವರು ಮೇಕೆದಾಟು ಯೋಜನೆಗೆ ವಿರೋಧ ವ್ಯಕ್ತಪಡಿಸುತ್ತಿರುವುದು ಖಂಡನೀಯ ಎಂದರು.

ಮೇಕೆದಾಟು ಯೋಜನೆಯ ಹಿನ್ನಲೆ, ಇತಿಹಾಸ, ಸಾಧಕ–ಬಾಧಕಗಳ ಅರಿವಿಲ್ಲದೆ ವಿರೋಧ ವ್ಯಕ್ತಪಡಿಸುತ್ತಿರುವುದು ಸರಿಯಲ್ಲ. ಈ ಯೋಜನೆಯಿಂದ ತಮಿಳುನಾಡಿಗೆ ಲಾಭವೂ ಇಲ್ಲ, ನಷ್ಟವೂ ಇಲ್ಲ. ನೀರನ್ನು ವಿದ್ಯುತ್ ಉತ್ಪಾದನೆ ಹಾಗೂ ಕುಡಿಯುವ ಉದ್ದೇಶಕ್ಕೆ ಮಾತ್ರ ಈ ಯೋಜನೆ ಸೀಮಿತವಾಗಿದೆ. ತಮಿಳುನಾಡು ಕಾವೇರಿ ವಿವಾದವನ್ನು ರಾಜಕೀಯ, ಸ್ವಾರ್ಥಕ್ಕೆ ಬಳಸಿಕೊಂಡಿದೆಯೇ ಹೊರತು ವಿಶಾಲ ಮನೋಭಾವ ಪ್ರದರ್ಶಿಸಿಲ್ಲ. ತಮಿಳುನಾಡಿನ ನೂತನ ಮುಖ್ಯಮಂತ್ರಿ ಈ ಯೋಜನೆಯ ಹಿನ್ನೆಲೆ ಅರಿತು ಎರಡು ರಾಜ್ಯದ ಜನತೆ ಸಾಮರಸ್ಯದಿಂದ ಇರುವಂತೆ ಸಹಕರಿಸಬೇಕು. ಯೋಜನೆಗೆ ಅಡ್ಡಿ ಮಾಡಬಾರದು ಎಂದು ಆಗ್ರಹಿಸಿದರು.

ಪ್ರತಿಭಟನೆಯ ನೇತೃತ್ವವನ್ನು ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಬಾಲಕೃಷ್ಣ ವಹಿಸಿದ್ದರು. ಮುಖಂಡರಾದ ನಾಲಾ ಬೀದಿ ರವಿ, ಗುರುಬಸಪ್ಪ, ಬೋಗಾದಿ ಸಿದ್ದೇಗೌಡ, ಗೋಪಿ, ಮಾದಪ್ಪ ಬೀಡಾ ಬಾಬು, ಪ್ಯಾಲೇಸ್‌ಬಾಬು, ಸಿದ್ದಪ್ಪ ಎಲ್‌ಐಸಿ, ಸ್ವಾಮಿ, ಗೋವಿಂದರಾಜು, ಚಿಣ್ಣಪ್ಪ, ಸ್ವಾಮಿಗೈಡ್, ಸುನೀಲ್, ರಮೇಶ್, ಮನೋಹರ್, ನಾಗೇಶ್, ಶಿವಕುಮಾರ್ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಸಿಎಂ ಬದಲಾದರೆ ದಲಿತರಿಗೆ ಅವಕಾಶ ನೀಡಿ

ಮಂಡ್ಯದ ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿ ಪಂಜಿನ ಮೆರವಣಿಗೆ



ಪ್ರಗತಿಪರ ಹೋರಾಟಗಾರರು ಮತ್ತು ದಲಿತ ಸಂಘಟಕರು ದಲಿತ ಸಿಎಂಗಾಗಿ ಆಗ್ರಹಿಸಿ ಪಂಜಿನ ಮೆರವಣಿಗೆ ನಡೆಸಿದರು.

ಮಂಡ್ಯ: ಇತ್ತೀಚಿನ ರಾಜ್ಯ ರಾಜಕೀಯ ಬೆಳವಣಿಗೆಗಳಲ್ಲಿ ಕಾಂಗ್ರೆಸ್ ಪಕ್ಷದಿಂದ ಸಿಎಂ ಬದಲಾವಣೆಯಾದರೆ ದಲಿತರನ್ನು ಸಿಎಂ ಮಾಡಿ ಎಂದು ಕಾಂಗ್ರೆಸ್ ಹೈಕಮಾಂಡ್ ಒತ್ತಾಯಿಸಿ ನಗರದಲ್ಲಿ ಪ್ರಗತಿಪರ ಹೋರಾಟಗಾರರು ಮತ್ತು ದಲಿತ ಸಂಘಟಕರು ಪಂಜಿನ ಮೆರವಣಿಗೆ ನಡೆಸಿದರು.

ಮೈಸೂರು–ಬೆಂಗಳೂರು ಹೆದ್ದಾರಿಯ ಜೆ.ಸಿ.ವೃತ್ತದಲ್ಲಿ ಪ್ರಗತಿಪರ ಹೋರಾಟಗಾರರು ಮತ್ತು ದಲಿತ ಸಂಘಟಕರು ಜಮಾವಣೆಗೊಂಡು ಕಾಂಗ್ರೆಸ್ ಹೈಕಮಾಂಡ್ ಗಮನ ಸೆಳೆಯಲು ಪಂಜಿನ ಮೆರವಣಿಗೆ ನಡೆಸಿ, ದಲಿತ ಸಿಎಂಗಾಗಿ ಘೋಷಣೆಗಳನ್ನು ಕೂಗಿದರು.

ಬಳಿಕ ಮಾತನಾಡಿದ ಕರ್ನಾಟಕ ಸಂವಿಧಾನ ಸೇನೆ ರಾಜ್ಯಾಧ್ಯಕ್ಷ ಎಚ್.ಎನ್. ನರಸಿಂಹಮೂರ್ತಿ, ರಾಜ್ಯದಲ್ಲಿ ಸಿಎಂ ಬದಲಾವಣೆಯಾಗುತ್ತದೆಂದು ನೆನ್ನೆಯಿಂದ ಸರ್ಕಸ್ ನಡೆಯುತ್ತಿದೆ. ಕಳೆದ 75 ವರ್ಷಗಳಿಂದ ಎಸ್ಸಿ ಎಸ್ಟಿ, ಒಬಿಸಿ ವರ್ಗಗಳು ಕಾಂಗ್ರೆಸ್ ಪಕ್ಷಕ್ಕೆ ಮತ ನೀಡುತ್ತ ಅಧಿಕಾರ ಬೆಂಬಲಿಸಿಕೊಂಡು ಬಂದಿವೆ, ಆದರೂ ಅವಕಾಶ ಸಿಕ್ಕರೂ ಇದುವರೆಗೂ ದಲಿತ ಸಿ.ಎಂ. ಮಾಡಲು ಸಾಧ್ಯವಾಗಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಾಮಾಜಿಕ ವ್ಯವಸ್ಥೆಯನ್ನು ಕಾಂಗ್ರೆಸ್ ಹೈಕಮಾಂಡ್ ಕಾಯ್ದುಕೊಳ್ಳುವಲ್ಲಿ ವಿಫಲವಾಗುತ್ತಿದೆ. ಶೇ.90ರಷ್ಟು ದಲಿತರು ಕಾಂಗ್ರೆಸ್ ಪಕ್ಷ ಗೆಲ್ಲಲು ಕಾರಣವಾಗುತ್ತಿದ್ದಾರೆ ಎಂಬುದು ದೇಶಕ್ಕೆ ಗೊತ್ತು. ಆದರೂ ರಾಜ್ಯದಲ್ಲಿ ಖರ್ಗೆ ಅವರು ಡಾ.ಪರಮೇಶ್ವರ್ ಅವರು ಮುಖ್ಯಮಂತ್ರಿಯಾಗುವುದನ್ನು ತಪ್ಪಿಸಿದರು. ಅವಕಾಶವಿದ್ದರೂ ದಲಿತರಿಗೆ ಸಿಎಂ ಸ್ಥಾನ ನೀಡುತ್ತಿಲ್ಲ. ಚುನಾವಣೆಯಲ್ಲಿ ಮಾತ್ರ ದಲಿತ ಓಟುಗಳು ಬೇಕು, ಅಧಿಕಾರ ನೀಡುವಾಗ ಕಣ್ಣಿಗೆ ಕಾಣಿಸುವುದಿಲ್ಲವೇ ಎಂದು ಕೈ ಹೈಕಮಾಂಡ್‌ಗೆ ಎಚ್ಚರಿಸಿದರು.

ನಂತರ ಮಾತನಾಡಿದ ದಸಂಸ ಹೋರಾಟಗಾರ ಎಂ.ವಿ.ಕೃಷ್ಣ ಕರ್ನಾಟಕದಲ್ಲಿ 'ದಲಿತ ಸಿಎಂ' ಕೂಗು ಆಗಾಗ್ಗೆ ರಾಜಕೀಯ ವಲಯದಲ್ಲಿ ಸದ್ದು ಮಾಡುತ್ತಲೇ ಇರುತ್ತದೆ. ಆದರೆ ಇತ್ತೀಚಿನ ರಾಜಕೀಯ ಬೆಳವಣಿಗೆಗಳಲ್ಲಿ, ಮುಖ್ಯಮಂತ್ರಿ ಸ್ಥಾನವನ್ನು ದಲಿತರಿಗೆ ನೀಡಬೇಕೆಂದು ಒತ್ತಾಯಿಸಿ ಅನೇಕ ಮೆರವಣಿಗೆ ಮಾಡುತ್ತಿದ್ದೇವೆ ಎಂದರು.

ಕಾಂಗ್ರೆಸ್ ಪಕ್ಷದ ಸರ್ಕಾರಗಳಲ್ಲಿನ ಆಡಳಿತದಲ್ಲಿ ದಕ್ಷತೆ ಹೊಂದಿರುವ ದಲಿತರು ಸಾಕಷ್ಟು ಮಂದಿ ನಾಯಕರಿದ್ದಾರೆ, ಅವರಿಗೆ ಸಿಎಂ ಸ್ಥಾನ ನೀಡಬೇಕೆಂದು ಆಗ್ರಹಿಸಿದ್ದರು. ನವದೆಹಲಿಯಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ ನಡೆಯುತ್ತಿದ್ದ ಸಂದರ್ಭದಲ್ಲಿ ದಲಿತ ಸಂಘಟಕರು ದಲಿತ ಸಿಎಂ ಆಗಬೇಕೆಂದು ಒತ್ತಾಯಿಸಿ ಪ್ರತಿಭಟನೆ ನಡೆಸಿ, ಎಚ್ಚರಿಸಿದ್ದರೂ ಮೀನಾ ಮೇಷ ಎಣಿಸುತ್ತಿರುವುದು ನಾಚಿಕೆಗೇಡಿನ ವಿಷಯ ಎಂದು ಕಿಡಿಕಾರಿದರು.

ನಾಳೆ ಕೈ ಹೈಕಮಾಂಡ್ ನಡೆಸುವ ಕಾಂಗ್ರೆಸ್ ಸಂಪುಟ ಸಭೆಯಲ್ಲಿ ದಲಿತ ಸಿಎಂ ಮಾಡುವ ಘೋಷಣೆ ಮಾಡಬೇಕು, ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಪಂಜಿನ ಬೆಂಕಿಯಲ್ಲಿ ವಿನಾಶವಾಗಲಿದೆ ಎಂದು ಎಚ್ಚರಿಸಿದರು.

ಇದೇ ಸಂದರ್ಭದಲ್ಲಿ ಪ್ರಗತಿಪರ ಹೋರಾಟಗಾರರಾದ ಟಿ.ಡಿ.ಬಸವರಾಜ್ ತಗ್ಗಹಳ್ಳಿ, ಉಮೇಶ್, ಮುಕುಂದ್ ಹಾಲಹಳ್ಳಿ, ಚನ್ನಕೇಶವ್,ಜಿ.ಕೆ.ಕುಮಾರ್, ಪ್ರದೀಪ್ ಹೊಸಹಳ್ಳಿ, ನಿರಂಜನ್, ಟಿ.ಡಿ.ನಾಗರಾಜ್ ಮತ್ತಿತರರಿದ್ದರು.

ಮಳೆಯಿಂದ ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿ ಸಂಚಾರಕ್ಕೆ ಅಡ್ಡಿ

ಸೇತುವೆ ಮೇಲಿನ ಮುಚ್ಚಿದ್ದ ರಂದ್ರಗಳನ್ನು ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟ ರಕ್ಷಣಾ ವೇದಿಕೆ



ಮಂಡ್ಯ ರಕ್ಷಣಾ ವೇದಿಕೆ ಕಾರ್ಯಕರ್ತರು ಮಣ್ಣು ತೆರವು ಕಾರ್ಯ ನಡೆಸುತ್ತಿರುವುದು.

ಮಂಡ್ಯ: ಬೆಂಗಳೂರು–ಮೈಸೂರು ಹೆದ್ದಾರಿಯ ಲೋಕಪಾವನಿ ನದಿ ಬಳಿಯ ಸೇತುವೆ ಮೇಲಿದ್ದ ರಂದ್ರಗಳು ಮುಚ್ಚಿದ್ದರಿಂದ ಮಳೆ ನೀರು ತುಂಬಿ ವಾಹನಗಳ ಸಂಚಾರಕ್ಕೆ ಅಡಿಯಾಗುತಿದ್ದುದನ್ನು ಮಂಡ್ಯ ರಕ್ಷಣಾ ವೇದಿಕೆ ಕಾರ್ಯಕರ್ತರು ತೆರವು ಕಾರ್ಯ ನಡೆಸಿದರು.

ತಾಲೂಕಿನ ಬಾಬುರಾಯನಕೊಪ್ಪಲು ಬಳಿಯ ಲೋಕಪಾವನಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಸೇತುವೆ ಮೇಲಿನ ರಂದ್ರಗಳು ಮಣ್ಣಿನಿಂದ ಮುಚ್ಚಿದ್ದರಿಂದ ಮಳೆ ನೀರು ಹೊರ ಹೋಗದೆ ಪಾದಚಾರಿ ಸೇರಿದಂತೆ ವಾಹನಗಳ ಸಂಚಾರಕ್ಕೆ ತೊಂದರೆಯಾಗುತ್ತಿರುವುದನ್ನು ಗಮನಿಸಿದ ಮಂಡ್ಯ ರಕ್ಷಣಾ ವೇದಿಕೆ ಅಧ್ಯಕ್ಷ ಶಂಕರ್ ಬಾಬು ನೇತೃತ್ವದಲ್ಲಿ ಶ್ರಮದಾನ ನಡೆಸಿ, ಮಳೆ ನೀರು ಹೋಗುವ ಮಾರ್ಗದ ರಂದ್ರಗಳಲ್ಲಿನ ಮಣ್ಣು ತೆರವು ಮಾಡಿ ನಂತರ ನೀರು ಸರಾಗವಾಗಿ ಹೊರ ಹೋಗುವಂತೆ ಮಾಡಲಾಯಿತು.

ಮಂಗಳವಾರ ಸುರಿದ ಮಳೆಯಿಂದ ರಂದ್ರಗಳು ಮುಚ್ಚಿದ್ದರಿಂದ ನೀರು ಸೇತುವೆಯ ಮೇಲೆ ಶೇಖರಣೆಗೊಂಡು, ವಾಹನಗಳು ಸಂಚರಿಸದಂತೆ ಜೊತೆಗೆ ದ್ವಿಚಕ್ರ ವಾಹನಗಳ ಸವಾರರು ಹಾಗೂ ಪಾದಚಾರಿಗಳು ತಿರುಗಾಡಲು ತೊಂದರೆಯಾಗುತ್ತಿತ್ತು. ಇದನ್ನ ಗಮನಿಸಿದ ಮಂಡ್ಯ ರಕ್ಷಣಾ ವೇದಿಕೆ ಲೊಕೋಪಯೋಗಿ ಇಲಾಖೆಗೆ ದೂರು ನೀಡಿ ಸಾರ್ವಜನಿಕರಿಗೆ ಸಮಸ್ಯೆ ಬಗೆ ಹರಿಸಲು ಕೋರಲಾಯಿತು. ಆದರೆ ಇಲಾಖೆ ಅಧಿಕಾರಿಗಳು ಕಂಡರೂ ಕಾಣದಂತೆ ವರ್ತಿಸಿದ ಹಿನ್ನೆಲೆಯಲ್ಲಿ ಮಂಡ್ಯ ರಕ್ಷಣಾ ವೇದಿಕೆ ಕಾರ್ಯಕರ್ತರು ಮೊದಲು ಜೆಸಿಬಿ ಮೂಲಕ ಸೇತುವೆ ಮಣ್ಣನ್ನು ತೆರವುಗೊಳಿಸಿದರು. ನಂತರ ಹಾರೆ, ಗುದ್ದಲಿ ಬಳಸಿ ಮಣ್ಣಿನಿಂದ ಮುಚ್ಚಿಹೋಗಿದ್ದ ರಂದ್ರಗಳನ್ನು ತೆಗೆದು ನೀರು ಸರಾಗವಾಗಿ ಹೋಗುವಂತೆ ಸರಿಪಡಿಸಿ ಸಾರ್ವಜನಿಕರಿಗೆ ಅನುಕೂಲ ಮಾಡುವ ಮೂಲಕ ಮಾನವೀಯತೆ ಮೆರೆದರು.

ಶ್ರಮದಾನ ಕಾರ್ಯದಲ್ಲಿ ಶ್ರೀನಿವಾಸ ಅಗ್ರಹಾರ ಗ್ರಾಮದ ಜವರೇಗೌಡ, ವೇದಿಕೆ ರಾಜ್ಯ ಸಂಘಟನಾ ಕಾರ್ಯದರ್ಶಿ ಕೆ.ಎಚ್ ಜಗದೀಶ್ ಗೌಡ್ರು, ಶೆಟ್ಟಳ್ಳಿ ಸಿದ್ದು, ರಾಮಚಂದ್ರ ಸೇರಿದಂತೆ ಇತರರು ಇದ್ದರು.

30ರಂದು ಒಕ್ಕಲಿಗ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಮಂಡ್ಯ: ಜಿಲ್ಲಾ ಒಕ್ಕಲಿಗರ ಸಂಘದ ವತಿಯಿಂದ ಗಣ್ಯ ಸಾಧಕರಿಗೆ ಅಭಿನಂದನೆ ಹಾಗೂ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಮೇ 30ರಂದು ಬೆಳಗ್ಗೆ 10.30ಕ್ಕೆ ನಗರದ ಗಾಂಧಿ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ತಿಮ್ಮೇಗೌಡ ಗೌಡಯ್ಯನದೊಡ್ಡಿ ತಿಳಿಸಿದ್ದಾರೆ. ಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ವಿಶ್ವ ಒಕ್ಕಲಿಗರ ಮಠದ ಪೀಠಾಧ್ಯಕ್ಷ ಶ್ರೀ ಡಾ.ನಿಶ್ಚಲಾನಂದನಾಥ ಸ್ವಾಮೀಜಿ, ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಶ್ರೀ ಪುರುಷೋತ್ತಮಾನಂದನಾಥ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆಯಲಿರುವ ಸಮಾರಂಭವನ್ನು ಶಾಸಕ ರವಿಕುಮಾರ್‌ಗೌಡ ಉದ್ಘಾಟಿಸಲಿದ್ದು, ಶಾಸಕ ಉದಯ್ ಅಧ್ಯಕ್ಷತೆ ವಹಿಸುವರು.

ಅಗಸರಹಳ್ಳಿ ಡೇರಿಗೆ ನಿರ್ದೇಶಕರ ಆಯ್ಕೆ



ಅಗಸರಹಳ್ಳಿ ಡೇರಿಗೆ ಆಯ್ಕೆಯಾದವರನ್ನು ಗ್ರಾಮಸ್ಥರು ಅಭಿನಂದಿಸಿದರು.

ಕೆ.ಆರ್.ಪೇಟೆ, ಮೇ 27– ತಾಲೂಕಿನ ಬೂಕನಕೆರೆ ಹೋಬಳಿಯ ಅಗಸರಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಆಡಳಿತ ಮಂಡಳಿಗೆ 7 ಮಂದಿ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ.

ಗೆದ್ದವರ ವಿವರ: ಮಹೇಶ್.ಆರ್, ಎಸ್ ಲೋಕೇಶ್, ಎ.ಟಿ.ಹರೀಶ್, ಜಿ.ಗಿರೀಶ್, ಎ.ವಿ.ಮೋಹನ್, ಅಶ್ವಿನಿರವಿ, ಮಂಜುಳಾ ಯೋಗೇಗೌಡ, ಎ.ಎಸ್.ಶ್ಯಾಮೇಶ್, ಮಂಜುನಾಥ್.ಆರ್, ಕುಮಾರ್ ಅವರುಗಳು ನಿರ್ದೇಶಕರಾಗಿ ಆಯ್ಕೆಯಾಗಿರುತ್ತಾರೆ ಎಂದು ಚುನಾವಣಾಧಿಕಾರಿ ವಾಸಿಂಪಾಷಾ ಅವರು ತಿಳಿಸಿದ್ದಾರೆ. ಸಹ ಚುನಾವಣಾಧಿಕಾರಿಯಾಗಿ ಡೇರಿಯ ಕಾರ್ಯದರ್ಶಿ ಗೋವಿಂದೇಗೌಡ ಕಾರ್ಯನಿರ್ವಹಣೆ ಮಾಡಿದರು.

ನೂತನ ನಿರ್ದೇಶಕರನ್ನು ಪಿ.ಎಲ್.ಡಿ. ಬ್ಯಾಂಕ್ ಮಾಜಿ ಅಧ್ಯಕ್ಷ ಎ.ಎನ್. ಗೋವಿಂದ ರಾಜು, ಮುಖಂಡರಾದ ಯುವರಾಜ್, ಕೃಷ್ಣೇಗೌಡ, ಎ.ಡಿ.ನಾಗರಾಜು, ರಾಮಕೃಷ್ಣ ಸೇರಿದಂತೆ ಅಗಸರಹಳ್ಳಿ ಗ್ರಾಮಸ್ಥರು ಹಾಗೂ ಮುಖಂಡರು ಅಭಿನಂದಿಸಿದರು.

ಸಿಎಂ ರಾಜೀನಾಮೆ ವಿಚಾರ ಇಂದು ಗೊತ್ತಾಗಲಿದೆ



ಮಂಡ್ಯ: ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ವಿಚಾರ ನನಗೆ ತಿಳಿದಿಲ್ಲ. ನಾಳೆ (ಗುರುವಾರ) ಗೊತ್ತಾಗಬಹುದು. ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಪಕ್ಷಕ್ಕೆ ಎರಡು ಕಣ್ಣುಗಳಿದ್ದಂತೆ ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಬ್ಬರು ನಾಯಕರು ಸರ್ಕಾರ, ಪಾರ್ಟಿ, ರಾಜ್ಯಕ್ಕೆ ಎರಡೂ ಕಣ್ಣುಗಳಿದ್ದಂತೆ. ಇವರಿಬ್ಬರ ಕೊಡುಗೆ ಅಪಾರವಾದದು. ಇವರಿಬ್ಬರ ಬಗ್ಗೆ ಪಕ್ಷ ತೀರ್ಮಾನ ಮಾಡುತ್ತೆ ಎಂದರು.

ವಿರೋಧ ಪಕ್ಷಗಳಿಗೆ ಹಿಂದೆ ಆಡಳಿತ ಮಾಡಿಲ್ಲ. ಮುಂದೆ ಗುರಿ ಇಲ್ಲ. ನಾವು 136 ಜನ ಶಾಸಕರು ಗೆದ್ದಿದ್ದೇವೆ. ನಮ್ಮನ್ನು ಟೀಕೆ ಮಾಡಿ ಕಾಲು ಎಳೆಯುವುದೇ ವಿರೋಧ ಪಕ್ಷದ ಕೆಲಸ. ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಮಧ್ಯೆ ಯಾವ ಬಿನ್ನಾಭಿಪ್ರಾಯ ಇಲ್ಲ ಎಂದು ಹೇಳಿದರು.

ರಾಜ್ಯಸಭಾ, ಎಂಎಲ್ಸಿ ಚುನಾವಣೆ ವಿಚಾರ ಮಾತನಾಡಿದ್ದಾರಂತೆ. ಅದರ ವಿಚಾರ ಬಿಡುಗಡೆ ಮಾಡಬಹುದು. ಪಕ್ಷದ ವರಿಷ್ಠರು ಏನು ಸಂದೇಶ ಕೊಡುತ್ತಾರೋ ಗೊತ್ತಿಲ್ಲ. ಅವರು ಬಂದ ಮೇಲೆ ವಿಚಾರ ಗೊತ್ತಾಗಲಿದೆ.

ಭಾರತೀನಗರ ಸಮೀಪ ಚಿರತೆಗಳು ಪ್ರತ್ಯಕ್ಷ

ಚಿರತೆ ದಾಳಿಯಿಂದ ನಾಯಿಗಳು ಸಾವು



ಭಾರತೀನಗರ, ಮೇ 27– ಮಂಡ್ಯ ಜಿಲ್ಲೆ ಮದ್ದೂರು ತಾಲೂಕು ಭಾರತೀನಗರ ಸಮೀಪ ಚಿರತೆಗಳು ಕಾಣಿಸಿಕೊಂಡಿದ್ದು, ಚಿರತೆಯೊಂದು ಸಾಕು ನಾಯಿಗಳನ್ನು ಕೊಂದು ತಿಂದು ಹಾಕಿರುವ ಘಟನೆ ಇಲ್ಲಿಗೆ ಸಮೀಪದ ಗುರುದೇವರಹಳ್ಳಿ ಕಾಲೋನಿಯಲ್ಲಿ ಜರುಗಿದೆ.

ಗ್ರಾಮದ ಪ್ರತಾಪ್ ಹಾಗೂ ಬಿಳಿಜ್ಯೋಗಿ ಮಾದೇಗೌಡ ಎಂಬುವವರಿಗೆ ಸೇರಿದ ಸಾಕುನಾಯಿಗಳನ್ನು ಚಿರತೆ ಕೊಂದು ತಿಂದು ಹಾಕಿದೆ.

ಕಳೆದ 2 ದಿನಗಳ ಹಿಂದೆಯೂ ಸಹ ಮಾದೇಗೌಡ ಎಂಬುವವರಿಗೆ ಸೇರಿದ ಮೇಕೆಯನ್ನು ಹೊತ್ತೊಯ್ದಿದೆ. ಇದರಿಂದ ಗ್ರಾಮಸ್ಥರು ಭಯಭೀತರಾಗಿ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸುದ್ದಿ ಮುಟ್ಟಿಸಿದ್ದಾರೆ. ಅಧಿಕಾರಿಗಳು ಸ್ಥಳಕ್ಕೆ ಭೇಟಿನೀಡಿ ಪರಿಶೀಲಿಸಿ ಚಿರತೆ ಸೇರೆಗೆ ಬೋನ್ ಇಡಲಾಗಿದೆ. ಸಂಜೆಯ ನಂತರ ಯಾರೂ ಸಹ ಒಬ್ಬೊಬ್ಬರೆ ಗದ್ದೆ ಬಯಲಿಗೆ ಹೋಗುವುದು ಬೇಡ ಎಂದು ಅರಣ್ಯ ಇಲಾಖೆ ಅಧಿಕಾರಿ ಗವಿಯಪ್ಪ ತಿಳಿಸಿದ್ದಾರೆ.

ತೊರೆಚಾಕನಹಳ್ಳಿ, ಕೊಕ್ಕರೆಬೆಳ್ಳೂರು ಮಾರ್ಗ ಮಧ್ಯೆ ಚಿರತೆ ಪ್ರತ್ಯಕ್ಷ: ಈ ಮಧ್ಯೆ ಇಲ್ಲಿಗೆ ಸಮೀಪದ ತೊರೆಚಾಕನಹಳ್ಳಿ, ಕೊಕ್ಕರೆ ಬೆಳ್ಳೂರು ಮಾರ್ಗ ಮಧ್ಯೆ ಸೇತುವೆ ಹತ್ತಿರ ಚಿರತೆ ಕಾಣಿಸಿಕೊಂಡಿದ್ದು ಸಾರ್ವಜನಿಕರು ಭಯಭೀತರಾಗಿದ್ದಾರೆ

ಇತ್ತೀಚಿಗೆ ಕ್ಯಾತಘಟ್ಟ, ತೊರೆಚಾಕನಹಳ್ಳಿ, ಕೊಕ್ಕರೆಬೆಳ್ಳೂರಿನ ಹೊರವಲಯದಲ್ಲಿ ಚಿರತೆ ಕಾಣಿಸಿಕೊಳ್ಳುತ್ತಿರುವುದರಿಂದ ರೈತರು, ಸಾರ್ವಜನಿಕರು ಓಡಾಡಲು ಹೆದರುವಂತಾಗಿದೆ.

ಕಳೆದ ಒಂದು ವಾರದ ಹಿಂದೆ ಕ್ಯಾತಘಟ್ಟ ಗ್ರಾಮದ ಅಣ್ಣಾಜೀಗೌಡರ ವರದರಾಜು ಎಂಬುವವರ ಮನೆಯಲ್ಲಿ ದೊಡ್ಡ ಆಡೊಂದನ್ನು ಚಿರತೆ ದಾಳಿ ನಡೆಸಿ ಕೊಂದು ಹಾಕಿ ಎರಡು ಮರಿಗಳನ್ನು ಹೊತ್ತೊಯ್ದಿದೆ ಆಗಲೂ ಸಹ ಅರಣ್ಯ ಇಲಾಖೆ ಅಧಿಕಾರಿಗಳಿಗೆ ವಿಷಯ ಮುಟ್ಟಿಸಿದ್ದಾರೆ. ಆದರೂ ಸಹ ಅರಣ್ಯ ಇಲಾಖೆ ಅಧಿಕಾರಿಗಳು ಚಿರತೆ ಹಿಡಿಯಲು ಕ್ರಮಕೈಗೊಳ್ಳದೆ ಬೇಜವಾಬ್ದಾರಿತನ ಪ್ರದರ್ಶಿಸುತ್ತಿದ್ದಾರೆಂದು ಗ್ರಾ.ಪಂ ಮಾಜಿ ಅಧ್ಯಕ್ಷ ಕ್ಯಾತಘಟ್ಟದ ಗಿರೀಶ್ ಆರೋಪಿಸಿದ್ದಾರೆ.

ಒಂದನೇ ಪುಟದಿಂದ

ಡಿಸಿಎಂ ಡಿ.ಕೆ.ಶಿವಕುಮಾರ್ ತಯಾರಿ...!?

ಮುಂದಿನ ಮುಖ್ಯಮಂತ್ರಿ ಎಂದೇ ಹೇಳಲಾಗುತ್ತಿರುವ ಶಿವಕುಮಾರ್ ಇಂದು ದೆಹಲಿಯ ಇಂದಿರಾ ಭವನದಲ್ಲಿ ವೇಣುಗೋಪಾಲ್ ಹಾಗೂ ಸುರ್ಜೇವಾಲ ಜೊತೆ ಸರ್ಕಾರ ರಚನೆ ಮತ್ತು ಮಂತ್ರಿಮಂಡಲ ಸ್ವರೂಪಕ್ಕೆ ಸಂಬಂಧಿಸಿ ದಂತೆ ಚರ್ಚೆ ಮಾಡಿದ್ದಾರೆ. ರಾಹುಲ್ ಗಾಂಧಿ ಸೂಚನೆಯಂತೆ ಸಂಪುಟದಲ್ಲಿ ಹೊಸಬರು ಮತ್ತು ಯುವಜನರಿಗೆ ಪ್ರಾತಿನಿಧ್ಯ ಕಲ್ಪಿಸುವಲ್ಲಿ ಸಂಭಾವ್ಯ ಮಂತ್ರಿಗಳ ಪಟ್ಟಿಯ ಸಿದ್ಧತೆ ನಡೆಸಿದ್ದಾರೆನ್ನಲಾಗಿದೆ. ಮುಂಬರುವ 2028ರ ವಿಧಾನಸಭಾ ಚುನಾವಣೆ ಗಮನದಲ್ಲಿಟ್ಟುಕೊಂಡು ಶಿವಕುಮಾರ್ ಸಂಪುಟದಲ್ಲಿ ಮೂರರಿಂದ ನಾಲ್ಕು ಮಂದಿ ಉಪಮುಖ್ಯಮಂತ್ರಿ ಸ್ಥಾನ ಸೃಷ್ಟಿಸಲು ಎಐಸಿಸಿ ತೀರ್ಮಾನ ತೆಗೆದುಕೊಂಡಿದೆ ಎನ್ನಲಾಗಿದೆ.

ನಾಲ್ವರು ಡಿಸಿಎಂ: ಸಿದ್ದರಾಮಯ್ಯ ಸಂಪುಟದಲ್ಲಿರುವ ಸಚಿವ ಎಂ.ಬಿ.ಪಾಟೀಲ್, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪುತ್ರ ಪ್ರಿಯಾಂಕ್ ಖರ್ಗೆ, ವಿಧಾಸಭಾಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿರುವ ಯು.ಟಿ.ಖಾದರ್ ಹಾಗೂ ಮುಖ್ಯಮಂತ್ರಿ ಪುತ್ರ ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಉಪಮುಖ್ಯಮಂತ್ರಿ ಆಗುವ ಸಾಧ್ಯತೆ ಇದೆ.

ಇಂದು ಇಡೀ ದಿನ ದೆಹಲಿಯಲ್ಲಿ ಪಕ್ಷದ ವರಿಷ್ಟರ ಜೊತೆ ಮಾತುಕತೆಯಲ್ಲಿ ನಿರತರಾಗಿದ್ದ ಶಿವಕುಮಾರ್ ಇಂದು ಸಂಜೆ ದೆಹಲಿಯಿಂದ ಇಂಡಿಗೋ ವಿಮಾನದಲ್ಲಿ ಪ್ರಯಾಣ ಬೆಳೆಸಿ ರಾತ್ರಿ ಬೆಂಗಳೂರಿಗೆ ಆಗಮಿಸಿದರು. ನಾಳೆ ಬೆಳಿಗ್ಗೆ ಮುಖ್ಯಮಂತ್ರಿ ಕರೆದಿರುವ ಉಪಹಾರ ಕೂಟದಲ್ಲಿ ಭಾಗಿಯಾಗಲಿದ್ದಾರೆ.

ವರಿಷ್ಠರ ಸೂಚನೆ ಮೇರೆಗೆ ಮುಂದಿನ ನಾಯಕನ ಕುರಿತು ಶಿವಕುಮಾರ್ ಸಹ ಮಾಧ್ಯಮಗಳ ಮುಂದೆ ಇದುವರೆಗೂ ಏನನ್ನೂ ಬಾಯಿ ಬಿಟ್ಟಿಲ್ಲ.

ಇಂದು ರಾಜೀನಾಮೆ ಸಾಧ್ಯತೆ

ಇಂದು ಬೆಳಿಗ್ಗೆ ವಿಧಾನ ಸೌಧದ ಪ್ರಾಂಗಣದಲ್ಲಿರುವ ಮಾಜಿ ಪ್ರಧಾನಿ ದಿವಂಗತ ಜವಾಹರ ಲಾಲ್ ನೆಹರು ಪ್ರತಿಮೆಗೆ ಮಾಲಾರ್ಪಣೆ ನಂತರ ಮಾಧ್ಯಮದವರು ಸುತ್ತುವರೆದು ರಾಜೀ ನಾಮೆ ವಿಷಯ ಪ್ರಸ್ತಾಪಿಸಿದ ವೇಳೆ ಏನನ್ನೂ ಪ್ರತಿಕ್ರಿಯಿಸಲು ಅವರು ಇಚ್ಛಿಸಲಿಲ್ಲ. ಆದರೆ, ಕೊನೆಗೆ ಹೊರಡುವ ಮುನ್ನ, ನಾಳೆ ಗುರುವಾರ ನಿಮ್ಮನ್ನು ಭೇಟಿ ಆಗುತ್ತೇನೆ. ಅಲ್ಲಿ ಎಲ್ಲವನ್ನೂ ಮಾತನಾಡುತ್ತೇನೆ ಎಂದಷ್ಟೇ ತಿಳಿಸಿದರು.

ನಾಯಕತ್ವ ಬದಲಾವಣೆ ತೀರ್ಮಾನ: ಕರ್ನಾಟಕ ಕಾಂಗ್ರೆಸ್‌ನಲ್ಲಿನ ಗೊಂದಲ ನಿವಾರಿಸಲು ಎಐಸಿಸಿ ಅಧ್ಯಕ್ಷ ಮಲ್ಲಿ ಕಾರ್ಜುನ ಖರ್ಗೆ ಮಂಗಳವಾರ ಇಡೀ ದಿನ ನಡೆಸಿದ ಸಭೆ ಮತ್ತು ಸಂಧಾನದ ನಂತರ, ನಾಯಕತ್ವ ಬದಲಾವಣೆ ತೀರ್ಮಾನ ಕೈಗೊಳ್ಳಲಾಯಿತು. ಪಕ್ಷದ ಅಧಿನಾಯಕ ರಾಹುಲ್ ಗಾಂಧಿ ಹೇಳಿದರೆ ಅಧಿಕಾರ ಬಿಡುವುದಾಗಿ ಹೇಳಿ ಕೊಂಡೇ ಬಂದಿದ್ದ ಸಿದ್ದರಾಮಯ್ಯ ಅವರಿಗೆ ಮುಖ್ಯಮಂತ್ರಿ ಸ್ಥಾನ ತ್ಯಜಿಸುವಂತೆ ರಾಹುಲ್ ಗಾಂಧಿ ಮೂಲಕವೇ ಖರ್ಗೆ ಹೇಳಿಸಿದರು. ರಾಹುಲ್ ಗಾಂಧಿ ಸಲಹೆ ಮೇರೆಗೆ ಮುಖ್ಯಮಂತ್ರಿ ಸ್ಥಾನ ತ್ಯಜಿಸುವ ನಿರ್ಧಾರ ಕೈಗೊಂಡ ಸಿದ್ದರಾಮಯ್ಯ, ನಿನ್ನೆ ರಾತ್ರಿಯೇ ನಗರಕ್ಕೆ ಹಿಂತಿರುಗಿದರು. ಇಂದು ಜವಾಹರಲಾಲ್ ನೆಹರು ಪುಣ್ಯತಿಥಿ ಹೊರತುಪಡಿಸಿ ಎಲ್ಲಾ ಕಾರ್ಯಕ್ರಮ ರದ್ದು ಮಾಡಿ ಮನೆಯಲ್ಲೇ ಉಳಿದರು.

ಹೊಗಳಿದ ಸುರ್ಜೇವಾಲ ಮರ್ಮವೇನು?

ಮಾಧ್ಯಮಗಳು ಈ ವಿಷಯದ ಬಗ್ಗೆ ಊಹಾಪೋಹಗಳನ್ನು ವರದಿ ಮಾಡಬಾರದು ಎಂದರು. ಕಾಂಗ್ರೆಸ್ ತನ್ನ ನಾಯಕತ್ವದ ವಿಷಯಗಳನ್ನು ನಿರ್ಧರಿಸುವ ಸಾಮರ್ಥ್ಯ ಹೊಂದಿದೆ ಮತ್ತು ಯಾವುದೇ ನಿರ್ಧಾರ ತೆಗೆದುಕೊಂಡರೂ ಅದನ್ನು ಸಾರ್ವಜನಿಕರಿಗೆ ತಿಳಿಸುತ್ತದೆ. ಅಲ್ಲಿಯವರೆಗೆ, ದಯವಿಟ್ಟು ಊಹಾಪೋಹಗಳನ್ನು ಹರಡಬೇಡಿ ಎಂದರು. ಪ್ರಸ್ತುತ, ಕಾಂಗ್ರೆಸ್ ಪಕ್ಷವು ಶಾಸಕಾಂಗ ಪಕ್ಷದ ಯಾವುದೇ ಸಭೆಯನ್ನು ಕರೆದಿಲ್ಲ. ಇನ್ನೂ ಈ ಬಗ್ಗೆ ಯಾವುದೇ ನಿರ್ಧಾರವನ್ನು ತೆಗೆದುಕೊಂಡಿಲ್ಲ. ನಿರ್ಧಾರ ತೆಗೆದುಕೊಂಡ ನಂತರ, ನಾವು ನಿಮಗೆ ತಿಳಿಸುತ್ತೇವೆ. ಅದು ಒಂದು ತಿಂಗಳು, 20 ದಿನಗಳು, ನಾಳೆ ಎಂದು ನಾನು ನಿಮಗೆ ಹೇಳಲು ಸಾಧ್ಯವಿಲ್ಲ ಎಂದು ಸುರ್ಜೇವಾಲ ಹೇಳಿದರು.

ನಿನ್ನೆ ದೆಹಲಿಯಲ್ಲಿ ಸಭೆ ನಡೆಸಲಾಗಿದೆ. ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿಕೆ ಶಿವಕುಮಾರ್, ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ವೇಣುಗೋಪಾಲ್ ಭಾಗಿಯಾಗಿದ್ದರು. ರಾಜ್ಯಸಭಾ ಮತ್ತು ವಿಧಾನ ಪರಿಷತ್ ಬಗ್ಗೆ ಸಭೆ ಮಾಡಿದ್ದೇವು. ಪವರ್ ಶೇರಿಂಗ್ ಆ ರೀತಿಯದ್ದು ಏನು ಇಲ್ಲ. ರಾಜ್ಯಸಭೆಯದ್ದು ಮಾತ್ರ ಚರ್ಚೆ ಆಗಿದೆ. ಸಿಎಂ ಬದಲಾವಣೆ ಬಗ್ಗೆ ಮುಂದೆ ಹೇಳುತ್ತೇವೆ. ಸಿದ್ದರಾಮಯ್ಯ ಅವರು ವಿರೋಧ ಪಕ್ಷದ ನಾಯಕರಾಗಿ, ಎರಡು ಬಾರಿ ಸಿಎಂ ಆಗಿ ಕೆಲಸ ಮಾಡಿದ್ದಾರೆ. ಅವರಿಗೆ ಅವರದ್ದೇ ಆದ ವರ್ಚಸ್ಸು ಇದೆ ಎಂದರು.

ಇನ್ನು ಡಿಕೆ ಶಿವಕುಮಾರ್ ಅವರು ಸಹ ಲೀಡರ್ ಆಗಿ ಬೆಳೆದು ಬಂದವರು. ಹಲವು ಮುಖ್ಯಮಂತ್ರಿಗಳ ಕೈ ಕೆಳಗೆ ಸಚಿವರಾಗಿ ಕೆಲಸ ಮಾಡಿದ್ದಾರೆ ಎಂದು ಹೇಳುವ ಮೂಲಕ ಸುರ್ಜೇವಾಲ ಅವರು, ಮುಂದಿನ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಎಂಬುದನ್ನು ಪರೋಕ್ಷವಾಗಿ ಹೇಳಿದ್ದಾರೆ. ಸಿದ್ದರಾಮಯ್ಯ ಬಹಳ ಪ್ರಮುಖ ನಾಯಕರು. ಡಿಕೆಶಿ ಸಂಘಟನೆಯಿಂದ ಬಂದವರು. ನಾವು ತೆಗೆದುಕೊಳ್ಳುವ ತೀರ್ಮಾನ ನಿಮಗೆ ತಿಳಿಸುತ್ತೇವೆ. ಏನೇ ಆದರೂ, ಅದನ್ನು ಕರ್ನಾಟಕ ಜನತೆಗೆ ಹೇಳುತ್ತೇವೆ. ಕರ್ನಾಟಕ ಜನತೆಗಾಗಿ ನಿರ್ಧಾರ ತೆಗೆದುಕೊಳ್ಳುತ್ತೇವೆ ಎಂದು ಸುರ್ಜೇವಾಲ ತಿಳಿಸಿದ್ದಾರೆ.

ಮೈಸೂರಲ್ಲಿ 2 ಕೋಟಿ ಮೌಲ್ಯದ ದಂತ ಜಪ್ತಿ



ಅಧಿಕಾರಿಗಳು ಮಂಗಳವಾರ ಮೈಸೂರಿಗೆ ಆಗಮಿಸಿದ್ದಾರೆ. ಸಂಜೆ ರಾಮಕೃಷ್ಣನಗರದ ಜಮುನರಾಣಿ ಅವರ ನಿವಾಸದಲ್ಲಿ ದಂತ ಖರೀದಿಸುವ ನೆಪದಲ್ಲಿ ಮಾತನಾಡಿ, ದಂತ ನೈಜವಾಗಿರುವುದನ್ನು ಖಚಿತಪಡಿಸಿಕೊಂಡು ಆರೋಪಿಗಳನ್ನು ಬಂಧಿಸಿದ್ದಾರೆ. ಬಳಿಕ ಮೈಸೂರು ಪ್ರಾದೇಶಿಕ ವಲಯದ ಅರಣ್ಯಾಧಿಕಾರಿಗಳಿಗೆ ಮಾಹಿತಿ ನೀಡಿ, ಆರೋಪಿಗಳು ಹಾಗೂ ವಶಪಡಿಸಿಕೊಂಡ ದಂತವನ್ನು ಅವರ ವಶಕ್ಕೆ ಒಪ್ಪಿಸಿದ್ದಾರೆ.

ಮತ್ತೊಬ್ಬನ ಬಂಧನ: ಮಹಾರಾಷ್ಟ್ರದ ರೆವಿನ್ಯೂ ಇಂಟೆಲಿಜೆನ್ಸ್ ಅಧಿಕಾರಿಗಳು ಮೂವರನ್ನು ವಶಕ್ಕೆ ನೀಡಿದ ಬಳಿಕ ವಿಚಾರಣೆ ಆರಂಭಿಸಿದ್ದ ಅರಣ್ಯಾಧಿಕಾರಿಗಳಿಗೆ ಒಬ್ಬ ಆರೋಪಿ ನೀಡಿದ ಸುಳಿವಿನ ಮೇರೆಗೆ ರಾತ್ರಿಯೇ ಕೊಳ್ಳೇಗಾಲದಲ್ಲಿ ನಾಲ್ಕನೇ ಆರೋಪಿ ಅಪ್ಸರ್ ಪಾಶನನ್ನು ಬಂಧಿಸಿ, ಕರೆತಂದಿದ್ದಾರೆ.

ಸುಳಿವು ನೀಡದ ಆರೋಪಿಗಳು: ಬಂಧಿತರನ್ನು ಬುಧವಾರ ಮಧ್ಯಾಹ್ನ 2 ಗಂಟೆವರೆಗೂ ವಿಚಾರಣೆಗೊಳಪಡಿಸಿದ ಅರಣ್ಯಾಧಿಕಾರಿಗಳಿಗೆ ಆರೋಪಿಗಳು ಮಾತ್ರ ಆನೆ ದಂತ ಮೂಲದ ಸುಳಿವು ನೀಡಲಿಲ್ಲ. ಕೊಳ್ಳೇಗಾಲದ ರಸ್ತೆಯಲ್ಲಿ ಸಿಕ್ಕಿತು ಎಂದು ಒಮ್ಮೆ ಹೇಳಿದರೆ, ಮತ್ತೊಮ್ಮೆ ಯಾವುದೋ ಗ್ರಾಮದ ಬಳಿ ಬಿದ್ದಿದ್ದನ್ನು ಎತ್ತಿಕೊಂಡು ಬಂದಿದ್ದಾಗಿ ಹೇಳುವ ಮೂಲಕ ದಾರಿ ತಪ್ಪಿಸುವ ಯತ್ನ ಮಾಡಿದ್ದಾರೆ.

ಮಾರಾಟಕ್ಕೆ ಸಹಕರಿಸಿ ಎಂದಿದ್ದರು: ನಿವೃತ್ತ ಪೊಲೀಸ್ ಅಧಿಕಾರಿ ಎಂದು ಪರಿಚಯಿಸಿಕೊಂಡಿರುವ ಜಮುನರಾಣಿ ಅವರ ಪತಿ ವೆಂಕಟೇಶ್ ಕಾಕಬುಲ್ ಅವರು ವಯೋವೃದ್ಧರಾಗಿದ್ದು, ಮನೆಯಲ್ಲಿ ನಡೆದ ಘಟನೆಯ ಬಗ್ಗೆ ವಿಚಲಿತರಾದಂತೆ ಕಂಡು ಬಂದಿತು. ಅರಣ್ಯಾಧಿಕಾರಿಗಳ ವಶದಲ್ಲಿದ್ದ ಪತ್ನಿ ಜಮುನಾರಾಣಿ ಅವರೊಂದಿಗೆ ಇದ್ದ ವೆಂಕಟೇಶ್ ಅವರು ಪದೇ ಪದೆ ಸಂಬಂಧಿಕರಿಗೆ ಕರೆ ಮಾಡಿ, ಬಂಧಿತ ಆರೋಪಿಗಳು ಆಗಾಗ ಮನೆಗೆ ಬರುತ್ತಿದ್ದರು. ದಂತ ಮಾರಾಟ ಮಾಡಲು ಭಾಷಾ ಸಮಸ್ಯೆಯಿದೆ. ಅದಕ್ಕೆ ನೆರವಾಗಿ ಎಂದು ಪತ್ನಿ ಜಮುನಾರಾಣಿ ಅವರನ್ನು ಕೋರಿದ್ದರು. ಆದರೆ, ಅಷ್ಟರಲ್ಲಿ ಇಂಟೆಲಿಜೆನ್ಸ್ ಅಧಿಕಾರಿಗಳು ಬಂದು ಬಂಧಿಸಿದ್ದಾರೆ ಎಂದು ಅಳಲು ತೋಡಿಕೊಂಡಿದ್ದಾರೆ.

ಅಪರಾಧ ಹಿನ್ನೆಲೆ ಶಂಕೆ: ಬಂಧಿತ ನಾಲ್ವರು ಆರೋಪಿಗಳು ಅರಣ್ಯ ಅಪರಾಧ ಹಾಗೂ ಇನ್ನಿತರ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿರುವ ಶಂಕೆಯಿದೆ. ಅದರಲ್ಲೂ ಜಮುನಾರಾಣಿ ಅವರು ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡಿರುವ ಅನುಭವ ಹೊಂದಿದ್ದು, ಅವರಿಗೆ ಕೆಲ ಅಪರಾಧಿಗಳ ಲಿಂಕ್ ಇರುವ ಸಾಧ್ಯತೆ ಇದೆ. ಹರಳು, ಕೆಲ ಮಣಿ ಮಾರಾಟ ಮಾಡುತ್ತಿದ್ದುದ್ದಾಗಿ ಜಮುನಾರಾಣಿ ಮಾಹಿತಿ ನೀಡಿದ್ದಾರೆ ಎಂದು ತಿಳಿದು ಬಂದಿದೆ.

ಕಾರ್ಯಾಚರಣೆಯಲ್ಲಿ ನಾಗ್ಪುರದ ರೆವಿನ್ಯೂ ಇಂಟೆಲಿಜೆನ್ಸ್ ಅಧಿಕಾರಿಗಳೊಂದಿಗೆ ಡಿಸಿಎಫ್ ಕೆಪರಮೇಶ್, ಎಸಿಎಫ್ ಜಿ.ವಿನೀತ, ಮಾರ್ಗದರ್ಶನದಲ್ಲಿ ಆರ್‌ಎಫ್‌ಓ ಮಹಮದ್ ಜೆಷಾನ್, ಡಿಆರ್‌ಎಫ್‌ಗಳಾದ ಕನಿಕ, ಜಿ.ವಿ.ಮಹೇಶ್, ಬಿ.ಎ.ಸತೀಶ್, ಸಂಜೀವ್ ಕೆ.ಪಾಟೀಲ್, ಸಿಬ್ಬಂದಿಗಳಾದ ನಾಗರಾಜ್ ಎಸ್ ಲಮಾಣಿ, ಸಂತೋಷ್‌ನಾಯಕ್, ವಿನಾಯಕ ಎಸ್.ಶಂಖವಾಸಿ, ವಿರೂಪಾಕ್ಷ ಲಕ್ಷ್ಮಿಪಾಟೀಲ್, ಸುನಂದ ಶಿವಪ್ಪ ನಿಗಧಿ, ಗಣೇಶ್, ಮಂಜುನಾಥ್ ಪಾಲ್ಗೊಂಡಿದ್ದರು.

ಮಹಿಳೆ, ವೃದ್ಧ ಬಲಿ

ಸಲ್ಲಿಸಿ ಮೃತ ರೈತ ಮಹಿಳೆಯ ಕುಟುಂಬಕ್ಕೆ ಸರ್ಕಾರದಿಂದ ಸೂಕ್ತ ಪರಿಹಾರ ಕೊಡಿಸಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಈ ವೇಳೆ ಹುಣಸೂರು ತಾಲೂಕು ರೈತ ಸಂಘದ ಅಧ್ಯಕ್ಷ ಚಿಕ್ಕಣ್ಣ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಹೆಚ್.ಡಿ.ಕೋಟೆ: ಸಿಡಿಲು ಬಡಿದು ವೃದ್ಧ ನೋರ್ವ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಮಾಳದಹಾಡಿಯಲ್ಲಿ ಬುಧವಾರ ಮಧ್ಯಾಹ್ನ ನಡೆದಿದೆ. ತಾಲೂಕಿನ ಮಾಳದಹಾಡಿ ನಿವಾಸಿ ಅಪ್ಪಯ್ಯ(60) ಸಾವನ್ನಪ್ಪಿದವರು. ಈತ ಎಂದಿನಂತೆ ತಮ್ಮ ಜಮೀನಿಗೆ ಮೇಕೆ ಗಳನ್ನು ಮೇಯಿಸಲು ತೆರಳಿದ್ದರು. ಆದರೆ ಮಧ್ಯಾಹ್ನ ಮಿಂಚು ಗುಡುಗು ಬಿರುಗಾಳಿ ಸಹಿತ ಸುರಿದ ಭಾರೀ ಮಳೆಯಿಂದ ರಕ್ಷಣೆ ಪಡೆಯಲು ಮರದ ಕೆಳಗೆ ನಿಂತಿದ್ದ ವೇಳೆ ಸಿಡಿಲು ಅಪ್ಪಯ್ಯ ಸಾವನ್ನಪ್ಪಿದ್ದಾರೆ ಎನ್ನಲಾಗಿದೆ. ಈ ವೇಳೆ ಅಕ್ಕಪಕ್ಕದ ಜಮೀನಿ ನವರು ಬಂದು ನೋಡಲಾಗಿ ಸಾವನ್ನಪ್ಪಿರುವುದು ಬೆಳಕಿಗೆ ಬಂದಿದ್ದು, ತಕ್ಷಣ ಮೃತನ ಮನೆಯವರು ಹಾಗೂ ಅಂತರಸಂತೆ ಠಾಣೆ ಪೊಲೀಸರಿಗೆ ಮಾಹಿತಿ ನೀಡಿದರು. ಈ ವೇಳೆ ಸ್ಥಳಕ್ಕಾಗ ಮಿಸಿದ ಪೊಲೀಸರು ಪರಿಶೀಲನೆ ನಡೆಸಿ, ಶವವನ್ನು ಹೆಚ್.ಡಿ.ಕೋಟೆ ಸಾರ್ವಜನಿಕ ಆಸ್ಪತ್ರೆ ಶವಾಗಾರಕ್ಕೆ ರವಾನಿಸಿದರು. ಈ ಸಂಬಂಧ ಅಂತರ ಸಂತೆ ಠಾಣೆ ಎಸ್‌ಐ ಚಂದ್ರ ಅವರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಮುಖ್ಯಮಂತ್ರಿ ರಾಜೀನಾಮೆ ಕೊಡ್ತಾರಂತೆ!

ರಾಜೀನಾಮೆ ನೀಡಲಿದ್ದಾರೆ ಎಂದು ತಿಳಿದುಬಂದಿದೆ. ಆದರೆ, ದೆಹಲಿ ಸಭೆ ಬಳಿಕ ಯಾವುದೇ ಶಾಸಕರು, ಸಚಿವರು ಸಿಎಂ ರಾಜೀನಾಮೆ ಗುಟ್ಟು ಬಿಟ್ಟು ಕೊಟ್ಟಿರಲಿಲ್ಲ. ಈ ಮಧ್ಯೆ ಆರ್.ವಿ. ದೇಶಪಾಂಡೆ, ಸಿದ್ದರಾಮಯ್ಯನವರ ರಾಜೀನಾಮೆಯನ್ನು ಬಹಿರಂಗಪಡಿಸಿದ್ದಾರೆ. ಮಾಜಿ ಸಚಿವರಾಗಿರುವ ದೇಶಪಾಂಡೆ ಅವರು ಸಿದ್ದರಾಮಯ್ಯ ಅವರನ್ನು ಅವರ ನಿವಾಸದಲ್ಲಿ ಭೇಟಿಯಾದ ಬಳಿಕ ಈ ಮಾಹಿತಿ ನೀಡಿದ್ದಾರೆ. ಈ ಕುರಿತು ಮಾಧ್ಯಮಗಳೊಂದಿಗೆ ಮಾತನಾಡಿರುವ ಆರ್ ವಿ ದೇಶಪಾಂಡೆ, 'ಸಿಎಂ ಸಿದ್ದರಾಮಯ್ಯ ರಾಜೀನಾಮೆ ಕೊಡ್ತೀನಿ ಅಂತ ಹೇಳಿ ಬಂದಿದ್ದಾರೆ. ನಾವು ಸಿದ್ದರಾಮಯ್ಯ ಅವರಿಗೆ ರಾಜೀನಾಮೆ ಕೊಡಬೇಡಿ ಅಂತ ಹೇಳಿದ್ದೇವೆ. ಆದರೆ, ಅವರು ರಾಜೀನಾಮೆ ಕೊಡ್ತೀನಿ ಅಂತ ದೆಹಲಿಯಲ್ಲಿ ಹೇಳಿ ಬಂದಿದ್ದಾರೆ' ಎಂದು ಹೇಳಿದರು.

ಮುಖ್ಯಮಂತ್ರಿಯವರು ದೆಹಲಿಯಿಂದ ಬಂದ ಮೇಲೆ ನಮ್ಮನ್ನು ಭೇಟಿಯಾದಾಗ, 'ನಾನು ಸಿಎಂ ಸ್ಥಾನಕ್ಕೆ ರಾಜೀನಾಮೆ ಕೊಡ್ತೀನಿ' ಅಂತ ಹೇಳಿ ಬಂದಿದ್ದಾರೆ ಎಂದರು. ನಾಳೆಯೇ (ಗುರುವಾರ) ರಾಜೀನಾಮೆ ಕೊಡ್ತೀವಿ ಅಂತ ಸಿಎಂ ನಮಗೆ ಸ್ಪಷ್ಟವಾಗಿ ಹೇಳಿದ್ದಾರೆ. ಆದರೆ, ನಾವುಗಳು ಸಿಎಂ ಸಿದ್ದರಾಮಯ್ಯ ಅವರಿಗೆ ಯಾವುದೇ ಕಾರಣಕ್ಕೂ ರಾಜೀನಾಮೆ ಕೊಡಬೇಡಿ ಅಂತ ಬಲವಂತವಾಗಿ ಹೇಳಿದ್ದೇವೆ' ಎಂದು ದೇಶಪಾಂಡೆ ತಿಳಿಸಿದ್ದಾರೆ.

ಹೈಕಮಾಂಡ್‌ಗೆ ಮಾತು ಕೊಟ್ಟಿದ್ದೇನೆ: ಮೂಲಗಳ ಪ್ರಕಾರ, ಹಲವು ಸಚಿವರು ಮತ್ತು ಶಾಸಕರು ಸಿದ್ದರಾಮಯ್ಯ ಅವರ ನಿವಾಸಕ್ಕೆ ಭೇಟಿ ನೀಡಿ ಅವರೊಂದಿಗೆ ಚರ್ಚೆ ನಡೆಸಿದರು. ಅವರು ರಾಜೀನಾಮೆ ನೀಡಬಾರದು ಎಂದು ಒತ್ತಾಯಿಸಿ, ಈ ವಿಷಯವನ್ನು ಪಕ್ಷದ ಹೈಕಮಾಂಡ್ ಜೊತೆ ಚರ್ಚಿಸುವುದಾಗಿ ತಿಳಿಸಿದ್ದಾರೆ. ಆದಾಗ್ಯೂ ಕೆಲವು ಶಾಸಕರು ಅವರು ರಾಜೀನಾಮೆ ನೀಡಬಾರದು ಎಂದು ಒತ್ತಾಯಿಸಿದಾಗ, ತಾವು ಹೈಕಮಾಂಡ್‌ಗೆ ಮಾತು ಕೊಟ್ಟಿದ್ದು ಅದನ್ನು ಗೌರವಿಸುತ್ತೇನೆ ಎಂದು ಮುಖ್ಯಮಂತ್ರಿ ಉತ್ತರಿಸಿದರು ಎಂದು ಅವರು ಹೇಳಿದರು.

ಊಹಾಪೋಹಕ್ಕೆ ತೆರೆ: ಇದುವರೆಗೆ ಕೇವಲ ಊಹಾಪೋಹವಾಗಿದ್ದ ರಾಜೀನಾಮೆ ಸುದ್ದಿಗೆ ದೇಶಪಾಂಡೆ ಅವರ ಈ ಹೇಳಿಕೆ ಈಗ ಅಧಿಕೃತ ಮುದ್ರೆ ಒತ್ತಿದಂತಾಗಿದೆ.

ರಾಜೀನಾಮೆಗೆ ಕ್ಷಣಗಣನೆ ಆರಂಭ: ಆರ್.ವಿ. ದೇಶಪಾಂಡೆ ಅವರ ಸ್ಪಷ್ಟ ಉಲ್ಲೇಖ ಮತ್ತು ಎಚ್.ಕೆ. ಪಾಟೀಲ್ ಅವರು ವಿವರಿಸಿದ ಸಿಎಂ ಅವರ ಮೌನವನ್ನು ಗಮನಿಸಿದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೈಕಮಾಂಡ್ ತೀರ್ಮಾನಕ್ಕೆ ಸಂಪೂರ್ಣವಾಗಿ ತಲೆಬಾಗಿದ್ದಾರೆ ಮತ್ತು ನಾಳೆ ಜಂಟಿ ಸುದ್ದಿಗೋಷ್ಠಿಯ ಬಳಿಕ ರಾಜೀನಾಮೆ ಲೋಕಭವನ ತಲುಪುವುದು ಖಚಿತ ಎನ್ನಲಾಗಿದೆ.

ವರದಿ ಸ್ವೀಕರಿಸಿದ ಸಿದ್ದರಾಮಯ್ಯ!

ಈ ಸಮೀಕ್ಷೆಗೆ ಅಂದಾಜು 160 ಕೋಟಿಗೂ ಅಧಿಕ ಹಣವನ್ನು ಖರ್ಚು ಮಾಡಿತ್ತು. ಆದರೆ, ಕಾಂತರಾಜ್ ಆಯೋಗ ಸಿದ್ಧಪಡಿಸಿದ್ದ ವರದಿಯನ್ನು ನಂತರದಲ್ಲಿ ಎಚ್‌ಡಿ ಕುಮಾರಸ್ವಾಮಿ ನೇತೃತ್ವದ ಮೈತ್ರಿ ಸರ್ಕಾರ ಸ್ವೀಕರಿಸಿಲ್ಲ. ಬಳಿಕ ಬಂದ ಬಿಜೆಪಿ ಸರ್ಕಾರ ಕೂಡಾ ವರದಿ ಸ್ವೀಕರಿಸಿರಲಿಲ್ಲ.

2023ರಲ್ಲಿ ಸಿದ್ದರಾಮಯ್ಯನವರು ಎರಡನೇ ಬಾರಿಗೆ ಮುಖ್ಯಮಂತ್ರಿ ಆದ ಸಂದರ್ಭದಲ್ಲಿ, ಹಿಂದುಳಿದ ವರ್ಗಗಳ ಆಯೋಗದ ನೂತನ ಅಧ್ಯಕ್ಷರಾದ ಕೆ. ಜಯಪ್ರಕಾಶ್ ಹೆಗ್ಡೆ ಅವರು ಕಾಂತರಾಜ್ ವರದಿಯ ದತ್ತಾಂಶಗಳನ್ನು ಆಧರಿಸಿ, ಪರಿಷ್ಕೃತ ಅಂತಿಮ ವರದಿಯನ್ನು ಸಿದ್ದಪಡಿಸಿದ್ದರು. ಈ ವರದಿಯನ್ನು ಫೆಬ್ರವರಿ 29, 2024 ರಂದು ಅಧಿಕೃತವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಸಲ್ಲಿಸಿದರು.

ಈ ವರದಿ ಸೋರಿಕೆಯಾಗಿ ಬಹಿರಂಗಗೊಂಡ ಮಾಹಿತಿ ಪ್ರಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಸಂಖ್ಯೆ ರಾಜ್ಯದಲ್ಲಿ ಮೊದಲ ಸ್ಥಾನದಲ್ಲಿದೆ. ಬಳಿಕ ಮುಸ್ಲಿಮರು ಜನಸಂಖ್ಯೆ ಎರಡನೇ ದೊಡ್ಡ ಸಮುದಾಯವಾಗಿ ಹೊರಹೊಮ್ಮಿದ್ದಾರೆ ಎನ್ನಲಾಗಿತ್ತು. ಅಲ್ಲದೆ, ಹಿಂದುಳಿದ ವರ್ಗಗಳು, ಕುರುಬ ಹಾಗೂ ಈಡಿಗ ಸೇರಿದಂತೆ ಇತರ ಹಿಂದುಳಿದ ವರ್ಗಗಳ ಜನಸಂಖ್ಯೆಯೂ ಗಣನೀಯವಾಗಿದೆ ಎಂಬ ಅಂಶಗಳಿದ್ದವು.

ಏನಿದರ ಉದ್ದೇಶ: ರಾಜ್ಯದಲ್ಲಿರುವ ಪ್ರತಿಯೊಂದು ಜಾತಿಯ ನಿಖರವಾದ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಗತಿಯ ಬಗ್ಗೆ ಬೆಳಕು ಚೆಲ್ಲುವುದು ಈ ವರದಿಯ ಉದ್ದೇಶವಾಗಿದೆ. ಅಲ್ಲದೆ, ಸಾಮಾಜಿಕವಾಗಿ, ಆರ್ಥಿಕವಾಗಿ ಹಾಗೂ ಶೈಕ್ಷಣಿಕವಾಗಿ ವಂಚಿತರಾದ ತಳ ಸಮುದಾಯಕ್ಕೆ ಸಾಮಾಜಿಕ ನ್ಯಾಯ ಒದಗಿಸುವುದು ಇದರ ಉದ್ದೇಶವಾಗಿದೆ.

ವರದಿಗೆ ವಿರೋಧ: ಜಾತಿ ಗಣತಿ ವರದಿಗೆ ವ್ಯಾಪಕ ವಿರೋಧ ಎದುರಾಗಿತ್ತು. ಮೇಲ್ಜಾತಿಯ ಸ್ವಾಮೀಜಿಗಳು, ರಾಜಕಾರಣಿಗಳು ಇದಕ್ಕೆ ವಿರೋಧ ಸೂಚಿಸಿದ್ದರು. ಇದು ರಾಜ್ಯ ರಾಜಕಾರಣದಲ್ಲಿ ಭಾರಿ ಬಿರುಗಾಳಿ ಎಬ್ಬಿಸಿತ್ತು. ವೀರಶೈವ–ಲಿಂಗಾಯತ ಮತ್ತು ಒಕ್ಕಲಿಗ ಸಂಘಟನೆಗಳು ಈ ವರದಿಯನ್ನು ಸಂಪೂರ್ಣವಾಗಿ ತಿರಸ್ಕರಿಸಿದ್ದವು. ತಮ್ಮ ಜನಸಂಖ್ಯೆಯನ್ನು ಉದ್ದೇಶಪೂರ್ವಕವಾಗಿ ಕಡಿಮೆ ತೋರಿಸಲಾಗಿದೆ ಮತ್ತು ಸಮೀಕ್ಷೆ ವೈಜ್ಞಾನಿಕವಾಗಿ ನಡೆದಿಲ್ಲ ಎಂಬ ಆರೋಪ ಕೇಳಿಬಂದಿತ್ತು.

ಈ ಹಿನ್ನೆಲೆಯಲ್ಲಿ ಮರು ಸಮೀಕ್ಷೆಗೆ ಆದೇಶ ಮಾಡಲಾಗಿತ್ತು. ಶಾಶ್ವತ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಮಧುಸೂದನ್ ಆರ್. ನಾಯ್ಕ್ ನೇತೃತ್ವದಲ್ಲಿ ವರದಿ ತಯಾರಾಗಿದೆ. ಇದೀಗ ಸಿಎಂ ಸಿದ್ದರಾಮಯ್ಯ ಅವರು ವರದಿಯನ್ನು ಸ್ವೀಕಾರ ಮಾಡಿದ್ದಾರೆ. ಆದರೆ ಈ ವರದಿಯನ್ನು ಜಾರಿಗೆ ತರಬೇಕಾಗಿದೆ. ಸಿದ್ದರಾಮಯ್ಯ ಅವರು ರಾಜೀನಾಮೆ ಕೊಟ್ಟ ಬಳಿಕ ಮುಂದಿನ ಮುಖ್ಯಮಂತ್ರಿ ಅವರು ಈ ವರದಿಯನ್ನು ಜಾರಿಗೆ ತರುತ್ತಾರಾ ಎಂಬುವುದು ಪ್ರಶ್ನೆಯಾಗಿದೆ.

ಒಂದು ವೇಳೆ ಡಿಕೆ ಶಿವಕುಮಾರ್ ಅವರು ಸಿಎಂ ಆದಲ್ಲಿ ಅವರ ನಿಲುವು ಏನಿರಲಿದೆ ಎಂಬ ಬಗ್ಗೆ ಸಾಕಷ್ಟು ಕುತೂಹಲ ಇದೆ. ಹೀಗಾಗಿ ಸಿದ್ದರಾಮಯ್ಯ ಅವರು ಅಧಿಕಾರದ ಕೊನೆಯ ಅವಧಿಯಲ್ಲಿ ವರದಿಯನ್ನು ಸ್ವೀಕರಿಸುವ ಮೂಲಕ ಕೇವಲ ಸಂದೇಶ ರವಾನೆ ಮಾಡುತ್ತಾರೆ. ಇದರ ಹೊರತಾಗಿ ವರದಿಯನ್ನು ಜಾರಿಗೆ ತರಲು ಏನು ಕ್ರಮ ಆಗಲಿದೆ ಎಂಬ ಪ್ರಶ್ನೆಯೂ ಉದ್ಭವಿಸುತ್ತಿದೆ.

ಸಿದ್ದರಾಮಯ್ಯ ನಿವಾಸದ ಮುಂದೆ ಜನಜಾತ್ರೆ

ಸೂಚಿಸಲು ಒತ್ತಾಯಿಸಿ, ಶಾಸಕರ ಸಹಿ ಸಂಗ್ರಹಿಸಿ ಹೈಕಮಾಂಡ್‌ಗೆ ಕಳುಸುತ್ತೇವೆ ಎಂದು ಹಲವು ಸಚಿವರು, ಶಾಸಕರು ಧೈರ್ಯ ತುಂಬಿದ್ದಾರೆ. ಆದರೆ, ಅವರ ಮಾತುಗಳಿಗೆ ಯಾವುದೇ ಪ್ರತಿಕ್ರಿಯೆ ನೀಡದ ಸಿದ್ದರಾಮಯ್ಯ ಬಹು ಸಮಯ ಮೌನಕ್ಕೆ ಶರಣಾಗಿದ್ದರು ಎನ್ನಲಾಗಿದೆ. ಮುಖ್ಯಮಂತ್ರಿ ಭೇಟಿಯ ನಂತರ ಮಾತನಾಡಿದ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ, ಮುಖ್ಯಮಂತ್ರಿ ರಾಜೀನಾಮೆ ನೀಡುವುದಿಲ್ಲ. ಅದು ವದಂತಿ ಅಷ್ಟೆ, ನಾಯಕತ್ವ ಬದಲಾವಣೆಯ ಚರ್ಚೆಯೇ ನಡೆದಿಲ್ಲ ಎಂದರು. ಗೃಹ ಸಚಿವ ಜಿ.ಪರಮೇಶ್ವರ ಅವರು ತಮ್ಮ ನಿವಾಸದಲ್ಲಿ ಬೆಳಿಗ್ಗೆ ಹೋಮ, ಹವನ ನೆರವೇರಿಸಿದರು. ನಂತರ ಸುದ್ದಿಗಾರರ ಜತೆ ಮಾತನಾಡಿ, ದೆಹಲಿಯಲ್ಲಿ ಹೈಕಮಾಂಡ್, ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ನಡುವಿನ ಮಾತುಕತೆಯ ವಿವರ ಸಿಕ್ಕಿಲ್ಲ. ನಾಯಕತ್ವ ಬದಲಾವಣೆಯ ಬಗ್ಗೆ ಯಾವ ನಿರ್ಧಾರ ಮಾಡಿದ್ದಾರೆ ಎಂಬ ಖಚಿತ ಮಾಹಿತಿ ಇಲ್ಲ. ಎಐಸಿಸಿ ಪ್ರಧಾನ ಕಾರ್ಯದರ್ಶಿ ವೇಣುಗೋಪಾಲ್, ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಬಂದ ನಂತರ ಈ ಕುರಿತು ಮಾಹಿತಿ ಸಿಗಬಹುದು. ನಾನು ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿ ಎನ್ನುವುದು ಅಪ್ರಸ್ತುತ ಚರ್ಚೆ ಎಂದರು. ಜವಾಹರಲಾಲ್ ನೆಹರು ಅವರ ಪುಣ್ಯ ತಿಥಿಯ ಅಂಗವಾಗಿ ವಿಧಾನ ಸೌಧದ ಮುಂಭಾಗದ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ಸಿದ್ದರಾಮಯ್ಯ, ದೆಹಲಿ ಭೇಟಿ, ಹೈಕಮಾಂಡ್ ನಾಯಕರ ಜತೆಗಿನ ಮಾತುಕತೆ ಕುರಿತು ಮಾಹಿತಿ ನೀಡಲು ನಿರಾಕರಿಸಿದರು. ಈ ಕುರಿತು ಗುರುವಾರ ಮಾತನಾಡುವೆ ಎಂದು ಹೇಳಿದರು.

ಮೈಸೂರು ಮಿತ್ರ

ಪರೀಕ್ಷೆಯಲ್ಲಿ ಸಾಮೂಹಿಕ ನಕಲು ಬಗ್ಗೆ ವರದಿಗೆ ಸೂಚಿಸಿದ್ದೇನೆ

ಕರ್ನಾಟಕ ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ಹಲಸೆ ಸ್ಪಷ್ಟನೆ



ಪ್ರೊ.ಶರಣಪ್ಪ

ಮೈಸೂರು, ಮೇ27(ಐಎಲ್‌ಯು)– ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯ ನಡೆಸಿದ ಎಂಎ ಪರೀಕ್ಷೆಯಲ್ಲಿ ಮಾಸ್ ಕಾಪಿ ಅಥವಾ ಸಾಮೂಹಿಕ ನಕಲು ಮಾಡಿರುವ ಬಗ್ಗೆ ಸಮಗ್ರ ವರದಿ ನೀಡಬೇಕೆಂದು ವಿಶ್ವವಿದ್ಯಾನಿಲಯದ ಪರೀಕ್ಷಾಂಗ ಕುಲಸಚಿವ ಆನಂದ್ ಕುಮಾರ್ ಅವರಿಗೆ ಸೂಚನೆ ನೀಡಿದ್ದೇನೆ ಎಂದು ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಸ್ಪಷ್ಟಪಡಿಸಿದ್ದಾರೆ. ತಮ್ಮನ್ನು ಸಂಪರ್ಕಿಸಿದ ಮೈಸೂರು ಮಿತ್ರನಿಗೆ ಈ ಮಾಹಿತಿ ನೀಡಿದ ಅವರು, ಬೆಳಗಾವಿಯ ಅಥಣಿಯ ಪರೀಕ್ಷಾ ಕೇಂದ್ರದಲ್ಲಿ ಹಣ ಪಡೆದು ಸಾಮೂಹಿಕ ನಕಲು ಮಾಡಲು ಅವಕಾಶ ನೀಡಿರುವ ಬಗ್ಗೆ ವಿಡಿಯೋ ವೈರಲ್ ಕುರಿತಂತೆ ಕೂಲಂಕುಶವಾಗಿ ವರದಿ ನೀಡುವಂತೆ ಕುಲಸಚಿವರಿಗೆ ಹೇಳಿದ್ದಾರೆ. ಕುಲಸಚಿವರು ನೀಡುವ ವರದಿ ಆಧರಿಸಿ ಸತ್ಯಾಸತ್ಯತೆ ಪರಿಶೀಲಿಸಿ, ಮುಂದಿನ ಕ್ರಮ ಕೈಗೊಳ್ಳುವುದಾಗಿ ಪ್ರೊ.ಶರಣಪ್ಪ ವಿ. ಹಲಸೆ ತಿಳಿಸಿದರು.

ಕೋಲಾರ ಪರೀಕ್ಷಾ ಕೇಂದ್ರದಲ್ಲೂ ವಸೂಲಿ ದಂಧೆ!

ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಕೋಲಾರದ ಪ್ರಾದೇಶಿಕ ಪರೀಕ್ಷಾ ಕೇಂದ್ರದಲ್ಲೂ ಒಂದು ವಿಷಯದ ಪರೀಕ್ಷೆಗೆ ತಲಾ 1 ಸಾವಿರ ವಸೂಲಿ ಮಾಡಿ ಪ್ರತಿ ದಿನ ಲಕ್ಷಾಂತರ ರೂ. ಸುಲಿಗೆ ಮಾಡುತ್ತಿದ್ದಾರೆ ಎಂದು ಕೇಂದ್ರದ ನೊಂದ ವಿದ್ಯಾರ್ಥಿಗಳು ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಪರೀಕ್ಷಾಂಗ ಕುಲಸಚಿವರಿಗೆ ಪತ್ರ ಬರೆದು, ದೂರು ನೀಡಿದ್ದಾರೆ.

ಡಿ ಗ್ರೂಪ್ ನೌಕರರಾದ ವಿನೋದ್ ಸಿಂಗ್, ರಾಜೇಂದ್ರ, ಡಿಇಒ ನೌಕರರಾದ ಪುನೀತ್ ರಾಜ್, ನಂದಿನಿ ಅವರು ಪರೀಕ್ಷಾ ಅಕ್ರಮದಲ್ಲಿ ತೊಡಗಿದ್ದಾರೆ ಎಂದು ದೂರಿದ್ದಾರೆ.

ಉತ್ತರ ಪತ್ರಿಕೆ ಹಾಗೂ ಡೈರಿಗಳಿಗೆ ತಮ್ಮ ಮೂಲ ಹೆಸರು ನಮೂದಿಸದೆ ನಕಲಿ ಸಹಿ ಮಾಡುತ್ತಿದ್ದಾರೆ. ಇವರ ಜೊತೆಗೆ ಪರೀಕ್ಷಾ ಕೇಂದ್ರದಲ್ಲಿ ಸುಮಲತಾ ಹಾಗೂ ನಂದಿನಿ ಅವರ ಪತಿ ಕೂಡ ಹಾಜರಿರುತ್ತಾರೆ. ಇವರ ಚಲನವಲನದಿಂದ ಪರೀಕ್ಷೆ ಬರೆಯಲು ಭಯದ ವಾತಾವರಣವಿದೆ ಎಂದು ವಿದ್ಯಾರ್ಥಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

ನಾವು ಸ್ವಂತವಾಗಿ ಓದಿದ್ದು, ಹಣ ನೀಡದೆ ಹೆಚ್ಚಿ ಬರೆಯುತ್ತೇವೆ ಎಂದರೂ ಅವಕಾಶ ನೀಡುತ್ತಿಲ್ಲ. ಇದರಿಂದ ಹಲವರು ಲಂಚ ಕೊಟ್ಟು ಪರೀಕ್ಷೆ ಬರೆಯುತ್ತಿದ್ದಾರೆ. ಕೂಡಲೇ ಇದಕ್ಕೆ ಕಡಿವಾಣ ಹಾಕಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳ ದಿದ್ದರೆ ಕೋಲಾರ ಜಿಲ್ಲಾದ್ಯಂತ ತೀವ್ರ ರೀತಿಯ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ವಿದ್ಯಾರ್ಥಿಗಳು ಎಚ್ಚರಿಸಿದ್ದಾರೆ.

ಪರಮಾಣು ಸ್ಥಾವರಗಳಿಂದ 2047ರ ವೇಳೆಗೆ 100 ಗಿಗಾ ವ್ಯಾಟ್ ವಿದ್ಯುತ್ ಉತ್ಪಾದನೆ ಗುರಿ

● ಭಾರತೀಯ ಪರಮಾಣು ವಿದ್ಯುತ್ ತಜ್ಞ ಎನ್.ರಾಮಮೋಹನ್ ಮಾಹಿತಿ ● ಶೇ.10ರಷ್ಟು ವಿದ್ಯುತ್ ಪರಮಾಣು ಶಕ್ತಿಯಿಂದ ಉತ್ಪಾದಿಸುವ ಉದ್ದೇಶ



ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿರುವ ಖಾಸಗಿ ಹೋಟೆಲ್‌ನಲ್ಲಿ ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಎಂಜಿನಿಯರ್ಸ್(ಇಂಡಿಯಾ) ಮೈಸೂರು ಸೆಂಟರ್‌ನ ಬೆಳ್ಳಿ ಮಹೋತ್ಸವ ಸಮಾರಂಭ ನಡೆಯಿತು.

ಮೈಸೂರು,ಮೇ27(ಎಂಕೆ)–ಭಾರತದಲ್ಲಿ ವಿದ್ಯುಚ್ಛಕ್ತಿ ಅವಲಂಬನೆ ಹೆಚ್ಚಾಗುತ್ತಿದ್ದು, ನ್ಯೂಕ್ಲಿಯರ್ ಎನರ್ಜಿ ವಿಷನ್ ಅಡಿಯಲ್ಲಿ 2047ರ ವೇಳೆಗೆ ಪರಮಾಣು ಸ್ಥಾವರಗಳ ಮೂಲಕ 100 ಗಿಗಾ ವ್ಯಾಟ್ ವಿದ್ಯುತ್ ಉತ್ಪಾದನೆ ಗುರಿ ನಿಗದಿಪಡಿಸಲಾಗಿದೆ ಎಂದು ಭಾರತೀಯ ಪರಮಾಣು ವಿದ್ಯುತ್ ನಿಗಮ ನಿಯಮಿತ ಮಾಜಿ ಕಾರ್ಯನಿರ್ವಾಹಕ ನಿರ್ದೇಶಕ ಎನ್.ರಾಮಮೋಹನ್ ತಿಳಿಸಿದರು.

ಮೈಸೂರಿನ ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿರುವ ಖಾಸಗಿ ಹೋಟೆಲ್‌ನಲ್ಲಿ ನಡೆದ ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಎಂಜಿನಿಯರ್ಸ್ (ಇಂಡಿಯಾ) ಮೈಸೂರು ಸೆಂಟರ್‌ನ ಬೆಳ್ಳಿ ಮಹೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, ದೇಶದಲ್ಲಿ ವಿದ್ಯುತ್‌ಚಾಲಿತ ವಾಹನಗಳ ಸಂಖ್ಯೆ ಹೆಚ್ಚಿಸುವ ನಿಟ್ಟಿನಲ್ಲಿ ಕ್ರಮಕೈಗೊಳ್ಳಲಾಗುತ್ತಿದ್ದು, ಇಂಧನ ಅಗತ್ಯದ ಶೇ.10ರಷ್ಟು ಭಾಗವನ್ನು ಪರಮಾಣು ಶಕ್ತಿಯಿಂದ ಪೂರೈಸಲು ಉದ್ದೇಶಿಸಲಾಗಿದೆ ಎಂದರು.

> “ಚಿಕ್ಕ ಮಕ್ಕಳಿಗೆ ಪ್ರಶ್ನೆಯನ್ನು ಕೇಳಿಸುತ್ತಾ ದೇವರು ಎಲ್ಲಾ ಕಡೆಯಲ್ಲೂ ಇದ್ದಾನೆ ಎಂದು ಹೇಳಿಕೊಡುತ್ತೇವೆ. ಅಂತಹ ಪ್ರಶ್ನೆಯಲ್ಲಿನ ವಿಸ್ಮಯಗಳನ್ನು ಅರಿಯಲು ವಿಜ್ಞಾನ ಕಲಿಕೆ ಅತ್ಯಾವಶ್ಯಕವಾಗಿದೆ. ಸೂರ್ಯನ ಬೆಳಕಿನಿಂದ ಉತ್ಪತ್ತಿಯಾಗುವ ಉಷ್ಣಾಂಶ ಹಾಗೂ ಸೂರ್ಯನ ಕಿರಣಗಳಿಂದ ಹೊರ ಸೂಸುವ ಇನ್ನಿತರ ಕಿರಣಗಳಿಂದಾಗಿ ವಾತಾವರಣದಲ್ಲಿ ಹಲವು ಬದಲಾವಣೆಗಳಾಗುತ್ತಿರುತ್ತವೆ.
> –ಎನ್.ರಾಮಮೋಹನ್

ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಕೈಗಾ ಪರಮಾಣು ವಿದ್ಯುತ್ ಸ್ಥಾವರ ಸೇರಿದಂತೆ ದೇಶದಲ್ಲಿ 7 ಪರಮಾಣು ವಿದ್ಯುತ್ ಸ್ಥಾವರಗಳು ಕಾರ್ಯನಿರ್ವಹಿಸುತ್ತಿವೆ. ದೇಶದಲ್ಲಿ ವಿದ್ಯುತ್ ಬೇಡಿಕೆಗೆ ಅನುಗುಣವಾಗಿ ವಿದ್ಯುತ್ ಉತ್ಪಾದನೆ ಹೆಚ್ಚಾಗಬೇಕಾದರೆ, ಪರಮಾಣು ಸ್ಥಾವರಗಳ ಸಂಖ್ಯೆಯೂ ಹೆಚ್ಚಾಗಬೇಕು ಎಂದರಲ್ಲದೆ ಪರಮಾಣು ವಿದ್ಯುತ್ ಸ್ಥಾವರಗಳಲ್ಲಿ ಕಾರ್ಯನಿರ್ವಹಣೆ ಕುರಿತು ತಿಳಿಸಿಕೊಟ್ಟರು.

ಮೈಸೂರು': ಸಾಂಸ್ಕೃತಿಕ ನಗರಿ ಮೈಸೂರು ನನ್ನನ್ನು ಸೇರಿ ಹಲವು ಸಾಧಕ ಇಂಜಿನಿಯರ್‌ಗಳಿಗೆ 'ಸೂರು' ನೀಡಿದೆ. ಮೈಸೂರು ಎಂದಾಗ ಮುಖ್ಯವಾಗಿ ಭಾರತ ರತ್ನ ಸರ್ ಎಂ.ವಿಶ್ವೇಶ್ವರಯ್ಯ ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ಸ್ಮರಿಸಲೇಬೇಕು. ಮೈಸೂರು ಒಂದು ಹಂತಕ್ಕೆ ಬೆಳೆದು ವಿಶ್ವದ ಗಮನ ಸೆಳೆದಿದೆ ಎಂದರೆ ಅದಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಪ್ರಮುಖ ಕಾರಣರಾಗಿದ್ದಾರೆ ಎಂದು ರಾಮಮೋಹನ್ ಸ್ಮರಿಸಿದರು.

ತಳಮಟ್ಟದಿಂದ ಆಕಾಶದೆತ್ತರ ಕಟ್ಟಡಗಳನ್ನು ಕಟ್ಟುವ ಸಿವಿಲ್ ಇಂಜಿನಿಯರ್‌ಗಳು ಏನೇ ಕಲಿತಿದ್ದರೂ ಅದು ಗುರುಗಳಿಂದ. ಮನೆಯೇ ಮೊದಲ ಪಾಠ ಶಾಲೆಯಾಗಿದ್ದು, ತಂದೆ–ತಾಯಿಯೇ ಮೊದಲ ಗುರುಗಳು ಎಂಬುದನ್ನು ಎಂದಿಗೂ ಮರೆಯಬಾರದು ಎನ್ನುವುದರೊಂದಿಗೆ ಇಂಜಿನಿಯರ್‌ಗಳ ಕರ್ತವ್ಯ ಮತ್ತು ಜವಾಬ್ದಾರಿ ಕುರಿತು ಮೆಚ್ಚುಗೆ ಮಾತುಗಳನ್ನಾಡಿದರು.

ಅಭಿನಂದನೆ: ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್(ಇಂಡಿಯಾ) ಅಧ್ಯಕ್ಷ ರಾಜೇಂದ್ರ ಕಲ್ಯಾಣಿ ರಾವ್ ಮಾತನಾಡಿ, ಹಲವಾರು ಜಾಗೃತ ಹಾಗೂ ಸೇವಾ ಕಾರ್ಯಕ್ರಮಗಳೊಂದಿಗೆ ಸಂಘಟನೆಗೊಳ್ಳುತ್ತಾ ಬಂದಿರುವ ಎಸಿಸಿಇ(ಐ) ಮೈಸೂರು ಸೆಂಟರ್ ಬೆಳ್ಳಿ ಮಹೋತ್ಸವ ಆಚರಣೆ ಮಾಡುತ್ತಿದ್ದು, ಸಂಘಟನೆಯಲ್ಲಿ ಏನಾದರೂ ತಪ್ಪುಗಳಿದ್ದರೆ ಸರಿಪಡಿಸಿಕೊಳ್ಳಿ ಎಂದು ಸಲಹೆ ನೀಡಿದರು. ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್(ಇಂಡಿಯಾ) ಮಾಜಿ ಅಧ್ಯಕ್ಷ ವಿಜಯ್ ಸನಪ್, ಉಪಾಧ್ಯಕ್ಷ ಜಿ.ಪ್ರೇಮ್‌ಕುಮಾರ್, ಕಾರ್ಯದರ್ಶಿ ಕಾಶಿರಾಮ್ ಅಡೆಪು, ಮೈಸೂರು ಸೆಂಟರ್ ಅಧ್ಯಕ್ಷ ಎಸ್.ಬಿ. ಬಸವರಾಜ್, ಸಮಾರಂಭದ ಅಧ್ಯಕ್ಷ ಎಸ್.ಪ್ರಕಾಶ್, ಗೌರವ ಕಾರ್ಯದರ್ಶಿ ಸಿ.ಎಸ್.ಶ್ರೀಕಾಂತ್, ಖಜಾಂಚಿ ಡಾ.ಬಿ.ಎಸ್.ಕೀರ್ತಿಗೌಡ ಮತ್ತಿತರರಿದ್ದರು.

ಗಂಡನ ಬಿಟ್ಟು ಬಾ, ಇಲ್ಲದಿದ್ರೆ ಕೊಲೆ ಮಾಡುವೆ

ಗೃಹಿಣಿಗೆ ಕಿರುಕುಳ ನೀಡುತ್ತಿದ್ದ ಕಿಡಿಗೇಡಿ ವಿರುದ್ಧ ಎಫ್‌ಐಆರ್

ಮೈಸೂರು, ಮೇ27(ಜಿಎ)–ಪತಿಯನ್ನು ಬಿಟ್ಟು ತನ್ನ ಜೊತೆ ಬರುವಂತೆ ಎರಡು ಮಕ್ಕಳ ಗೃಹಿಣಿಗೆ ಕಿಡಿಗೇಡಿಯೊಬ್ಬ ನಿರಂತರ ಕಿರುಕುಳ ನೀಡುತ್ತಿದ್ದನಲ್ಲದೆ ಕೊಲೆ ಬೆದರಿಕೆ ಹಾಕಿರುವ ಪ್ರಕರಣವೊಂದು ವಿಜಯನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ. ಕಿಡಿಗೇಡಿಯ ಟಾರ್ಚರ್‌ಗೆ ಬೇಸತ್ತ ಗೃಹಿಣಿ ದೂರು ದಾಖಲಿಸಿದ್ದಾರೆ. ಮೈಸೂರಿನ ಬೆಳವಾಡಿಯ ನಾಗೇಂದ್ರ ಎಂಬಾತನ ವಿರುದ್ಧ ಪ್ರಕರಣ ದಾಖಲಾಗಿದೆ.

ಗಂಡನ ಸ್ನೇಹಿತನಾದ ನಾಗೇಂದ್ರ ಕಳೆದ 3–4 ವರ್ಷಗಳಿಂದ ಮಹಿಳೆಗೂ ಪರಿಚಯವಾಗಿದ್ದಾನೆ. ಗಂಡನ ಸ್ನೇಹಿತ ಎಂದು ಆತ್ಮೀಯವಾಗಿ ಮಾತನಾಡಿ ಸಿದ್ದಕ್ಕೆ ನಾಗೇಂದ್ರ ಗೃಹಿಣಿ ಹಿಂದೆ ಬಿದ್ದಿದ್ದಾನೆ. ಗಂಡನನ್ನ ಬಿಟ್ಟು ತನ್ನ ಜೊತೆ ಬರುವಂತೆ ನಿರಂತರವಾಗಿ ಪೀಡಿಸಿದ್ದಾನೆ. ಈ ವಿಚಾರ ಗಂಡನಿಗೆ ತಿಳಿಸಿದಾಗ ಬುದ್ಧಿವಾದ ಹೇಳಿದ್ದಾರೆ. ಇದರಿಂದ ಕೆರಳಿದ ನಾಗೇಂದ್ರ ಮನೆ ಮುಂದೆ ಬಂದು ಗಂಡನಿಗೆ ಹೇಳಿದ್ರೆ ಹೆದರುತ್ತೇನಾ..? ನನ್ನ ಜೊತೆ ಬಾ ಅಂದ್ರೆ ಬರಲ್ವಾ ಗಂಡನಿಗೆ ಹೇಳ್ತೀಯಾ... ಗಂಡನೊಂದಿಗೆ ಹೇಗೆ ಜೀವನ ಮಾಡ್ತೀಯ ನೋಡ್ತೀನಿ.. ಗಂಡನ ಜೊತೆ ಜೀವನ ಮಾಡಲು ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿದ್ದಾನೆ. ನಾಗೇಂದ್ರನ ಟಾರ್ಚರ್‌ಗೆ ಬೆದರಿದ ನೊಂದ ಗೃಹಿಣಿ ವಿಜಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಸರ್ಕಾರಿ ಜಾಗದಲ್ಲಿ ಅಕ್ರಮ ನಿರ್ಮಾಣ ತಡೆಗೆ ಮನವಿ



ಬಿಜೆಪಿ ಮುಖಂಡ ಹೆಚ್.ಜಿ.ಗಿರಿಧರ ನೇತೃತ್ವದಲ್ಲಿ ಬುಧವಾರ ಮೈಸೂರು ಮಹಾ ನಗರಪಾಲಿಕೆ ವಲಯ–9ರ ಆಯುಕ್ತರಿಗೆ ಮನವಿ ಸಲ್ಲಿಸಲಾಯಿತು.

ಮೈಸೂರು, ಮೇ 27(ಎಂಕೆ)–ಮೈಸೂರಿನ ಸಾತಗಳ್ಳಿಯಲ್ಲಿರುವ ಸರ್ಕಾರಿ ಜಾಗದಲ್ಲಿ ಅಕ್ರಮ ಕಟ್ಟಡ ನಿರ್ಮಾಣ ಮತ್ತು ವ್ಯವಸಾಯ ಭೂಮಿಯಲ್ಲಿ ಸೈಟ್ ನಿರ್ಮಾಣ ಮಾಡುತ್ತಿರುವುದನ್ನು ನಿಲ್ಲಿಸುವಂತೆ ಬಿಜೆಪಿ ಮುಖಂಡ ಹೆಚ್.ಜಿ.ಗಿರಿಧರ ನೇತೃತ್ವದಲ್ಲಿ ಪಾಲಿಕೆ ವಲಯ–9ರ ಆಯುಕ್ತರಿಗೆ ಮನವಿ ಸಲ್ಲಿಸಲಾಯಿತು.

ಪಾಲಿಕೆ ವಾರ್ಡ್ ನಂ.34ರ ವ್ಯಾಪ್ತಿಯಲ್ಲಿ ಸಾತಗಳ್ಳಿ ಸರ್ವೆ ನಂ.66 ಸರ್ಕಾರಿ ಭೂಮಿಯಾಗಿದ್ದು, ಸರ್ವೆ ನಂ.55/2ರ ಮಾಲೀಕರು ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿರುವುದಲ್ಲದೆ ಅಕ್ರಮವಾಗಿ ಕೃಷಿ ಭೂಮಿಯಲ್ಲಿ ನಿವೇಶನವನ್ನಾಗಿ ಪರಿವರ್ತಿಸಿ, ಈಗಾಗಲೇ ಎರಡು ಕಟ್ಟಡಗಳನ್ನು ಕಟ್ಟಿ ಇನ್ನೊಂದು ಕಟ್ಟಡ ನಿರ್ಮಾಣಕ್ಕೆ ಮುಂದಾಗಿದ್ದಾರೆ. ಆದ್ದರಿಂದ, ಈ ಕೂಡಲೇ ನಿರ್ಮಾಣ ಮಾಡಿರುವ ಕಟ್ಟಡಗಳನ್ನು ವಶಕ್ಕೆ ಪಡೆದು, ನಿರ್ಮಾಣ ಹಂತದಲ್ಲಿರುವ ಕಟ್ಟಡ ಕಾಮಗಾರಿಯನ್ನು ನಿಲ್ಲಿಸುವಂತೆ ಹಾಗೂ ಸರ್ಕಾರಿ ಆಸ್ತಿಯನ್ನು ಸಂರಕ್ಷಣೆ ಮಾಡುವಂತೆ ಮನವಿ ಪತ್ರದಲ್ಲಿ ಕೋರಿದ್ದಾರೆ. ಈ ವೇಳೆ ಎನ್.ಆರ್.ಕ್ಷೇತ್ರದ ಬಿಜೆಪಿ ಅಧ್ಯಕ್ಷ ಮಂಜುನಾಥ್, ಮುಖಂಡರಾದ ಆನಂದ, ರಾಜೇಂದ್ರ, ಮಣಿರತ್ನಂ, ನಾಗರಾಜ್, ಮುದ್ದಪ್ಪ ಸ್ವಾಮಿ, ಪದ್ಮನಾಭ, ಶಾಂತಕುಮಾರ್, ಧರ್ಮರಾಜ್ ಉಪಸ್ಥಿತರಿದ್ದರು.

ಮೇ 31ರಂದು ಮೈಸೂರಲ್ಲಿ ಚಿತ್ರಕಲೆ, ರೇಖಾಚಿತ್ರ ಸ್ಪರ್ಧೆ

ಮೈಸೂರು, ಮೇ 27(ಎಂಕೆ)–ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಮೇ 31ರಂದು ಮೈಸೂರು ರೈಲು ಸಂಗ್ರಹಾಲಯದಲ್ಲಿ ಶಾಲಾ ಮಕ್ಕಳಿಗಾಗಿ ಚಿತ್ರಕಲೆ ಮತ್ತು ರೇಖಾಚಿತ್ರ ಸ್ಪರ್ಧೆ ಆಯೋಜಿಸಲಾಗಿದೆ. ಅಂದು ಬೆಳಗ್ಗೆ 10.30ರಿಂದ ಮಧ್ಯಾಹ್ನ 1ರವರೆಗೆ 'ಇಂಧನ ಸುರಕ್ಷಿತ ಭವಿಷ್ಯಕ್ಕಾಗಿ ಹಸಿರು ರೈಲ್ವೆ' ವಿಷಯದಲ್ಲಿ ಸ್ಪರ್ಧೆ ನಡೆಯಲಿದ್ದು, ಮಕ್ಕಳಲ್ಲಿ ಪರಿಸರ ಸಂರಕ್ಷಣೆ ಜಾಗೃತಿ ಮೂಡಿಸುವುದು ಸ್ಪರ್ಧೆಯ ಮುಖ್ಯ ಉದ್ದೇಶವಾಗಿದೆ.

ಸ್ಪರ್ಧಾರ್ಥಿಗಳಿಗೆ ಚಿತ್ರಕಲೆ ಹಾಳೆಯನ್ನು ರೈಲು ಸಂಗ್ರಹಾಲಯದಿಂದ ಒದಗಿಸಲಿದ್ದು, ವಿದ್ಯಾರ್ಥಿಗಳು ತಮ್ಮದೇ ಚಿತ್ರಕಲೆ ಸಾಮಗ್ರಿಗಳಾದ ಪೆನ್ಸಿಲ್, ಬಣ್ಣಗಳು, ಬ್ರಷ್‌ಗಳು ಮುಂತಾದವುಗಳನ್ನು ತರಬೇಕು. ಶಾಲಾ ಮಕ್ಕಳು ಸ್ಪರ್ಧೆಯಲ್ಲಿ ಭಾಗವಹಿಸಲು ಅರ್ಹರಾಗಿದ್ದು, ನೋಂದಣಿ ಹಾಗೂ ಆಸನ ವ್ಯವಸ್ಥೆಗಾಗಿ ಬೆಳಿಗ್ಗೆ 10:15ರೊಳಗೆ ಆಗಮಿಸಬೇಕು. ಶಾಲೆಯ ಗುರುತಿನ ಚೀಟಿ ಅಥವಾ ವಯಸ್ಸಿನ ದೃಢೀಕರಣ ದಾಖಲೆಗಳನ್ನು ತರಬೇಕು. ಆಸಕ್ತ ವಿದ್ಯಾರ್ಥಿಗಳು, ಶಾಲೆಗಳು sserailmuseum@gmail.com ಮೂಲಕ ನೋಂದಣಿ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಹಾಗೂ ಉಪವಿಷಯಗಳ ವಿವರಗಳಿಗೆ ಕೆ.ಟಿ. ಶಿವಶಂಕರ್ ಅವರನ್ನು(9164872586) ಸಂಪರ್ಕಿಸಬಹುದು ಎಂದು ಪತ್ರಿಕಾ ಪ್ರಕಟಣೆಯಲ್ಲಿ ಕೋರಲಾಗಿದೆ.

ಸಿದ್ದರಾಮಯ್ಯ ಹಳೇ ಹುಲಿ, ಯಾವಾಗ ಯಾವ ಆಟ ಆಡ್ತಾರೋ ಗೊತ್ತಿಲ್ಲ



ಶೋಭಾ ಕರಂದ್ಲಾಜೆ

ಬೆಂಗಳೂರು: ಸಿದ್ದರಾಮಯ್ಯ ಹಳೇ ಹುಲಿ, ಯಾವಾಗ ಯಾವ ಆಟ ಆಡುತ್ತಾರೋ ಗೊತ್ತಿಲ್ಲ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿದ್ದಾರೆ.

ರಾಜ್ಯ ಕಾಂಗ್ರೆಸ್ ಸರ್ಕಾರದಲ್ಲಿ ಖುರ್ಚಿ ಕಾದಾಟ ವಿಚಾರವಾಗಿ ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ರಾಜೀನಾಮೆ ಕೊಡುವವರೆಗೂ ಗ್ಯಾರಂಟಿಯಿಲ್ಲ. ಮೂರು ವರ್ಷದ ಸರ್ಕಾರದಲ್ಲಿ 2.5 ವರ್ಷ ಸಿಎಂ ಬದಲಾವಣೆ ಬಗ್ಗೆಯೆ ಚರ್ಚೆಯಾಗಿದೆ. ಕಾಂಗ್ರೆಸ್ ಸರ್ಕಾರಕ್ಕೆ ಜನರ ಬಗ್ಗೆ ಕಾಳಜಿಯಿಲ್ಲ. ಒಂದು ಕಡೆ ಬರಗಾಲ ಮತ್ತೊಂದು ಕಡೆ ನೆರೆ ಬರುತ್ತಿದೆ. ಬೆಂಗಳೂರು ಮಳೆಯಿಂದ ಮುಳುಗುತ್ತಿದೆ, ಗಾರ್ಬೆಜ್‌ನ ಹಗರಣ ನಡೆಯುತ್ತಿದೆ. ಇವೆಲ್ಲವನ್ನೂ ಬಿಟ್ಟು ಖುರ್ಚಿಗಾಗಿ ಹೊಡೆದಾಡುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು. ಸಿದ್ದರಾಮಯ್ಯ ಖುರ್ಚಿ ಉಳಿಸುವ ಯತ್ನ ಮಾಡುತ್ತಿದ್ದರೆ, ಡಿಕೆಶಿ ಸಿಎಂ ಆಗುವ ಯತ್ನ ಮಾಡುತ್ತಿದ್ದಾರೆ. ಈ ಮಧ್ಯೆ ರಾಜ್ಯದ ಜನರು ಬಡವರಾಗಿದ್ದಾರೆ. ಯಾವುದೇ ಮಂತ್ರಿಗಳು ಜಿಲ್ಲಾ ಪ್ರವಾಸ ಮಾಡುತ್ತಿಲ್ಲ, ಅಭಿವೃದ್ಧಿಗೆ ಹಣವಿಲ್ಲ. ಜನರ ಕೆಲಸ ಮಾಡಲು 135 ಸೀಟ್ ಗೆಲ್ಲಿಸಿದ್ದಾರೆ, ಜನರ ಕೆಲಸ ಮಾಡಿ ಎಂದು ಕಿಡಿಕಾರಿದರು.

ಪ್ರೊ.ಕೆ.ರಾಮದಾಸ್ ನೆನಪಿನಲ್ಲಿ ಲೇಖನ ಸ್ಪರ್ಧೆಗೆ ಆಹ್ವಾನ



ಪ್ರೊ.ರಾಮಸ್ವಾಮಿ

ಮೈಸೂರು: ಮೈಸೂರಿನ ದೇಸಿ ರಂಗ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಪ್ರೊ. ಕೆ.ರಾಮದಾಸ್ ನೆನಪಿನಲ್ಲಿ ಲೇಖನ ಪ್ರಶಸ್ತಿ ನೀಡಲು ಪ್ರಗತಿಪರ ಮತ್ತು ವಿಚಾರ ಪೂರ್ಣ ಲೇಖನಗಳ ಸ್ಪರ್ಧೆ ಆಯೋಜಿಸಿದೆ. 'ಸಾಮಾಜಿಕ ಬದಲಾವಣೆಯಲ್ಲಿ ಮೀಸಲಾತಿಯ ಪಾತ್ರ: ಸಾಧಕ–ಬಾಧಕಗಳು' ಕುರಿತು ಪ್ರಗತಿಪರ ಆಲೋಚನೆ ಮತ್ತು ವಾಸ್ತವತೆಯನ್ನು ಒಳಗೊಂಡ ಲೇಖನಗಳನ್ನು ನಾಡಿನ ಪ್ರಜ್ಞಾವಂತರಿಂದ ಆಹ್ವಾನಿಸಲಾಗಿದೆ. ಬರುವ ಲೇಖನಗಳಲ್ಲಿ ಮೂರು ಅತ್ಯುತ್ತಮ ಲೇಖನಗಳಿಗೆ ರಾಮದಾಸ್ ಪ್ರಶಸ್ತಿ ಮತ್ತು ನಗದು ಬಹುಮಾನ ನೀಡಲಾಗುವುದು. ಲೇಖನಗಳು ಜೂ. 16 ರೊಳಗೆ ತಲುಪಬೇಕು. ಅವಧಿ ಮುಗಿದ ಮೇಲೆ ಬರುವ ಲೇಖನಗಳನ್ನು ಪ್ರಶಸ್ತಿಗೆ ಪರಿಗಣಿಸಲಾಗುವುದಿಲ್ಲ. ಲೇಖನ ಪ್ರಶಸ್ತಿ ಸಮಾರಂಭವನ್ನು ಜೂ. 28 ರಂದು ಬೆಳಗ್ಗೆ 10.30ಕ್ಕೆ ಮೈಸೂರಿನ ರಂಗಾಯಣದ ಶ್ರೀರಂಗ ವೇದಿಕೆಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರೊ.ಪುರುಷೋತ್ತಮ ಬಿಳಿಮಲೆಯವರ ಸಮ್ಮುಖದಲ್ಲಿ ನೀಡಲಾಗುವುದು. ಚಿಂತಕರಾದ ಡಾ. ರಾಜಪ್ಪ ದಳವಾಯಿ, ಪ್ರೊ. ಕಾಳೇಗೌಡ ನಾಗವಾರ, ಪ್ರೊ. ಸರ್ವಮಂಗಳ ಹಾಗೂ ರಂಗಾಯಣದ ನಿರ್ದೇಶಕ ಸತೀಶ್ ತಿಪಟೂರು ಉಪಸ್ಥಿತರಿರುವರು. ಹೆಚ್ಚಿನ ಮಾಹಿತಿಗೆ ಕೃಷ್ಣ ಜನಮನ, ಮೊ. 7019441509 ಸಂಪರ್ಕಿಸಬಹುದು.

ತ್ರಿಮತಸ್ಥ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಮೈಸೂರು, ಮೇ 27–ಮೈಸೂರಿನ ಆದರ್ಶ ಸೇವಾ ಸಂಘವು 2026ನೇ ಸಾಲಿನ ಎಸ್‌ಎಸ್‌ಎಲ್‌ಸಿ, ಪಿಯುಸಿ, ಡಿಪ್ಲೋಮಾ ಅಂತಿಮ ಪರೀಕ್ಷೆಗಳಲ್ಲಿ ಶೇ.90ಕ್ಕಿಂತ ಹೆಚ್ಚಿನ ಅಂಕಗಳು ಹಾಗೂ ಎಲ್ಲಾ ರೀತಿಯ ಅಂತಿಮ ವರ್ಷದ ಸ್ನಾತಕ ಪದವಿ ಹಾಗೂ ಸ್ನಾತಕೋತ್ತರ ಪದವಿಯ ಪರೀಕ್ಷೆಗಳಲ್ಲಿ ಪ್ರಥಮ ಬಾರಿಗೆ ಹೆಚ್ಚಿನ ಅಂಕಗಳನ್ನು ಗಳಿಸಿ ತೇರ್ಗಡೆಯಾಗಿರುವ ತ್ರಿಮತಸ್ಥ ಬ್ರಾಹ್ಮಣ ಆದರ್ಶ ಸೇವಾ ಸಂಘದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರವನ್ನು ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಸಂಘದ ಕಚೇರಿಯಲ್ಲಿ ಜೂ.10ರೊಳಗೆ ಸಂಜೆ 5ರಿಂದ 6 ಗಂಟೆಯ ಅವಧಿಯಲ್ಲಿ ನಿಗದಿತ ಅರ್ಜಿ ಪಡೆಯಬಹುದು. ಭರ್ತಿ ಮಾಡಿದ ಅರ್ಜಿಯನ್ನು ದೃಢೀಕೃತ ಅಂಕಪಟ್ಟಿ, ಟಿಸಿ ಹಾಗೂ ದಾಖಲಾತಿಗಳೊಂದಿಗೆ ಸಂಘಕ್ಕೆ ಸಲ್ಲಿಸಲು ಜೂ.15 ಕೊನೆ ದಿನ. ಹೆಚ್ಚಿನ ವಿವರಗಳಿಗೆ ಮೊ. 9187469464, 9480166274 ಸಂಪರ್ಕಿಸಬಹುದು.

ಬಾಲ ಕಾರ್ಮಿಕ ದಿನಾಚರಣೆ: ಜೂ.12ಕ್ಕೆ ಬೃಹತ್ ಜಾಗೃತಿ ಜಾಥಾ



ಮೈಸೂರು ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬುಧವಾರ ವಿಶ್ವ ಬಾಲ ಕಾರ್ಮಿಕ ವಿರೋಧಿ ದಿನದ ಪೂರ್ವಭಾವಿ ಸಭೆ ನಡೆಯಿತು.

ಮೈಸೂರು, ಮೇ 27(ಎಂಕೆ)– ವಿಶ್ವ ಬಾಲಕಾರ್ಮಿಕ ದಿನಾಚರಣೆ ಅಂಗವಾಗಿ ಮೈಸೂರು ಜಿಲ್ಲಾಡಳಿತದ ವತಿಯಿಂದ ಜೂ.12ರಂದು ಬೃಹತ್ ಜಾಗೃತಿ ಜಾಥಾ ಹಮ್ಮಿಕೊಳ್ಳಲಾಗಿದೆ ಎಂದು ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ ತಿಳಿಸಿದ್ದಾರೆ.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬುಧವಾರ ವಿಶ್ವ ಬಾಲ ಕಾರ್ಮಿಕ ವಿರೋಧಿ ದಿನದ ಪೂರ್ವಭಾವಿ ಸಭೆ ನಡೆಸಿದ ಅವರು, ವಿಶ್ವ ಬಾಲ ಕಾರ್ಮಿಕ ವಿರೋಧಿ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದರು.

ಜೂ.12ರಂದು ಬೆಳಗ್ಗೆ 8 ಗಂಟೆಗೆ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ನಜರ್‌ಬಾದ್‌ನ ಪೀಪಲ್ಸ್ ಪಾರ್ಕ್‌ವರೆಗೆ ಶಾಲಾ–ಕಾಲೇಜು ವಿದ್ಯಾರ್ಥಿಗಳಿಂದ ಬೃಹತ್ ಜಾಗೃತಿ ಜಾಥಾ ನಡೆಯಲಿದ್ದು, ಕನ್ನಡ–ಸಂಸ್ಕೃತಿ ಇಲಾಖೆ ವತಿಯಿಂದ ಸಾಂಸ್ಕೃತಿಕ ಕಲಾ ತಂಡಗಳು ಜಾಥಾದಲ್ಲಿ ಭಾಗವಹಿಸಲಿವೆ ಎಂದರು.


ನಂತರ 11 ಗಂಟೆಗೆ ಪೀಪಲ್ಸ್ ಪಾರ್ಕ್‌ನಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದ್ದು, ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಸೇವೆ ಸಲ್ಲಿಸುತ್ತಿರುವ ಸ್ವಯಂ ಸೇವಕರನ್ನು ಗುರುತಿಸಿ ಸನ್ಮಾನಿಸಲಾಗುವುದು. ಹಾಗೆಯೇ ಇದೇ ವೇಳೆ ಎಲ್ಲಾ ಸರ್ಕಾರಿ ಕಚೇರಿಗಳು, ಶಾಲಾ–ಕಾಲೇಜುಗಳು, ಗ್ರಾಮ, ತಾಲೂಕು ಮತ್ತು ಜಿಲ್ಲಾ ಪಂಚಾಯತಿ ಕಚೇರಿಗಳಲ್ಲಿ ಬಾಲ ಕಾರ್ಮಿಕ ಪದ್ಧತಿ ವಿರೋಧಿ 'ಪ್ರಮಾಣ ವಚನ' ಸ್ವೀಕರಿಸಲಾಗುವುದು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಮಟ್ಟದ ಎಲ್ಲಾ ಅಧಿಕಾರಿಗಳು ಕಡ್ಡಾಯವಾಗಿ ಭಾಗವಹಿಸುವಂತೆ ಎಡಿಸಿ ತಿಳಿಸಿದರು.

> **ವ್ಯಾಪಕ ಜಾಗೃತಿ ಮೂಡಿಸಿ**
> “ಜಾಗೃತಿ ಜಾಥಾ ಸಂದರ್ಭದಲ್ಲಿ ಅಂಗಡಿ ಹಾಗೂ ವಾಣಿಜ್ಯ ಸಂಸ್ಥೆಗಳಿಗೆ ಬಾಲ ಕಾರ್ಮಿಕ ಮತ್ತು ಕಿಶೋರ ಕಾರ್ಮಿಕ (ನಿಷೇಧ ಹಾಗೂ ನಿಯಂತ್ರಣ) ಕಾಯ್ದೆ 1986ರ ಕುರಿತ ಮಾಹಿತಿಯುಳ್ಳ ಕರಪತ್ರಗಳನ್ನು ಹಂಚುವುದರ ಮೂಲಕ ವ್ಯಾಪಕ ಜಾಗೃತಿ ಮೂಡಿಸಬೇಕು. ನಗರ, ತಾಲೂಕು ಹಾಗೂ ಗ್ರಾಪಂ ವ್ಯಾಪ್ತಿಯಲ್ಲಿ ಧ್ವನಿವರ್ಧಕಗಳ ಮೂಲಕ ಕಾರ್ಮಿಕ ಇಲಾಖೆ ಅಧಿಕಾರಿಗಳು ಪ್ರಚಾರ ಮಾಡಬೇಕು.
> –ಆರ್.ಐಶ್ವರ್ಯ, ಎಡಿಸಿ

ಸ್ಪರ್ಧೆಗಳು: ಬಾಲಕಾರ್ಮಿಕ ಪದ್ಧತಿ ವಿರೋಧಿ ಕುರಿತು ಪ್ರಾಥಮಿಕ, ಪ್ರೌಢ ಶಾಲೆ ಹಾಗೂ ಕಾಲೇಜು ಮಟ್ಟದಲ್ಲಿ ಪ್ರಬಂಧ, ಭಾಷಣ ಮತ್ತು ಚಿತ್ರಕಲಾ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಬಾಲ ಕಾರ್ಮಿಕ ಮತ್ತು ಕಿಶೋರ ಕಾರ್ಮಿಕ ಕಾಯ್ದೆ 1986 ಕಲಂ 17ರಡಿ ನೇಮಕಗೊಂಡ ಅಧಿಕಾರಿಗಳ ತಂಡದ ಸಹಭಾಗಿತ್ವದಲ್ಲಿ ತಾಲೂಕುವಾರು 'ಬಾಲ ಮತ್ತು ಕಿಶೋರ ಕಾರ್ಮಿಕ ರಕ್ಷಣಾ ಅಭಿಯಾನ'ವನ್ನು ಹಮ್ಮಿಕೊಂಡು ಬಾಲ ಕಾರ್ಮಿಕರ ರಕ್ಷಣೆ ಜೊತೆಗೆ ಜಾಗೃತಿ ಮೂಡಿಸಬೇಕು ಎಂದರು. ಮೈಸೂರು ವಿಭಾಗದ ಸಹಾಯಕ ಕಾರ್ಮಿಕ ಆಯುಕ್ತೆ ಲಲಿತಾ ಬಾಯಿ, ಕಾರ್ಮಿಕ ಅಧಿಕಾರಿ ಚೇತನ್ ಕುಮಾರ್, ಯೋಜನಾ ನಿರ್ದೇಶಕ ಎಚ್.ಪಿ. ಮಲ್ಲಿಕಾರ್ಜುನ್ ಮತ್ತಿತರರಿದ್ದರು.

ದೇಶ - ವಿದೇಶ

ಪಾಕ್ ಸಂಪರ್ಕ ಹೊಂದಿರುವ 1,000 ಕೋಟಿ ಮೌಲ್ಯದ ಕೊಕೇನ್ ವಶ



ಗಾಂಧಿನಗರ: ಪ್ರಮುಖ ಮಾದಕವಸ್ತು ವಿರೋಧಿ ಕಾರ್ಯಾಚರಣೆಯಲ್ಲಿ ಗುಜರಾತ್ ಭಯೋತ್ಪಾದನಾ ನಿಗ್ರಹ ದಳ ಮತ್ತು ಭಾರತೀಯ ಕರಾವಳಿ ಕಾವಲು ಪಡೆ ಜಂಟಿಯಾಗಿ ಕಚ್ ಕರಾವಳಿಯಿಂದ 1,000 ಕೋಟಿ ರೂ. ಮೌಲ್ಯದ 100 ಕೆಜಿಗೂ ಹೆಚ್ಚು ಕೊಕೇನ್ ಅನ್ನು ವಶಪಡಿಸಿಕೊಂಡಿವೆ. ಪಾಕಿಸ್ತಾನದ ಖಾಸಿಮ್ ಬಂದರಿನಿಂದ ಈ ಪ್ರದೇಶಕ್ಕೆ ಆಗಮಿಸಿದ್ದ ಯುರೋಪಿಯನ್ ಹಡಗನ್ನು ಭದ್ರತಾ ಸಂಸ್ಥೆಗಳು ತಡೆದು ದಾಳಿ ಮಾಡಿದ ನಂತರ ಈ ಕಾರ್ಯಾಚರಣೆ ನಡೆಸಲಾಯಿತು. ಈ ಸಂಬಂಧ ಒರ್ವನನ್ನು ಬಂಧಿಸಲಾಗಿದೆ. ಪ್ರಕರಣ ಸಂಬಂಧ ಹೆಚ್ಚಿನ ತನಿಖೆ ನಡೆಯುತ್ತಿದ್ದು, ಅಧಿಕಾರಿಗಳು ಮಾರ್ಗ, ಲಾಜಿಸ್ಟಿಕ್ಸ್ ಮತ್ತು ಸಂಬಂಧಪಟ್ಟವರ ಪಾತ್ರದ ಬಗ್ಗೆ ಅಧಿಕಾರಿಗಳು ಪರಿಶೀಲನೆ ನಡೆಸುತ್ತಿದ್ದಾರೆ. ಗುಜರಾತ್ ಪೊಲೀಸ್ ಮಹಾನಿರ್ದೇಶಕರು ಈ ಬಗ್ಗೆ ಪತ್ರಿಕಾಗೋಷ್ಠಿ ನಡೆಸಲಿದ್ದು, ವಶಪಡಿಸಿಕೊಂಡ ವಸ್ತುಗಳು, ಕಾರ್ಯಾಚರಣೆಯ ತಂತ್ರ ಮತ್ತು ಬಂಧನಗಳ ಕುರಿತು ಹೆಚ್ಚಿನ ವಿವರಗಳನ್ನು ಬಹಿರಂಗಪಡಿಸುವ ನಿರೀಕ್ಷೆಯಿದೆ. ಭಾರತದ ಪಶ್ಚಿಮ ಸಮುದ್ರ ಗಡಿಯಲ್ಲಿ ಇತ್ತೀಚಿನ ದಿನಗಳಲ್ಲಿ ನಡೆದ ಪ್ರಮುಖ ಮಾದಕ ವಸ್ತುಗಳನ್ನು ವಶಪಡಿಸಿಕೊಂಡಿರುವ ಕಾರ್ಯಾಚರಣೆಗಳಲ್ಲಿ ಇದೂ ಒಂದು ಎಂದು ಹೇಳಲಾಗುತ್ತಿದೆ. ಕಳೆದ ಒಂದು ವಾರದಲ್ಲಿ ದೇಶದಲ್ಲಿ ನಡೆದ ಮೂರನೇ ಕೊಕೇನ್ ವಶ ಇದಾಗಿದೆ.

ಇರಾನ್ ಯುದ್ಧದಲ್ಲಿ ಪಾಕ್ ಮಧ್ಯಸ್ಥಿಕೆ ವಹಿಸಿರುವುದೇ ತೊಂದರೆ: ಅಮೆರಿಕ ಸೆನೆಟರ್



ವಾಷಿಂಗ್ಟನ್: ಇರಾನ್ ಜೊತೆಗಿನ ಅಮೆರಿಕದ ಯುದ್ಧದಲ್ಲಿ ಪಾಕಿಸ್ತಾನದ ಮಧ್ಯವರ್ತಿ ಪಾತ್ರವು ಸಮಸ್ಯಾತ್ಮಕವಾಗಿದೆ ಎಂದು ರಿಪಬ್ಲಿಕನ್ ಸೆನೆಟರ್ ಲಿಂಡ್ಸೆ ಗ್ರಹಾಂ ಹೇಳಿದ್ದಾರೆ. ಇತ್ತೀಚೆಗೆ ಪಾಕಿಸ್ತಾನದ ರಕ್ಷಣಾ ಸಚಿವ ಖ್ವಾಜಾ ಆಸಿಫ್ ಅವರು ಇಸ್ರೇಲ್ ಮತ್ತು ಅರಬ್ ರಾಷ್ಟ್ರಗಳ ನಡುವಿನ ರಾಜತಾಂತ್ರಿಕ, ಆರ್ಥಿಕ ಮತ್ತು ಭದ್ರತಾ ಸಂಬಂಧಗಳನ್ನು ಸ್ಥಾಪಿಸುವ ಅಬ್ರಹಾಂ ಒಪ್ಪಂದಗಳಿಗೆ ಸೇರುವುದನ್ನು ನಾವು ಬೆಂಬಲಿಸುವುದಿಲ್ಲ ಎಂದು ಹೇಳಿದ್ದರು. ಅದರ ನಂತರ ಲಿಂಡ್ಸೆ ಗ್ರಹಾಂ ಹೇಳಿಕೆ ನೀಡಿದ್ದಾರೆ.

ಪಾಕಿಸ್ತಾನವು ಇಸ್ರೇಲ್‌ನೊಂದಿಗೆ ದೀರ್ಘಕಾಲದಿಂದ ದ್ವೇಷವನ್ನು ಹೊಂದಿದೆ. ಹಾಗಾಗಿ, ಈ ಯುದ್ಧದಲ್ಲಿ ಅವರು ಮಧ್ಯವರ್ತಿಯಾಗಿರುವುದು ಹೆಚ್ಚು ಸಮಸ್ಯಾತ್ಮಕವಾಗಿದೆ ಎಂದು ನನಗೆ ಸ್ಪಷ್ಟವಾಗಿದೆ ಎಂದು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಅಬ್ರಹಾಂ ಒಪ್ಪಂದಗಳ ಬಗ್ಗೆ ಪಾಕಿಸ್ತಾನದ ರಕ್ಷಣಾ ಸಚಿವರು ನೀಡಿದ ಹೇಳಿಕೆಯು, ಅದು ಎಂದಿಗೂ ಇಸ್ರೇಲ್ ಅನ್ನು ನಂಬುವುದಿಲ್ಲ ಎನ್ನುವುದನ್ನು ಸಾಬೀತುಪಡಿಸುತ್ತದೆ. ಆ ವಿಡಿಯೊ ತುಣುಕು ಹಳೆಯದಾಗಿರಬಹುದು,ಆದರೆ ಆ ಭಾವನೆ ಅವರಲ್ಲಿ ಇನ್ನೂ ಇದೆ ಎಂದು ನನಗೆ ಅನಿಸುತ್ತಿದೆ ಎಂದು ಹೇಳಿದ್ದಾರೆ. ಅಮೆರಿಕ–ಇರಾನ್ ಯುದ್ಧದಲ್ಲಿನ ಮಧ್ಯವರ್ತಿಗಳು ಅಬ್ರಹಾಂ ಒಪ್ಪಂದಗಳಿಗೆ ಸಹಿ ಹಾಕುವಂತೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ.

ತಾಂತ್ರಿಕ ದೋಷ: 8 ಗಂಟೆಗಳ ಬಳಿಕ ದೆಹಲಿಗೆ ಮರಳಿದ ಏರ್ ಇಂಡಿಯಾ ವಿಮಾನ



ನವದೆಹಲಿ: ಸುಮಾರು 230 ಪ್ರಯಾಣಿಕರನ್ನು ಹೊತ್ತು ದೆಹಲಿಯಿಂದ ಅಮೆರಿಕದ ಸ್ಯಾನ್ ಫ್ರಾನ್ಸಿಸ್ಕೋಗೆ ಹೊರಟಿದ್ದ ಏರ್ ಇಂಡಿಯಾ ವಿಮಾನವೊಂದು ತಾಂತ್ರಿಕ ದೋಷದ ಕಾರಣದಿಂದಾಗಿ ಬುಧವಾರ ಬೆಳಗ್ಗೆ ಸುಮಾರು 8 ಗಂಟೆಗಳ ಸುದೀರ್ಘ ಹಾರಾಟದ ನಂತರ ಮತ್ತೆ ರಾಷ್ಟ್ರೀಯ ರಾಜಧಾನಿ ದೆಹಲಿಗೆ ಮರಳಿದೆ ಎಂದು ಮೂಲಗಳು ತಿಳಿಸಿವೆ. ವಿಮಾನವು ಸುರಕ್ಷಿತವಾಗಿ ನವದೆಹಲಿಯಲ್ಲಿ ಭೂಸ್ಪರ್ಶ ಮಾಡಿದ್ದು, ಏರ್ ಇಂಡಿಯಾದ ಸುರಕ್ಷತಾ ಮಾನದಂಡಗಳ ಪ್ರಕಾರ ಈಗ ತಾಂತ್ರಿಕ ತಪಾಸಣೆಗೆ ಒಳಪಡಿಸಲಾಗುವುದು ಎಂದು ಏರ್‌ಲೈನ್ಸ್ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ. ಮೇ 27ರಂದು ದೆಹಲಿಯಿಂದ ಸ್ಯಾನ್ ಫ್ರಾನ್ಸಿಸ್ಕೋಗೆ ಹೊರಟಿದ್ದ AI173 ವಿಮಾನವು, ನಾಗರಿಕ ವಿಮಾನಯಾನ ನಿಯಮಾವಳಿಗಳು ನಿಗದಿಪಡಿಸಿದ ಸುರಕ್ಷತಾ ಕಾರ್ಯವಿಧಾನಗಳ ಪ್ರಕಾರ ತಾಂತ್ರಿಕ ಸಮಸ್ಯೆಯಿಂದಾಗಿ ದೆಹಲಿಗೆ ಮರಳಿದೆ ಎಂದು ಸಂಸ್ಥೆ ಹೇಳಿದೆ. ವಿಮಾನ ಹಾರಾಟದ ಲೈವ್ ಮಾಹಿತಿ ನೀಡುವ 'ಫ್ಲೈಟ್‌ರಾಡಾರ್24' ವೆಬ್‌ಸೈಟ್‌ನ ದತ್ತಾಂಶಗಳ ಪ್ರಕಾರ, ವಿಮಾನವು 8 ಗಂಟೆಗಳಿಗೂ ಹೆಚ್ಚು ಕಾಲ ಗಾಳಿಯಲ್ಲೇ ಇತ್ತು. ವಿಮಾನವು ಹಾರಾಟ ಆರಂಭಿಸಿದ 3 ಗಂಟೆಗಳ ಬಳಿಕ ಚೀನಾ ವೈಮಾನಿಕ ವಲಯದಲ್ಲಿದ್ದಾಗ ತಾಂತ್ರಿಕ ದೋಷ ಪತ್ತೆಯಾಗಿತ್ತು.

ಬೈಜುಸ್ ಸಂಸ್ಥಾಪಕ ರವೀಂದ್ರನ್‌ಗೆ ಆರು ತಿಂಗಳ ಜೈಲು ಶಿಕ್ಷೆ



ಸಿಂಗಾಪುರ: ಬೈಜುಸ್ ಕಂಪನಿ ಸಂಸ್ಥಾಪಕ ಬೈಜು ರವೀಂದ್ರನ್‌ಗೆ ಸಿಂಗಾಪುರ ನ್ಯಾಯಾಲಯವು 6 ತಿಂಗಳ ಜೈಲು ಶಿಕ್ಷೆ ವಿಧಿಸಿದೆ. ಕತಾರ್ ಇನ್ವೆಸ್ಟ್‌ಮೆಂಟ್ ಅಥಾರಿಟಿಯ ಅಂಗಸಂಸ್ಥೆ ಕತಾರ್ ಹೋಲ್ಡಿಂಗ್ ಒಪ್ಪಂದ ಉಲ್ಲಂಘನೆ ಮತ್ತು ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಆದೇಶ ಪ್ರಕಟವಾಗಿದೆ. ಆಸ್ತಿ ವಿವರಗಳಿಗೆ ಸಂಬಂಧಿಸಿದಂತೆ ಏಪ್ರಿಲ್ 2024ರಿಂದ ನ್ಯಾಯಾಲಯ ನೀಡಿದ್ದ ಹಲವು ಆದೇಶಗಳನ್ನು ಉಲ್ಲಂಘಿಸಿದ ಹಿನ್ನೆಲೆಯಲ್ಲಿ ಶಿಕ್ಷೆ ವಿಧಿಸಲಾಗಿದೆ. ರವೀಂದ್ರನ್ ಅವರು ಯಾವುದೇ ನೆಪ ಹೇಳದೆ ತಕ್ಷಣವೇ ಸಿಂಗಾಪುರದ ಸಂಬಂಧಿತ ಅಧಿಕಾರಿಗಳ ಮುಂದೆ ಶರಣಾಗಬೇಕು ಎಂದು ಕೋರ್ಟ್ ಖಡಕ್ ಆಗಿ ಸೂಚಿಸಿದೆ. ಕಾನೂನು ವೆಚ್ಚಗಳಿಗಾಗಿ ಸುಮಾರು 90 ಸಾವಿರ ಸಿಂಗಾಪುರ ಡಾಲರ್(67.47 ಲಕ್ಷ ರೂ.) ಪಾವತಿಸುವಂತೆ ಆದೇಶಿಸಲಾಗಿದೆ. ಹೂಡಿಕೆದಾರರ ಹಣ ದುರುಪಯೋಗಪಡಿಸಿಕೊಂಡು, ಆಸ್ತಿ ವಿವರಗಳನ್ನು ಅಂತರರಾಷ್ಟ್ರೀಯ ನ್ಯಾಯಾಲಯಗಳಿಂದ ಮುಚ್ಚಿಡಲು ಪ್ರಯತ್ನಿಸಿದ್ದಕ್ಕೆ ರವೀಂದ್ರನ್ ಅವರಿಗೆ ಜೈಲು ಶಿಕ್ಷೆ ಮತ್ತು ದಂಡ ವಿಧಿಸಲಾಗಿದೆ. ವಿದೇಶಿ ಹೂಡಿಕೆದಾರರು, ಸಾಲದಾತರು ತಮ್ಮ ನಷ್ಟವನ್ನು ವಸೂಲಿ ಮಾಡಲು ಜಾಗತಿಕವಾಗಿ ಇವರ ವಿರುದ್ಧ ಕಾನೂನು ಹೋರಾಟ ನಡೆಸುತ್ತಿದ್ದಾರೆ. ಈ ಹಿಂದೆ ಅಮೆರಿಕದ ನ್ಯಾಯಾಲಯ ಕೂಡ ನ್ಯಾಯಾಲಯದ ಆದೇಶಗಳನ್ನು ನಿರ್ಲಕ್ಷಿಸಿದ್ದಕ್ಕಾಗಿ ಬೈಜು ರವೀಂದ್ರನ್ ಅವರಿಗೆ ಭಾರಿ ಮೊತ್ತದ ದಂಡ ವಿಧಿಸಿತ್ತು.

ಪದ್ಮನಾಭಸ್ವಾಮಿ ದೇವಸ್ಥಾನದಲ್ಲಿ ಭದ್ರತಾ ಲೋಪ: 78 ಗ್ರಾಂ ಚಿನ್ನ, ಅಮೂಲ್ಯ ವಜ್ರಾಭರಣ ನಾಪತ್ತೆ



ತಿರುವನಂತಪುರಂ: ಕೇರಳದ ಶ್ರೀ ಪದ್ಮನಾಭಸ್ವಾಮಿ ದೇವಸ್ಥಾನದಲ್ಲಿ 78 ಗ್ರಾಂ ಚಿನ್ನಾಭರಣಗಳು ಹಾಗೂ ಅಮೂಲ್ಯ ವಜ್ರಾಭರಣ ನಾಪತ್ತೆಯಾಗಿರುವ ಘಟನೆ ಆತಂಕಕ್ಕೆ ಕಾರಣವಾಗಿದೆ. ದೇವಸ್ಥಾನದ ಅಮೂಲ್ಯ ಖಜಾನೆಯ ಭದ್ರತೆ ಕುರಿತು ಇದೀಗ ಗಂಭೀರ ಪ್ರಶ್ನೆಗಳು ಕೇಳಿಬಂದಿವೆ. ಪೊಲೀಸ್ ಮಹಾನಿರ್ದೇಶಕರು ಗೃಹ ಕಾರ್ಯದರ್ಶಿಗೆ ಸಲ್ಲಿಸಿರುವ ವರದಿ ಪ್ರಕಾರ, ದೇವಸ್ಥಾನದ ಸಂಗ್ರಹದಲ್ಲಿದ್ದ ಸುಮಾರು 78 ಗ್ರಾಂ ಚಿನ್ನಾಭರಣಗಳು ಹಾಗೂ 'ವೈರಂ ನಾಮ' ಎಂದು ಕರೆಯಲಾಗುವ ವಜ್ರಾಭರಣ ಪತ್ತೆಯಾಗಿಲ್ಲ ಎಂದು ತಿಳಿದುಬಂದಿದೆ. ದೇವಸ್ಥಾನದಲ್ಲಿನ ಪ್ರಸ್ತುತ ಭದ್ರತಾ ವ್ಯವಸ್ಥೆ ಬಗ್ಗೆ ಕೂಡ ವರದಿಯಲ್ಲಿ ಆತಂಕ ವ್ಯಕ್ತಪಡಿಸಲಾಗಿದೆ. ದೇವಸ್ಥಾನದ ದಾಖಲೆಗಳ ಪ್ರಕಾರ, ವೈರಂ ನಾಮ ವಜ್ರಾಭರಣವನ್ನು ಕೆಲವು ತಿಂಗಳ ಹಿಂದೆ ದುರಸ್ತಿಗಾಗಿ ತೆಗೆದುಕೊಂಡು ಹೋಗಲಾಗಿತ್ತು. ಆದರೆ ಇದು ವರೆಗೆ ಅದನ್ನು ದೇವಸ್ಥಾನಕ್ಕೆ ಮರಳಿ ತಂದಿಲ್ಲ. ಅದೇ ರೀತಿ, ಆರು ತಿಂಗಳ ಹಿಂದೆ ದುರಸ್ತಿಗೆ ಕಳುಹಿಸಿದ್ದ ಚಿನ್ನದ ದೀಪವೂ ನಾಪತ್ತೆಯಾಗಿದೆ ಎಂದು ತಿಳಿದುಬಂದಿದೆ. ಶತಮಾನಗಳ ಇತಿಹಾಸ ಹೊಂದಿರುವ ದೇವಸ್ಥಾನದ ಅಮೂಲ್ಯ ವಸ್ತುಗಳು ಕಾಣೆಯಾಗಿರುವುದು ಭಕ್ತರು ಹಾಗೂ ಅಧಿಕಾರಿಗಳಲ್ಲಿ ಆತಂಕ ಮೂಡಿಸಿದೆ.

ಮೈಸೂರು ಮಿತ್ರ

ಗುರುವಾರ 28 ಮೇ 2026

ಕನಿಷ್ಠ ವೇತನಕ್ಕೆ ಆಗ್ರಹಿಸಿ ಗ್ರಾಪಂ ನೌಕರರ ಸಂಘ ಪ್ರತಿಭಟನೆ



ಕನಿಷ್ಠ ವೇತನಕ್ಕಾಗಿ ಆಗ್ರಹಿಸಿ ಗ್ರಾಪಂ ನೌಕರರು ಸುಂಟಿಕೊಪ್ಪದಲ್ಲಿ ಪ್ರತಿಭಟನೆ ನಡೆಸಿದರು.

ಸುಂಟಿಕೊಪ್ಪ, ಮೇ 27–ಕಾರ್ಮಿಕರಿಗೆ ಶೇ.100ರಷ್ಟು ಕನಿಷ್ಠ ವೈಜ್ಞಾನಿಕ ವೇತನ ಸೇರಿದಂತೆ ವಿವಿಧ ಬೇಡಿಕೆಗೆ ಆಗ್ರಹಿಸಿ ಗ್ರಾಮ ಪಂಚಾಯಿತಿ ನೌಕರರ ಸಂಘ ಸಿಐಟಿಯು ಸಂಯೋಜಿತ ಸಂಘಟನೆ ಪ್ರತಿಭಟನಾ ಧರಣಿ ನಡೆಸಿತು.

ಇಲ್ಲಿನ ಗ್ರಾ.ಪಂ ಕಚೇರಿ ಎದುರು ಧರಣಿ ನಡೆಸಿದ ಗ್ರಾ.ಪಂ. ನೌಕರರನ್ನುದ್ದೇಶಿಸಿ ಸಂಘಟನೆಯ ಭರತ್ ಮಾತನಾಡಿ, ಇದೀಗ ಶೇ.60ರಷ್ಟು ಕಾರ್ಮಿಕರಿಗೆ ವೇತನ ಹೆಚ್ಚಳ ಮಾಡುವ ಕಾರ್ಯ ಸ್ವಾಗತಾರ್ಹವಾದರೂ ಸಂಘಟನೆಯಿಂದ ಶೇ. 100ರಷ್ಟು ಕನಿಷ್ಠ ವೈಜ್ಞಾನಿಕ ವೇತನ ಆಗಬೇಕಾಗಿದೆ. ಸರ್ಕಾರ ಶೇ.60 ರಷ್ಟು ಕಾರ್ಮಿಕರಿಗೆ ವೇತನ ಹೆಚ್ಚಳ ಮಾಡಿರುವ ಆದೇಶದ ಮೇಲೆ ಮಾಲೀಕರು, ಗುತ್ತಿಗೆದಾರರು ನ್ಯಾಯಾಲಯದಿಂದ ತಡೆಯಾಜ್ಞೆ ತಂದು, ಕಾರ್ಮಿಕರಿಗೆ ಅನ್ಯಾಯ ಮಾಡಲು ಸರ್ಕಾರ ದಾರಿ ಮಾಡಿಕೊಡಬಾರದು ಎಂದು ಆಗ್ರಹಿಸಿದರು.

ಮೇ 30, ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ

ಕೇಂದ್ರ ಸರ್ಕಾರ ಜಾರಿಗೆ ತಂದಿರುವ 4 ಸಂಹಿತೆಗಳು ಕಾರ್ಮಿಕರಿಗೆ ಅಪಾಯಕಾರಿಯಾಗಿರುವುದರಿಂದ ರಾಜ್ಯ ಸರ್ಕಾರ ಯಾವುದೇ ಕಾರಣಕ್ಕೂ ಜಾರಿಗೆ ತರಬಾರದು ಎಂಬ ಬೇಡಿಕೆ ಸೇರಿದಂತೆ ವಿವಿಧ ಬೇಡಿಕೆಯೊಂದಿಗೆ ಜಿಲ್ಲಾಧಿಕಾರಿ ಕಚೇರಿ ಮುಂದೆ ಮೇ 30 ರಂದು ಪ್ರತಿಭಟನೆ ನಡೆಸಲಾಗುವುದು ಎಂದರು.

ಪೌರ ಕಾರ್ಮಿಕರಾದ ವಿಶ್ವ ರಂಗಸ್ವಾಮಿ, ಗಾಯತ್ರಿ, ಮಣಿಕಂಠ, ಮುನಿಸ್ವಾಮಿ, ರಾಮಚಂದ್ರ, ವಿಶ್ವ, ರವಿ, ರಾಜ, ಮುರುಗೇಶ್, ರಮೇಶ, ಸಣ್ಣ, ಚಂದ್ರಮಣಿ, ಸಂಧ್ಯಾ, ಶ್ರೀನಿವಾಸ್ ಮೊದಲಾದವರು ಉಪಸ್ಥಿತರಿದ್ದರು.

ಡ್ರಗ್ ಫ್ರೀ ಕ್ಯಾಂಪಸ್ ನೀತಿ ಜಾರಿಗೊಳಿಸಿ



ಜಿಲ್ಲಾ ಮಟ್ಟದ ಮಾದಕ ದ್ರವ್ಯ ಸಮನ್ವಯ ಸಭೆಯನ್ನು ಜಿಲ್ಲಾಧಿಕಾರಿಗಳು ನಡೆಸಿದರು.

ಮಡಿಕೇರಿ, ಮೇ 27–ಜಿಲ್ಲೆಯ ಎಲ್ಲಾ ಶಾಲಾ, ಕಾಲೇಜುಗಳಲ್ಲಿ 'ಡ್ರಗ್ ಫ್ರೀ ಕ್ಯಾಂಪಸ್' ನೀತಿಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವಂತೆ ಜಿಲ್ಲಾಧಿಕಾರಿ ಎಸ್.ಜೆ. ಸೋಮಶೇಖರ್ ಆದೇಶಿಸಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬುಧವಾರ ನಡೆದ ಜಿಲ್ಲಾ ಮಟ್ಟದ ಮಾದಕ ದ್ರವ್ಯ ಸಮನ್ವಯ ಕೇಂದ್ರ ಸಭೆಯ ಅಧ್ಯಕ್ಷತೆ ವಹಿಸಿದ್ದ ಅವರು, ಜಿಲ್ಲೆಯ ಯಾವುದೇ ಶಾಲಾ ಕಾಲೇಜುಗಳಲ್ಲಿ ಡ್ರಗ್ಸ್‌ನಿಂದ ವಿದ್ಯಾರ್ಥಿಗಳ ಭವಿಷ್ಯದ ಮೇಲೆ ಪರಿಣಾಮ ಬೀರದಂತೆ ಎಚ್ಚರ ವಹಿಸಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಎನ್. ಬಿಂದುಮಣಿ ಮಾತನಾಡಿ, ಜಿಲ್ಲೆಯಲ್ಲಿ ಮಾದಕ ವಸ್ತುಗಳ ಮಾರಾಟ, ಸೇವನೆ ಮಾಡುವವರ ವಿರುದ್ಧ ಇಲ್ಲಿಯವರೆಗೆ 186 ಎನ್‌ಡಿಪಿಎಸ್ ಪ್ರಕರಣ ದಾಖಲಿಸಲಾಗಿದೆ. ಜಿಲ್ಲೆಯಲ್ಲಿರುವ ಫೆಡ್ಲರ್‌ಗಳ ಮೇಲೆ ನಿಗಾ ಇಡಲಾಗಿದೆ. ಜಿಲ್ಲೆಯಲ್ಲಿ ವ್ಯಸನಮುಕ್ತರಿಗೆ ಹೆಚ್ಚಿನ ಚಿಕಿತ್ಸೆ ನೀಡಲು ಪುನರ್ವಸತಿ ಕೇಂದ್ರದ ಅಗತ್ಯ ಇದೆ ಎಂದಾಗ, ಜಿಲ್ಲೆಯಲ್ಲಿ ಖಾಸಗಿ ಇಲ್ಲವೆ ಸರ್ಕಾರಿ ಕಟ್ಟಡ ದೊರೆತಲ್ಲಿ ಪುನರ್ವಸತಿ ಕೇಂದ್ರ ತೆರೆಯಬಹುದು ಎಂದಾಗ ಜಿಲ್ಲೆಯಲ್ಲೂ ಕೇಂದ್ರ ಸ್ಥಾಪನೆಗೆ ಅಗತ್ಯ ಅನುದಾನ ಕಲ್ಪಿಸಲಾಗುವುದು ಎಂದು ಜಿಲ್ಲಾಧಿಕಾರಿ ಪ್ರತಿಕ್ರಿಯಿಸಿದರು.

ಉಪ ವಿಭಾಗಾಧಿಕಾರಿ ನಿತಿನ್ ಚಕ್ಕಿ ಮಾತನಾಡಿ, ಜಿಲ್ಲೆಯಲ್ಲಿರುವ ಹೋಂ ಸ್ಟೇ, ರೆಸಾರ್ಟ್, ಹೊಟೇಲ್‌ಗಳಲ್ಲಿ ಕೆಲಸ ಮಾಡುವವರಲ್ಲಿ ಹೊರ ರಾಜ್ಯದ ಕಾರ್ಮಿಕರೇ ಹೆಚ್ಚು ಈ ಹಿನ್ನೆಲೆಯಲ್ಲಿ ಮಾಲೀಕರೊಂದಿಗೆ ಸಭೆ ನಡೆಸಿ ಅನುಮಾನಾಸ್ಪದ ಕೆಲಸಗಾರರ ಬಗ್ಗೆ ಮಾಹಿತಿ ಪಡೆದು, ಮಾದಕ ವಸ್ತು ಸೇವನೆಯ ಬಗ್ಗೆ ಪರೀಕ್ಷೆ ನಡೆಸಲಾಗುತ್ತಿದೆ ಎಂದು ತಿಳಿಸಿದರೆ, ಡ್ರಗ್ಸ್ ಸೇವನೆ ಮಾಡಲು ಅವಕಾಶ ನೀಡುವುದಿಲ್ಲ ಎಂದು ಪೋಷಕರಿಂದ ಮುಚ್ಚಳಿಕೆ ಪತ್ರ ಪಡೆದುಕೊಳ್ಳುವಂತೆ ಶಾಲಾ ಕಾಲೇಜುಗಳ ಆಡಳಿತ ಮಂಡಳಿ ಹಾಗೂ ಪ್ರಾಂಶುಪಾಲರಿಗೆ ಸೂಚನೆ ನೀಡಲಾಗಿದೆ ಎಂದು ಶಿಕ್ಷಣ ಇಲಾಖೆ ಅಧಿಕಾರಿ ಹೇಳಿದರು.

ನಿಷೇಧಿತ ಔಷಧಿಗಳ ಮಾರಾಟ ಮಾಡುವ ಮೆಡಿಕಲ್ ಶಾಪ್‌ಗಳ ಮೇಲೆ ದಾಳಿ ಮಾಡಿ ಕಾನೂನು ಕ್ರಮ ಕೈಗೊಳ್ಳುತ್ತಿರುವುದಾಗಿ ಜಿಲ್ಲಾ ಔಷಧ ನಿಯಂತ್ರಣ ಇಲಾಖೆ ಸಿಬ್ಬಂದಿ ಮಾಹಿತಿ ನೀಡಿದರೆ, ಅಬಕಾರಿ ಇಲಾಖೆಯ ನಿರೀಕ್ಷಕ ಹೆಚ್ ಸಂತೋಷ್ ಕುಮಾರ್ ಮಾತನಾಡಿ, ಪ್ರಸ್ತುತ ಜಿಲ್ಲೆಯಲ್ಲಿರುವ ಮದ್ಯದಂಗಡಿಗಳು, ಬಾರ್‌ಗಳು, ಕ್ಲಬ್‌ಗಳು, ರೆಸಾರ್ಟ್‌ಗಳ ಮೇಲೆ ನಿರಂತರವಾಗಿ ತಪಾಸಣೆ ಕೈಗೊಳ್ಳಲಾಗುತ್ತಿದೆ ಎಂದರೆ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಶೇಖರ್ ಮಾತನಾಡಿ, ವಿದ್ಯಾರ್ಥಿಗಳ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕಾಗಿ ವೈದ್ಯಕೀಯ ತಪಾಸಣೆ ಗಳನ್ನು ನಡೆಸುವುದರ ಜೊತೆಗೆ ಡ್ರಗ್ ಟೆಸ್ಟ್‌ಗಳನ್ನು ನಡೆಸಲು ಕ್ರಮ ಕೈಗೊಳ್ಳಲಾಗಿದೆ ಎಂದರು

ಅರಣ್ಯ ಇಲಾಖೆಯ ಅಧೀಕ್ಷಕ ಅಭಿಷೇಕ್, ಹೆಚ್ಚುವರಿ ಜಿಲ್ಲಾಧಿಕಾರಿ ಸಹಾನ ಎಸ್.ಹಾದಿಮನಿ, ಡಿಡಿಪಿಯು ಪಿ.ಆರ್. ವಿಜಯ, ಡಿಡಿಪಿಐ ಬಸವರಾಜು, ಕೃಷಿ ಇಲಾಖೆಯ ಪಿ.ಎನ್.ಸೋಮಣ್ಣ, ಕಾರಾಗೃಹ ಅಧಿಕಾರಿ ಸಂಜಯ್ ಕುಮಾರ್, ಸಹಾಯಕ ಡ್ರಗ್ ನಿಯಂತ್ರಕ ಹೆಚ್.ಎಂ. ಹರೀಶ್, ಪೊಲೀಸ್ ಅಧಿಕಾರಿ ಮೇದಪ್ಪ ಇತರರು ಇದ್ದರು.

ಸಂಸ್ಕೃತಿ ಉಳಿವಿಗೆ ಯುವಕರು ಮುಂಚೂಣಿಯಲ್ಲಿರಬೇಕು



ಶಿಬಿರದಲ್ಲಿ ಪಾಲ್ಗೊಂಡವರಿಗೆ ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು.

ವಿರಾಜಪೇಟೆ: ಕೊಡವ ಸಂಸ್ಕೃತಿಯ ಉಳಿವಿಗೆ ಯುವಕರು ಸದಾ ಮುಂಚೂಣಿಯಲ್ಲಿರಬೇಕು. ಇದಕ್ಕೆ ಪೋಷಕರು ಪ್ರೋತ್ಸಾಹ ನೀಡುವಂತಾಗಬೇಕು ಎಂದು ಕೊಡವ ಸಂಘ ಒಕ್ಕೂಟದ ಅಧ್ಯಕ್ಷ ಮಾದಂಡ ಎಸ್.ಪೂವಯ್ಯ ಹೇಳಿದರು.

ಕೊಡವ ಸಮಾಜದ ಆಡಳಿತ ಮಂಡಳಿ ಸಹಯೋಗದೊಂದಿಗೆ ಸಮಾಜದ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಕೊಡವ ಆಟ್ ಪಾಟ್ ಪಡಿಪು 40 ದಿನಗಳ ಕಾರ್ಯಾಗಾರದ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಅವರು, ಕೊಡವ ಸಂಸ್ಕೃತಿ ಆಚಾರ ವಿಚಾರ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಆಟ್ ಪಾಟ್ ಪಡಿಪು ಕಾರ್ಯಕ್ರಮಕ್ಕೆ ಸಂಘ ಸಂಸ್ಥೆಗಳು ಮುಂಚೂಣಿಯಲ್ಲಿರಬೇಕೆಂದು ಹೇಳಿದರು

ಬಾಳೊಪಾಟ್, ಉಮ್ಮತ್ತಾಟ್, ವಸ್ತ್ರ ಹಾಗೂ ಚೇಲೆ ಕಟ್ಟುವ ಬಗ್ಗೆ ಮಕ್ಕಳು ಮತ್ತು ಯುವಜನಾಂಗಕ್ಕೆ ತರಬೇತಿ ನೀಡಲಾಯಿತು. ಬಾಳೊಪಾಟ್ ಮುಖ್ಯ ತರಬೇತುದಾರರಾಗಿ ಅಚ್ಚಪಂಡ ಪಟ್ಟು ಅಯ್ಯಪ್ಪ , ಅಪ್ಪನೆರವಂಡ ರತಿ ಕಾರ್ಯಪ್ಪ ಭಾಗವಹಿಸಿದ್ದರು. ಉಮ್ಮತ್ತಾಟ್ ತರಬೇತಿಯನ್ನು ಚೊಟ್ಟಂಡ ತಶ್ವಿ ಸೋಮಯ್ಯ ನೀಡಿದರು, ಸಂಚಾಲಕರಾಗಿ ಒಕ್ಕೂಟದ ಉಪಾಧ್ಯಕ್ಷ ಮುಂಡ್ಯೊಳಂಡ ಅಜಿತ್ ಸುಬ್ಬಯ್ಯ, ಗೌರವ ಕಾರ್ಯದರ್ಶಿ ಬಾಚಿರ ಜಗದೀಶ್, ಮೂಕೊಂಡ ಪ್ರೀತ್ ಈರಪ್ಪ, ಹಾಗೂ ಚಿಕ್ಕಪೇಟೆ ಕೇರಿಯ ಉಪಾಧ್ಯಕ್ಷ ಬಿದ್ದಂಡ ನಾಣಿ ದೇವಯ್ಯ ನೆರವೇರಿಸಿದರು.

ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಸಮಾಜದ ಅಧ್ಯಕ್ಷ ಅಮ್ಮಣಿಚಂಡ ರವಿ ಉತ್ತಪ್ಪ, ಕಾರ್ಯದರ್ಶಿ ಮಾಳೆಟಿರ ಶ್ರೀನಿವಾಸ್ ಹಾಗೂ ನಿವೃತ್ತ ಪ್ರಾಂಶುಪಾಲೆ ತಾತಂಡ ಜ್ಯೋತಿ ಪ್ರಕಾಶ್, ಕೊಡವ ಕಲೆ ಸಂಸ್ಕೃತಿ, ಪದ್ಧತಿ, ಪರಂಪರೆ ಉಳಿಸಿ ಬೆಳೆಸುವ ಬಗ್ಗೆ ಮಾರ್ಗದರ್ಶನ ನೀಡಿದರು, ಶಿಬಿರದಲ್ಲಿ ಪಾಲ್ಗೊಂಡವರಿಗೆ ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು.

ಚೊಟ್ಟಂಡ ತಶ್ವಿ ಪ್ರಾರ್ಥಿಸಿದರು, ಅಜಿತ್ ಸುಬ್ಬಯ್ಯ–ಬಾಚಿರ ಜಗದೀಶ್ ನಿರೂಪಿಸಿದರೆ, ಬಿದ್ದಂಡ ನಾಣಿ ದೇವಯ್ಯ ವಂದಿಸಿದರು.

ಇಂದಿನಿಂದ ಧರ್ಮಸ್ಥಳ, ಕುಕ್ಕೆ ಸುಬ್ರಮಣ್ಯಕ್ಕೆ ನಾನ್ ಎಸಿ ಸ್ಲೀಪರ್ ಬಸ್ಸು

ಮಡಿಕೇರಿ, ಮೇ 27– ಶ್ರೀ ಕ್ಷೇತ್ರ ಧರ್ಮಸ್ಥಳ ಹಾಗೂ ಕುಕ್ಕೆಸುಬ್ರಹ್ಮಣ್ಯಕ್ಕೆ ಬರುವ ಯಾತ್ರಾರ್ಥಿಗಳು ಹಾಗೂ ಸಾರ್ವಜನಿಕರ ಅನುಕೂಲಕ್ಕಾಗಿ ಹೊಸ ನಾನ್ ಎಸಿ ಸ್ಲೀಪರ್ ಸಾರಿಗೆ ಬಸ್ ಸಂಚಾರ ಮೇ 28ರಿಂದ ಆರಂಭವಾಗಲಿದೆ.

ಸಮಯ ಇಂತಿದೆ: ಧರ್ಮಸ್ಥಳದಿಂದ ಬೆಳಗ್ಗೆ 6.30 ಗಂಟೆಗೆ ಹೊರಟು, ಕುಕ್ಕೆ ಸುಬ್ರಹ್ಮಣ್ಯ ಬಿಸ್ಲೆ, ಶನಿವಾರಸಂತೆ, ಸೋಮವಾರಪೇಟೆ, ಕುಶಾಲನಗರ, ಮತ್ತು ಮೈಸೂರು ಮುಖಾಂತರ ಬೆಂಗಳೂರಿಗೆ ಸಂಜೆ 4.30ಕ್ಕೆ ತಲುಪಲಿದೆ.

ಅದೇ ಬಸ್ಸು ಬೆಂಗಳೂರು ಕೆಂಪೇಗೌಡ ಬಸ್ಸು ನಿಲ್ದಾಣದಿಂದ ರಾತ್ರಿ 9.45ಕ್ಕೆ ಹೊರಟು, ಕುಶಾಲನಗರ, ಸೋಮವಾರಪೇಟೆ, ಶನಿವಾರಸಂತೆ, ಕೊಡುರಸ್ತೆ, ಬಿಸ್ಲೆ, ಕುಕ್ಕೆಸುಬ್ರಹ್ಮಣ್ಯ ಮಾರ್ಗವಾಗಿ ಧರ್ಮಸ್ಥಳಕ್ಕೆ ಸಾರಿಗೆ ಕಾರ್ಯಾಚರಣೆ ಮಾಡಲಾಗುವುದು. ಪ್ರಯಾಣಿಕರು ಹತ್ತಿರದ ಬಸ್ಸು ನಿಲ್ದಾಣ ಅಥವಾ ಟಿಕೆಟು ಕೌಂಟರ್‌ನಿಂದ ಅಥವಾ www.ksrtc.inನಲ್ಲಿ ಆನ್‌ಲೈನ್ ಬುಕ್ಕಿಂಗ್ ಮಾಡಿಕೊಳ್ಳಬಹುದು. ಪ್ರಯಾಣಿಕರು ಇದರ ಸದುಪಯೋಗ ಪಡೆದುಕೊಳ್ಳುವಂತೆ ಪುತ್ತೂರು ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀಹರಿಬಾಬು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಷ್ಟ್ರ ಮಟ್ಟಕ್ಕೆ ಜಿಲ್ಲಾ ಸರ್ಕಾರಿ ನೌಕರರ ಪುರುಷರ ಹಾಕಿ ತಂಡ ಆಯ್ಕೆ



ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾದ ಜಿಲ್ಲಾ ಸರ್ಕಾರಿ ನೌಕರರ ಪುರುಷರ ಹಾಕಿ ತಂಡ

ಮಡಿಕೇರಿ, ಮೇ 27–ಜಿಲ್ಲಾ ಸರ್ಕಾರಿ ನೌಕರರ ಪುರುಷರ ಹಾಕಿ ತಂಡ ರಾಜ್ಯ ಮಟ್ಟದ ಟೂರ್ನಿಯಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದೆ.

ರಾಜ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ರಾಜ್ಯ ಸರ್ಕಾರಿ ನೌಕರರ ಸಂಘದ ಜಂಟಿ ಆಶ್ರಯದಲ್ಲಿ ಬೆಂಗಳೂರಿನ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಹಾಕಿ ಕ್ರೀಡಾಂಗಣದಲ್ಲಿ ನಡೆದ ರಾಜ್ಯ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟದ ಹಾಕಿ ಟೂರ್ನಿಯಲ್ಲಿ ಕೊಡಗು ಜಿಲ್ಲಾ ಸರ್ಕಾರಿ ನೌಕರರ ಸಂಘದ ಪುರುಷರ ತಂಡದ ನಾಯಕ ಬಿ.ಟಿ.ಪೂರ್ಣೇಶ್ ನೇತೃತ್ವದಲ್ಲಿ 7–1 ಗೋಲುಗಳಿಂದ ಮೈಸೂರು ಜಿಲ್ಲಾ ತಂಡವನ್ನು ಮಣಿಸಿ ರಾಷ್ಟ್ರೀಯ ಟೂರ್ನಿಗೆ ಅರ್ಹತೆ ಪಡೆಯಿತು.

ರಾಜ್ಯಮಟ್ಟದ ಹಾಕಿ ಟೂರ್ನಿಯಲ್ಲಿ ಜಿಲ್ಲಾ ಸರ್ಕಾರಿ ನೌಕರರ ಸಂಘದ ತಂಡ 22 ಬಾರಿ ಗೆಲುವು ಸಾಧಿಸಿ ರಾಷ್ಟ್ರೀಯ ಹಾಕಿ ಟೂರ್ನಿಗೆ ಆಯ್ಕೆಯಾಗಿರುವುದು ಹೆಗ್ಗಳಿಕೆ ತಂದಿದೆ. ರಾಷ್ಟ್ರೀಯ ಹಾಕಿ ಟೂರ್ನಿಗೆ ಜಿಲ್ಲಾ ಸರ್ಕಾರಿ ನೌಕರರ ತಂಡ ಸತತವಾಗಿ ಆಯ್ಕೆಯಾಗುತ್ತಿರುವುದು ಕ್ರೀಡೆಯ ತವರೆನಿಸಿದ ಜಿಲ್ಲೆಯ ಕ್ರೀಡಾಭಿಮಾನಿಗಳಿಗೆ ಸಂತಸ ಮೂಡಿಸಿದೆ ಎಂದು ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಂ.ಸಿ.ಅರುಣ್ ಕುಮಾರ್ ಸಂತಸ ವ್ಯಕ್ತಪಡಿಸಿದ್ದಾರೆ.

ಅಕ್ಟೋಬರ್ ನಂತರ ನಡೆಯಲಿರುವ ರಾಷ್ಟ್ರೀಯ ಪುರುಷರ ಹಾಕಿ ಟೂರ್ನಿಯಲ್ಲಿ ಕೊಡಗು ಜಿಲ್ಲಾ ಪುರುಷರ ತಂಡ ರಾಜ್ಯವನ್ನು ಪ್ರತಿನಿಧಿಸಲಿದೆ ಎಂದು ಟೂರ್ನಿಯ ತಂಡದ ನಾಯಕ ಬಿ.ಟಿ. ಪೂರ್ಣೇಶ್ ತಿಳಿಸಿದ್ದಾರೆ.

ಟಿ.ಎಸ್.ಗೋಪಾಲ್ ತಾಲೂಕು ಸಾಹಿತ್ಯ ಸಮ್ಮೇಳನದ ಅಧ್ಯಕ್ಷ

ಮಡಿಕೇರಿ: ಪೊನ್ನಂಪೇಟೆ ತಾಲೂಕು ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಸಾಹಿತಿ ಟಿ.ಎಸ್.ಗೋಪಾಲ್ ಅವರನ್ನು ಆಯ್ಕೆ ಮಾಡಲಾಗಿದೆ.



ಪೊನ್ನಂಪೇಟೆ ತಾಲೂಕು ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಜೂ.1ರಂದು ಹುದಿಕೇರಿಯ ಜನತಾ ಹೈಸ್ಕೂಲ್ ಮೈದಾನದಲ್ಲಿ ನಡೆಸಲು ಜಿಲ್ಲಾ ಅಧ್ಯಕ್ಷ ಎಂ.ಪಿ ಕೇಶವ ಕಾಮತ್ ನೇತೃತ್ವದಲ್ಲಿ ನಡೆದ ತಾಲೂಕು ಕಾರ್ಯಕಾರಿ ಸಮಿತಿ ಸಭೆಯಲ್ಲಿ ತೀರ್ಮಾನಿಸಿತು.

ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿರುವ ಟಿ.ಎಸ್.ಗೋಪಾಲ್ 100ಕ್ಕೂ ಹೆಚ್ಚು ವೈವಿಧ್ಯಮಯ ಕೃತಿಗಳನ್ನು ಬರೆದಿದ್ದು, ಪೊನ್ನಂಪೇಟೆ ತಾಲೂಕಿನ ಶ್ರೀಮಂಗಲದ ಪಿಯು ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ, ಪ್ರಾಂಶುಪಾಲರಾಗಿ 20ಕ್ಕೂ ಹೆಚ್ಚು ವರ್ಷ ಸೇವೆ ಸಲ್ಲಿಸಿದ್ದಾರೆ. ಇವರ ಸಾಹಿತ್ಯ ಕೃಷಿಗಾಗಿ ಈಗಾಗಲೇ ಹಲವಾರು ಪ್ರಶಸ್ತಿಗಳು ಸಂದಿವೆ.

ಮೇಕೆದಾಟು ಯೋಜನೆಗೆ ತಮಿಳುನಾಡು ಸಿಎಂ ವಿಜಯ ಆಕ್ಷೇಪ ಖಂಡಿಸಿ ಪ್ರತಿಭಟನೆ



ಕರ್ನಾಟಕ ಸೇನಾಪಡೆ ವತಿಯಿಂದ ಚಾಮರಾಜನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ಚಾಮರಾಜನಗರ: ಮೇಕೆದಾಟು ಯೋಜನೆಗೆ ತಮಿಳುನಾಡು ಮುಖ್ಯಮಂತ್ರಿ ಜೋಸೆಫ್ ವಿಜಯ್ ವಿರೋಧ ವ್ಯಕ್ತಪಡಿಸಿರುವುದನ್ನು ಖಂಡಿಸಿ ಕರ್ನಾಟಕ ಸೇನಾಪಡೆ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಭುವನೇಶ್ವರಿ ವೃತ್ತದಲ್ಲಿ ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ. ಶ್ರೀನಿ ವಾಸಗೌಡ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾನಿರತರು ರಾಷ್ಟ್ರೀಯ ಹೆದ್ದಾರಿ ತಡೆದು ತಮಿಳುನಾಡು ಸರ್ಕಾರ, ಮುಖ್ಯಮಂತ್ರಿ ವಿಜಯ್ ವಿರುದ್ಧ ಘೋಷಣೆ ಕೂಗಿ ಆಕ್ರೋಶಿಸಿದರು

ಪ್ರತಿಭಟನೆ ನೇತೃತ್ವ ವಹಿಸಿದ್ದ ಶ್ರೀನಿವಾಸಗೌಡ ಮಾತನಾಡಿ, ಮೇಕೆದಾಟು ಯೋಜನೆಗೆ, ತಮಿಳುನಾಡು ಮುಖ್ಯಮಂತ್ರಿ ತೀವ್ರವಾಗಿ ವಿರೋಧಿಸಿರುವುದು ಅತ್ಯಂತ ಖಂಡನೀಯ. ಮೇಕೆದಾಟು ಯೋಜನೆಗೆ ಸುಪ್ರೀಂ ಕೋರ್ಟ್ ಕರ್ನಾಟಕ ಪರ ತೀರ್ಪು ನೀಡಿದೆ. ಇನ್ನೇನು ಕಾಮಗಾರಿ ಆರಂಭಿಸುವ. ಸಂದರ್ಭದಲ್ಲಿ ತಮಿಳುನಾಡಿನ ಮುಖ್ಯಮಂತ್ರಿ ಮೇಕೆದಾಟು ಯೋಜನೆಯನ್ನು ಯಾವುದೇ ಕಾರಣಕ್ಕೂ ಕರ್ನಾಟಕದಲ್ಲಿ ಕಟ್ಟಲು ಬಿಡುವುದಿಲ್ಲ ಇದರ ಬಗ್ಗೆ ಕಾನೂನಾತ್ಮಕ ತೀವ್ರ ಹೋರಾಟ ಮಾಡುವುದಾಗಿ ಹೇಳಿರುವುದು ಅತ್ಯಂತ ಖಂಡನೀಯವಾದದ್ದು ಎಂದರು.

ಕರುಣಾನಿಧಿ, ಜಯಲಲಿತಾ ಅವರ ಕಾಲದಲ್ಲೂ ತಮಿಳುನಾಡು, ಕರ್ನಾಟಕ ರಾಜ್ಯಗಳ ನಡುವೆ ತೀವ್ರ ಸಂಘರ್ಷ ನಡೆದಿತ್ತು. ತಮಿಳುನಾಡಿನ ನೂತನ ಮುಖ್ಯಮಂತ್ರಿಯಾಗಿ ವಿಜಯ ಅವರು ಅಕ್ಕಪಕ್ಕ ರಾಜ್ಯಗಳ ಜೊತೆಯಲ್ಲಿ ಸಾಮರಸ್ಯದಿಂದ ಇರುತ್ತಾರೆ ಎಂದು ಭಾವಿಸಿದ್ದೇವು ಆದರೆ ವಿಜಯ ಅವರು, ಕರುಣಾನಿಧಿ, ಜಯಲಲಿತಾ ಅವರ ಹಳೆಯ ಚಾಳಿಯನ್ನು ಮುಂದುವರಿಸಿದ್ದಾರೆ. ಕರ್ನಾಟಕದಲ್ಲಿ ಮೇಕೆದಾಟು ನಿರ್ಮಾಣದಿಂದ ಲಕ್ಷಾಂತರ ಎಕರೆ ಜಮೀನುಗಳಿಗೆ ನೀರಾವರಿ, ಕುಡಿಯುವ ನೀರಿಗೆ, ರೈತರಿಗೆ ಅನುಕೂಲವಾಗುತ್ತದೆ. ಯಾವುದೇ ಕಾರಣಕ್ಕೂ ಕೇಂದ್ರ ಸರ್ಕಾರ ಸೊಪ್ಪು ಹಾಕಬಾರದು ಇಂತಹ ಹೇಳಿಕೆಗಳನ್ನು ತಮಿಳುನಾಡು ಸರ್ಕಾರದಿಂದ ಬರಬಾರದು. ಬಂದರೆ ನಾವು ಕೂಡ ನಿರಂತರ ಹೋರಾಟ ನಡೆಸಬೇಕಾಗುತ್ತದೆ ಎಂದು ಶ್ರೀನಿವಾಸಗೌಡ ಎಚ್ಚರಿಸಿದರು.

ಶಾ.ಮುರಳಿ, ಚಾ.ವೆಂ. ರಾಜ್‌ಗೋಪಾಲ್, ಪಣ್ಯದಹುಂಡಿ ರಾಜು, ಲೋಕೇಶ್ ಹೊಮ್ಮ, ರಾಚಪ್ಪ, ರವಿಚಂದ್ರ ಪ್ರಸಾದ್, ಮಹೇಶ್‌ಗೌಡ, ಸಿದ್ದಶೆಟ್ಟಿ, ರಂಗಸ್ವಾಮಿ, ಚಂದಕವಾಡಿ ರಾಜಣ್ಣ, ಮಹೇಶ್, ಮುತ್ತುರಾಜು, ಅಮಚವಾಡಿ ರಾಜು, ಆಟೋ ಲಿಂಗ ರಾಜು, ರಮೇಶ್, ನಾಗರಾಜು, ರವೀಂದ್ರ ಭಾಗವಹಿಸಿದ್ದರು.

ಶಾಲಾ ಪ್ರಾರಂಭೋತ್ಸವ ಮಕ್ಕಳ ಹಬ್ಬದಂತಿರಲಿ

29ರಂದು ಶಿಕ್ಷಕರು ಶಾಲೆಗೆ ತೆರಳುವಂತೆ ಬಿಇಓ ಸೂಚನೆ



ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಕ್ಕೆ ಆಯ್ಕೆಯಾದವರನ್ನು ಸನ್ಮಾನಿಸಲಾಯಿತು.

ಕೊಳ್ಳೇಗಾಲ, ಮೇ 27– ಮೊಬೈಲ್ ಬಿಡಿ, ಪುಸ್ತಕ ಹಿಡಿ ಎಂಬ ಇಲಾಖೆಯ ನಿಯಮದಂತೆ ಮಕ್ಕಳನ್ನು ಸಾಧ್ಯವಾದಷ್ಟು ಮಟ್ಟಿಗೆ ಶೈಕ್ಷಣಿಕ ಪ್ರಗತಿಗೆ ತೊಡಗಿಸಿಕೊಳ್ಳುವಲ್ಲಿ ಹಂತ ಹಂತವಾಗಿ ಮೊಬೈಲ್ ಬಿಡಿ ಎಂಬ ಸಂದೇಶವನ್ನು ಮುಖ್ಯಶಿಕ್ಷಕರು ಮಕ್ಕಳಿಗೆ ರವಾನಿಸಬೇಕು. ಜೂ.1ರಿಂದ ಶಾಲೆ ಪ್ರಾರಂಭವಾಗುತ್ತಿರುವುದರಿಂದ 29ರಿಂದಲೇ ಮುಖ್ಯ ಶಿಕ್ಷಕರು, ಸಹ ಶಿಕ್ಷಕರು ಶಾಲೆಗೆ ತೆರಳಿ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀಮತಿ ಮಂಜುಳ ಹೇಳಿದರು

ಬುಧವಾರ ಮುಖ್ಯಶಿಕ್ಷಕರಿಗಾಗಿ ಆಯೋಜಿಸಲಾಗಿದ್ದ ತರಬೇತಿ ಕಾರ್ಯಾಗಾರವನ್ನು ಗಿಡಕ್ಕೆ ನೀರು ಹಾಕುವ ಮೂಲಕ ಚಾಲನೆ ನೀಡಿ ಮಾತನಾಡಿದರು.

ಶಾಲೆಗಳಲ್ಲಿ ಮಕ್ಕಳಿಗೆ ನಿಮಗೆ ಮೊಟ್ಟೆ ಅಥವಾ ಬಾಳೆಹಣ್ಣು ಯಾರಿಗೆ ಬೇಕು ಎಂದು ಕೈ ಎತ್ತಿಸಲಾಗುತ್ತಿದೆ. ಇಂತಹ ಸಂಸ್ಕೃತಿ ಸರಿಯಲ್ಲ. ಇದು ನಿಲ್ಲಬೇಕು, ಅವರ ಪೋಷಕರಿಂದ ಪತ್ರ ಬರೆಸಿಕೊಂಡು ಬರಬೇಕು. 1 ದಿನ ಮೊಟ್ಟೆ ಬೇಡ ಅಂದವರಿಗೆ ಬಾಳೆಹಣ್ಣು ನೀಡಲು ಕ್ರಮವಹಿಸಿ. ಅದೇ ರೀತಿಯಲ್ಲಿ ಪ್ರತಿ ದಿನವೂ ಸಹಾ 10 ನಿಮಿಷಗಳಿಗೂ ಹೆಚ್ಚು ಕಾಲ ಶಾಲಾ ವಿದ್ಯಾರ್ಥಿಗಳಿಂದ ಕನ್ನಡ ದಿನಪತ್ರಿಕೆ ಓದಿಸುವುದು ಕಡ್ಡಾಯ, ಇಲಾಖಾ ಸೂಚನೆ ಪಾಲಿಸಿ, ಕನ್ನಡ ದಿನಪತ್ರಿಕೆ ಓದುವುದರಿಂದ ಮಕ್ಕಳಲ್ಲಿ ಕೌಶಲ್ಯ, ಭಾಷಾ ಹಿಡಿತ ಸಾಧಿಸಲು ಸಹಕಾರಿಯಾಗಲಿದೆ ಹಾಲಿನ ಪುಡಿ ಅವಧಿ ಮೀರಿದ್ದರೆ ಯಾವುದೆ ಕಾರಣಕ್ಕೂ ಬಳಕೆ ಮಾಡಕೂಡದು, ಜವಾಬ್ದಾರಿ ಅರಿತು ಕಾರ್ಯನಿರ್ವಹಿಸಿ ಎಂದು ಬಿಇಓ ಮಂಜುಳ ಸೂಚಿಸಿದರು.

ಕೊಳ್ಳೇಗಾಲ ಶೈಕ್ಷಣಿಕ ವಲಯದ ಮುಖ್ಯ ಶಿಕ್ಷಕರು ಹಾಗೂ ಸಹಶಿಕ್ಷರು ಜೂನ್ 1ರಂದು ಪ್ರಾರಂಭವಾಗುವ ಶಾಲೆಯಲ್ಲಿ ಹಬ್ಬದ ವಾತಾವರಣ ನಿರ್ಮಾಣ ಮಾಡಬೇಕು, ಅತ್ಯಂತ ಪರಿಣಾಮಕಾರಿಯಾಗಿ ಶಾಲಾ ಪ್ರಾರಂಭೋತ್ಸವ ನಡೆಸುವ ಮೂಲಕ ಮಕ್ಕಳನ್ನು ಉತ್ಸುಕತೆಯಿಂದ ಶಾಲೆಗೆ ಬರಮಾಡಿಕೊಳ್ಳಬೇಕು. ಮಕ್ಕಳ ಕಲಿಕೆಗೆ ಮುಂದಾಗುವ ಮೂಲಕ ಇಲಾಖೆ ಜೊತೆ ಸಹಕರಿಸಬೇಕು, ಮೇ29ರಂದು ಎಲ್ಲಾ ಶಿಕ್ಷಕರು ತಮ್ಮ ತಮ್ಮ ಶಾಲೆಗಳಲ್ಲಿ ಕಡ್ಡಾಯವಾಗಿ ಹಾಜರಿರಬೇಕು, ಜೂನ್ 1ರ ಶಾಲಾ ಪ್ರಾರಂಭಕ್ಕೆ ಅಗತ್ಯಸಿದ್ಧತೆ ಮಾಡಿಕೊಳ್ಳಬೇಕು, 1ರಂದು ವಿಭಿನ್ನ ಹಾಗೂ ವಿನೂತನವಾಗಿ ಕಾರ್ಯಕ್ರಮ ರೂಪಿಸಲು ಹೆಚ್ಚಿನ ರೀತಿ ಸಹಕರಿಸಿ, ಸ್ಥಳೀಯ ಜನಪ್ರತಿನಿಧಿಗಳು

ಇದೆ ವೇಳೆ ಶಿಕ್ಷರ ಸಂಘಕ್ಕೆ ಆಯ್ಕೆ ಯಾದ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷೆ ಶ್ರೀಮತಿ ಸವಿತಾ, ನಾಗೇಶ್, ಉಮೇಶ್, ನಂದೀಶ್, ಶಿವಶಂಕರ್, ಪುಟ್ಟಮಾದಮ್ಮರನ್ನು ಸನ್ಮಾನಿಸಲಾಯಿತು.

ದಾವಣಗೆರೆಯಲ್ಲಿ ನಡೆದ ಸಮಾರಂಭದಲ್ಲಿ ಸರಸ್ವತಿ ಸಮ್ಮಾನ್ ರಾಜ್ಯ ಪ್ರಶಸ್ತಿ ಪುರಸ್ಕೃತ ಶಿಕ್ಷಕ ಮಹದೇವ ಅವರನ್ನು ಹಾಗೂ ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ನಂಜುಂಡಯ್ಯ, ಉತ್ತಮ ಫಲಿತಾಂಶ ತರುವಲ್ಲಿ ಸ್ಪಂದಿಸಿದ ಕ್ಷೇತ್ರಶಿಕ್ಷಣಾಧಿಕಾರಿ ಮಂಜುಳ ಅವರುಗಳನ್ನು ಕಾರ್ಯಾಗಾರದಲ್ಲಿ ಶಿಕ್ಷಕರುಗಳು ಅಭಿನಂದಿಸುವ ಮೂಲಕ ಗೌರವ ಸಲ್ಲಿಸಿದರು.

ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಜೋಸೆಫ್ ಅಲೆಗ್ಸಾಂಡರ್, ಕಾರ್ಯದರ್ಶಿ ಎಂ. ಚಿಕ್ಕರಾಜು, ಅಕ್ಷರ ದಾಸೋಹದ ಸಹಾಯಕ ನಿರ್ದೇಶಕ ನಂಜುಂಡಯ್ಯ, ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷೆ ಸವಿತಾ, ಎಸ್ಸಿಎಸ್ಟಿ ಶಿಕ್ಷಕರ ಸಂಘದ ಅಧ್ಯಕ್ಷ ಸಿದ್ದರಾಜು, ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ವಿಶ್ವನಾಥ್, ನಾಗೇಶ, ಉಮೇಶ್, ಇಲಾಖೆಯ ಡಾ.ಉಮಾಶಂಕರ್, ನಾಗಮಾಣಿಕ್ಯಂ, ನಾಗಾಜು, ವಿಜಯ್ ಕುಮಾರ್, ಅಜೀಂ ಪ್ರೇಮ್‌ಜಿ ಸಂಸ್ಥೆಯ ನಂದೀಶ್, ರಕ್ಷಿತಾ. ಎಂ ಚಿಕ್ಕರಾಜು, ವಾಸು, ಪ್ರಿಯದರ್ಶಿನಿ, ಸಿದ್ದಲಿಂಗಸ್ವಾಮಿ, ರಾಜು ಇನ್ನಿತರಿದ್ದರು

ಸಿಎಂ ಆಗಿ ಸಿದ್ದರಾಮಯ್ಯ ಮುಂದುವರಿಯಲಿ ಇಲ್ಲವೇ ಜಿ.ಪರಮೇಶ್ವರ ಸಿಎಂ ಮಾಡಲಿ



ಪತ್ರಿಕಾಗೋಷ್ಠಿಯಲ್ಲಿ ವೆಂಕಟ ರಮಣಸ್ವಾಮಿ ಪಾಪು ಮಾತನಾಡಿದರು.

ಚಾಮರಾಜನಗರ: ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಉಳಿಯಲಿ. ಇಲ್ಲವೇ ಜಿ.ಪರಮೇಶ್ವರ ಸಿಎಂ ಆಗಲಿ ಎಂದು ದಲಿತ ಮಹಾಸಭಾದ ರಾಜ್ಯ ಉಪಾಧ್ಯಕ್ಷ ವೆಂಕಟ ರಮಣಸ್ವಾಮಿ ಪಾಪು ಒತ್ತಾಯಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಕೂಗು ಕೇಳಿ ಬರುತ್ತಿದ್ದು, ಮುಖ್ಯಮಂತ್ರಿ ಬದಲಾವಣೆ ಮಾಡಿದರೆ ಗೃಹ ಸಚಿವ ಜಿ.ಪರಮೇಶ್ವರ ಅವರನ್ನು ಮುಖ್ಯಮಂತ್ರಿಯಾಗಿ ಮಾಡಬೇಕು ಎಂದು ಕಾಂಗ್ರೆಸ್ ವರಿಷ್ಠರನ್ನು ಒತ್ತಾಯಿಸಿದರು.

ಜಟಿಲ ಒಳಮೀಸಲಾತಿ ಸಮಸ್ಯೆ ಪರಿಹರಿಸಿ ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ಹಾಗೂ 56 ಸಾವಿರ ಹುದ್ದೆಗಳನ್ನು ಭರ್ತಿ ಮಾಡುವ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನ ದಿಂದ ಕೆಳಗಿದರೆ ದಲಿತ ಸಮುದಾಯಕ್ಕೆ ಬಾರಿ ಅನ್ಯಾಯ ಆಗುತ್ತದೆ. ನಮ್ಮ ಸಮುದಾಯ ಹಿತದೃಷ್ಟಿಯಿಂದ ನೀವು ಮುಖ್ಯಮಂತ್ರಿಯಾಗಿ ಉಳಿಯಬೇಕು. ಇಲ್ಲವೇ ಗೃಹ ಸಚಿವ ಜಿ.ಪರಮೇಶ್ವರ ಅವರನ್ನು ಮುಖ್ಯಮಂತ್ರಿಯಾಗಿ ಮಾಡಬೇಕು ಎಂದು ಪಾಪು ಒತ್ತಾಯಿಸಿದರು. ಪತ್ರಿಕಾಗೋಷ್ಠಿಯಲ್ಲಿ ದಸಂಸ ಜಿಲ್ಲಾ ಸಂಚಾಲಕ ಸಿ.ಎಂ.ಶಿವಣ್ಣ, ಜನಶಕ್ತಿ ಹೋರಾಟ ವೇದಿಕೆ ರಾಮಸಮುದ್ರ ಸುರೇಶ್, ಕಲಾವಿದ ಹೆಚ್.ಮಹದೇವ, ರಂಗಸ್ವಾಮಿ, ಗೌರಿಶಂಕರ್ ಹಾಜರಿದ್ದರು.

ರಸಗೊಬ್ಬರ, ಇಂಧನ ದರ ಏರಿಕೆ ಖಂಡಿಸಿ ಪ್ರತಿಭಟನೆ



ಪೆಟ್ರೋಲ್, ಡಿಸೇಲ್ ಬೆಲೆ ಏರಿಕೆ ಖಂಡಿಸಿ ರಾಜ್ಯ ರೈತ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.

ಚಾಮರಾಜನಗರ: ಪೆಟ್ರೋಲ್, ಡಿಸೇಲ್ ಬೆಲೆ ಏರಿಕೆ ಖಂಡಿಸಿ ನಗರದಲ್ಲಿ ರಾಜ್ಯ ರೈತ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಜಿಲ್ಲಾಡಳಿತ ಭವನದ ಮುಂಭಾಗ ಸಮಾವೇಶಗೊಂಡ ಪ್ರತಿಭಟನಾಕಾರರು ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಜಿಲ್ಲಾಡಳಿತದ ಮೂಲಕ ಪ್ರಧಾನ ಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಮುಖಂಡರು ಮಾತನಾಡಿ, ಪೆಟ್ರೋಲ್, ಡಿಸೇಲ್ ಬೆಲೆ ಏರಿಕೆ ಪರಿಣಾಮ ಅಗತ್ಯ ವಸ್ತುಗಳ ಬೆಲೆ, ಸಾರಿಗೆ ಸೇರಿದಂತೆ ಇತರೆ ವೆಚ್ಚ ದುಬಾರಿಯಾಗಿದೆ ಎಂದರು. ರಸಗೊಬ್ಬರ ಬೆಲೆ ಏರಿಸಿರುವುದರಿಂದ ರೈತ ಸಮುದಾಯಕ್ಕೆ ಅತ್ಯಂತ ದೊಡ್ಡ ಹೊಡೆತ ಬಿದ್ದಿದೆ. ಕೃಷಿ ಉತ್ಪನ್ನಗಳ ವೆಚ್ಚ ಪ್ರತಿ ವರ್ಷ ಹೆಚ್ಚುತ್ತಲೇ ಇದ್ದು, ರೈತರಿಗೆ ದೊರಕುತ್ತಿರುವ ಬೆಲೆ ಕಡಿಮೆಯಾಗಿದೆ ಎಂದರು.

ರಸ ಗೊಬ್ಬರದ ಬೆಲೆಯನ್ನು ಏರಿಸಿರುವುದನ್ನು ವಾಪಸ್ ಪಡೆದು ರಸಗೊಬ್ಬರಗಳ ಮೇಲಿನ ಸಬ್ಸಿಡಿಯನ್ನು, ಹೆಚ್ಚಿಸಿ, ರಿಯಾಯಿತಿ ದರದಲ್ಲಿ ರೈತರಿಗೆ ಗೊಬ್ಬರ ವಿತರಿಸಬೇಕು ಎಂದು ಒತ್ತಾಯಿಸಿದರು.

ಕಾಂಗ್ರೆಸ್ ಪಕ್ಷ ವಿಧಾನಸಭಾ ಚುನಾವಣೆ ಪೂರ್ವ ಪ್ರಣಾಳಿಕೆಯಲ್ಲಿ ವಾಗ್ದಾನ ಮಾಡಿರುವಂತೆ ಭೂ ಸುಧಾರಣೆ ತಿದ್ದುಪಡಿ ಕಾಯ್ದೆಯನ್ನು ಜಾನುವಾರು ಹತ್ಯೆ ಮತ್ತು ಸಂರಕ್ಷಣಾ ಕಾಯ್ದೆಯನ್ನು ವಾಪಸ್ ಪಡೆಯಬೇಕು. ಎಪಿಎಂಸಿಯನ್ನು ರೈತ ಸ್ನೇಹಿಯಾಗಿ ಬಲಯುತಗೊಳಿಸಬೇಕು. ಕೃಷಿ ಬೆಲೆ ಆಯೋಗವನ್ನು ಶಾಶ್ವತ ಆಯೋಗವನ್ನಾಗಿ ಘೋಷಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ರೈತ ಸಂಘದ ಎ.ಎಂ. ಮಹೇಶ್‌ಪ್ರಭು, ಶಿವಪುರ ಮಹದೇವಪ್ಪ, ಸಿ.ಸಿದ್ದರಾಜು, ಮೂಡ್ನಾಕೂಡು ಮಹೇಶ್, ಮಹೇಶ್ ಕುಮಾರ್, ಮಲ್ಲಪ್ಪ ಯಶವಂತ್, ಜೆ.ಎಸ್. ಭಾಸ್ಕರ್, ಮಹೇಶ್, ಬಸವಣ್ಣ, ಶಿವಣ್ಣ, ರವಿ, ಶಿವಕುಮಾರ್, ಸಿದ್ದಶೆಟ್ಟಿ, ಮಹದೇವಸ್ವಾಮಿ, ಪ್ರಶಾಂತ್ ಇತರರಿದ್ದರು.

ಶಾಸಕ ಪುಟ್ಟರಂಗಶೆಟ್ಟಿಗೆ ಸಚಿವ ಸ್ಥಾನ ನೀಡಲು ಒತ್ತಾಯ

ಚಾಮರಾಜನಗರ: ಚಾಮರಾಜನಗರ ವಿಧಾನಸಭಾ ಕ್ಷೇತ್ರದಿಂದ ಸತತ 4 ಬಾರಿ ಶಾಸಕರಾಗಿ ಆಯ್ಕೆಯಾಗಿ ದಾಖಲೆ ನಿರ್ಮಿಸಿರುವ ಸಿ.ಪುಟ್ಟರಂಗಶೆಟ್ಟಿ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಎಂ.ಶಿವಮೂರ್ತಿ ಒತ್ತಾಯಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಪುಟ್ಟರಂಗಶೆಟ್ಟಿ ಅವರಿಗೆ ಸಚಿವ ಸ್ಥಾನ ನೀಡಬೇಕು. ಆ ನಿಟ್ಟಿನಲ್ಲಿ ಕೇಂದ್ರ ಹಾಗೂ ರಾಜ್ಯ ಕಾಂಗ್ರೆಸ್ ನಾಯಕರು ಮುಂದಾಗಬೇಕು ಎಂದು ಒತ್ತಾಯಿಸಿದರು.

ಚಾ.ನಗರ ಬಿ.ರಾಚಯ್ಯ ಜೋಡಿ ರಸ್ತೆಯಲ್ಲಿ ಕೊಳಚೆ ನೀರಿನ ದುರ್ವಾಸನೆ; ಮಜ್ಜನ!



ಚಾಮರಾಜನಗರ: ನಗರದ ಬಿ. ರಾಚಯ್ಯ ಜೋಡಿ ರಸ್ತೆಯಲ್ಲಿರುವ ಕ್ಲಾಸಿಕ್ ಪೋಲೋ ಅಂಗಡಿ ಮುಂಭಾಗ ಕಳೆದ 15 ದಿನಗಳಿಂದ ಕೊಳಚೆ ನೀರು ರಸ್ತೆ ಮೇಲೆ ಹರಿಯುತ್ತಿದ್ದು, ಸಾರ್ವಜನಿಕರು ತೀವ್ರ ಸಂಕಷ್ಟ ಅನುಭವಿಸುವಂತಾಗಿದೆ.

ರಸ್ತೆ ತುಂಬಾ ದುರ್ವಾಸನೆ ಹರಡಿರುವುದರಿಂದ ಸ್ಥಳೀಯ ನಿವಾಸಿಗಳು ಹಾಗೂ ವ್ಯಾಪಾರಸ್ಥರು ನಗರ ಸಭೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಚೇಂಬರ್‌ಗಳಿಂದ ಹೊರಬರುತ್ತಿರುವ ಕೊಳಚೆ ನೀರು ರಸ್ತೆ ಮೇಲೆ ಹರಿದು ಹೋಗುತ್ತಿದ್ದು, ಅದರೊಂದಿಗೆ ಮಲವೂ ತೇಲಿ ಬರುತ್ತಿದೆ. ಇದರೊಂದಿಗೆ ಮಾಂಸದ ತುಂಡುಗಳು ಸಹ ಕೊಳಚೆ ನೀರಿನೊಂದಿಗೆ ಕೊಚ್ಚಿ ಬರುತ್ತಿದ್ದು, ಈ ಪರಿಸ್ಥಿತಿಯಿಂದ ಪಾದಚಾರಿಗಳು ಮೂಗು ಮುಚ್ಚಿಕೊಂಡೇ ಸಂಚರಿಸುವ ಸ್ಥಿತಿ ನಿರ್ಮಾಣವಾಗಿದೆ.

ನಗರದ ಪ್ರಮುಖ ರಸ್ತೆಯ ಮೇಲೆ ಕೊಳಚೆ ನೀರು ಹರಿಯುತ್ತಿರುವ ಕಾರಣ ದ್ವಿಚಕ್ರ ವಾಹನ ಸವಾರರು ಜಾರಿ ಬೀಳುವ ಭೀತಿಯಲ್ಲಿ ಪ್ರಯಾಣಿಸುತ್ತಿದ್ದಾರೆ. ಮಳೆ ಬಂದಾಗ ಪರಿಸ್ಥಿತಿ ಮತ್ತಷ್ಟು ಹದಗೆಡುತ್ತಿದ್ದು, ವಾಹನ ಸವಾರರು ಹಾಗೂ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿದೆ.

ಸ್ಥಳೀಯರು ಹಲವು ಬಾರಿ ನಗರ ಪಾಲಿಕೆಗೆ ದೂರು ನೀಡಿದರೂ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ ಎಂದು ಆರೋಪಿಸಿದ್ದಾರೆ. ನಗರದ ಮಧ್ಯಭಾಗದಲ್ಲೇ ಇಂತಹ ಅಸ್ವಚ್ಛ ಪರಿಸ್ಥಿತಿ ನಿರ್ಮಾಣವಾಗಿದ್ದರೂ ಅಧಿಕಾರಿಗಳು ನಿರ್ಲಕ್ಷ್ಯ ತೋರಿಸುತ್ತಿದ್ದಾರೆ. ಸಾಂಕ್ರಾಮಿಕ ರೋಗ ಹರಡುವ ಮುನ್ನವೇ ಸಮಸ್ಯೆ ಬಗೆಹರಿಸಬೇಕು ಎಂದು ನಿವಾಸಿಗಳು ಒತ್ತಾಯಿಸಿದ್ದಾರೆ.

ತಕ್ಷಣವೇ ಚರಂಡಿ ವ್ಯವಸ್ಥೆಯನ್ನು ದುರಸ್ತಿಗೊಳಿಸಿ ರಸ್ತೆ ಸ್ವಚ್ಛಗೊಳಿಸುವಂತೆ ಸಾರ್ವಜನಿಕರು ನಗರ ಪಾಲಿಕೆಯನ್ನು ಆಗ್ರಹಿಸಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ
ಕನ್ನಡ ಟೈಪಿಂಗ್ ಗೊತ್ತಿರುವ ಹುಡುಗಿಯರು ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ. #08, ಮುಡಾ ಕಾಂಪ್ಲೆಕ್ಸ್, ಆಂದೋಲನ ಸರ್ಕಲ್, ಮೈಸೂರು
6362483236 ಪ್ರಸಾದ್

MUDA SITES FOR SALE AT DATTAGALLI
- 40x60 North East Corner
- 30x40 North East Corner
- 30x40 South East Corner
- 40x45 South West Corner

Call: 7676500121

DOLLAR ESTATE PROPERTIES
WE ARE HIRING
MALE & FEMALE TELECALLERS & MARKETING EXECUTIVE
CONTACT NOW
9740782233
0821-2950766

ಟೈಲರ್ಸ್ ಬೇಕಾಗಿದ್ದಾರೆ
ಮೈಸೂರಿನ ನುರಿತ (Experience) ಪ್ಯಾಂಟ್ – ಶರ್ಟ್ – ಚುಡಿದಾರ್ ಹೊಲಿಯುವವರು ತಕ್ಷಣವೇ ಬೇಕಾಗಿದ್ದಾರೆ
ಶ್ರೀದೇವಿ ಗಾರ್ಮೆಂಟ್ಸ್, ಮೈಸೂರು
7899284230
9880480188

WANTED
Showroom Staff
10th Pass/Fail
Salary 10000 +
7090900099

ಮನೆ ಬಾಡಿಗೆಗೆ ಇದೆ
ಹೊಸಮನೆ 3 ರೂಂ, ದೇವೇಗೌಡ ಸರ್ಕಲ್ ಹತ್ತಿರ, ರಿಂಗ್ ರೋಡ್ ಮತ್ತು 30x40 ಸೈಟ್ ಮಾರಾಟಕ್ಕಿದೆ. ಮೈಸೂರು
9945558166

TV ಕೆಟ್ಟಿದೆಯೇ ?
LED, LCD TV ಗಳನ್ನು ರಿಪೇರಿ ಮಾಡಿಕೊಡಲಾಗುತ್ತದೆ. ನಮ್ಮಲ್ಲಿ Seconds LED TV ಗಳು ದೊರೆಯುತ್ತವೆ.
Teju Electronics, ಅಗ್ರಹಾರ
Mob: 9342114069

ತಕ್ಷಣ ಬೇಕಾಗಿದ್ದಾರೆ
ಪೆಟ್ರೋಲ್‌ಬಂಕ್‌ನಲ್ಲಿ ಹೆಲ್ಪರ್ ಮತ್ತು ಕ್ಯಾಷಿಯರ್ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು ನಗರ
6364748485

For sale ರಿಂಗ್ ರಸ್ತೆ ಸಮೀಪ
ವಿಜಯನಗರ 30x40 - 1.2 Cr.
ವಿಜಯನಗರ 40x75 - 1.24 Cr.
ಜೆ.ಪಿ. ನಗರ 50x80 - 2.5 Cr. / 40x60 - 1.12 Cr.
ದಟ್ಟಗಳ್ಳಿ–ರಾಯಲ್ ಓಕ್ ಸ್ಕೂಲ್ 1.15 Cr.
10–20 ಗುಂಟೆ ಲ್ಯಾಂಡ್ 6–8 ಲಕ್ಷ ಗುಂಟೆಗೆ (ಸಿಟಿಗೆ ಕೇವಲ 12 ರಿಂದ 15 ಕಿ.ಮೀ).
ವಿಜಯನಗರ, ಬಸವನಳ್ಳಿ 30x40 - 64 ಲಕ್ಷ.
Call: 8123075038
BROKERS EXCUSE

ಕೆಲಸಕ್ಕೆ ಬೇಕಾಗಿದ್ದಾರೆ
ಸುಮಿತ್ರ ಸ್ಟೀಲ್ ರಾಮಕೃಷ್ಣನಗರ, ಮೈಸೂರಿನಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಜ್ಞಾನವುಳ್ಳ ಹುಡುಗರು ಬೇಕಾಗಿದ್ದಾರೆ. ಸಂಬಳ ರೂ. 20,000
9900339977

ಬೇಕಾಗಿದ್ದಾರೆ
ಮಹಿಳಾ ಆಯಾ ಬೇಕಾಗಿದ್ದಾರೆ
ಸಂಪರ್ಕಿಸಿ : St. Marina's English School, Rajendranagar main Road(Opposite to Kaveri Palace Function hall) N.R. Mohalla, Mysore-7

Mind-Body-Soul Healing
STRESS
Dr. Thandava Murthy
Psychologist
96069 11941

ಶ್ರೀ ಬಾಲಾಜಿ ಟೂರಿಸ್ಟ್
3–7–26: 9 ದಿನ: ಅಮರನಾಥ್, ವೈಷ್ಣೋದೇವಿ
ಜುಲೈ 20: 3 ದಿನ: ಗೋವಾ, ಕಾಮಾಕ್ಯದೇವಿ
ಜುಲೈ 24: 7 ದಿನ: ದೆಹಲಿ, ಆಗ್ರಾ, ಅಯೋಧ್ಯ, ಮಥುರಾ, ಪ್ರಯಾಗ್‌ರಾಜ್, ಕಾಶಿ, ಗಯಾ
ಆಗಸ್ಟ್ 23: 7 ದಿನ: ರಾಮೇಶ್ವರ, ಕನ್ಯಾಕುಮಾರಿ.
ಸೆಪ್ಟೆಂಬರ್ 18: 14 ದಿನ: ಚಾರ್‌ಧಾಮ್ ಯಾತ್ರೆ
ಅಕ್ಟೋಬರ್ 23: 8 ದಿನ: ಕೊಲ್ಲಾಪುರ, ಪಂಡರಾಪುರ, ಶಿರಡಿ, ಭೀಮಾಶಂಕರ್, ತ್ರಯಂಬಕೇಶ್ವರ, ಎಲ್ಲೋರ.
9945770486

ಜಮೀನು ಬೇಕಾಗಿದೆ
ಹಳೇ ಮೈಸೂರು ಪ್ರಾಂತ್ಯದಲ್ಲಿ ಜಮೀನು ಬೇಕಾಗಿದೆ
98453 95000
98451 04048
ಭೂಮಿಪುತ್ರ

WANTED
(1) bolero driver (age below 35 years),
2) sales boy's and girl's,
Contact:
Sri Sairam furniture #747, Vijaya nagara 2nd stage Mysore
0821-4286890
6364697759

ವಧು ಬೇಕಾಗಿದ್ದಾರೆ
ಒಕ್ಕಲಿಗ ಗೌಡ ಜಾತಿಯ ವರನಿಗೆ, 36 ವರ್ಷ BA ಓದಿರುವ ಸ್ವಂತ ವ್ಯವಹಾರ ನೋಡಿಕೊಳ್ಳುತ್ತಿರುವ ಒಬ್ಬನೇ ಮಗ ಮೈಸೂರಿನಲ್ಲಿ ವಾಸ, ಸ್ವಂತ ಮನೆಯಿದೆ ಹುಡುಗಿಗೆ ಮೊದಲನೆ ಮದುವೆ, ವಿಧವೆಯಾದರು ಪರವಾಗಿಲ್ಲ
9741755655

ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ
ಸೆಕ್ಯೂರಿಟಿ ಸೂಪರ್‌ವೈಸರ್ ಮತ್ತು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಸ್ಥಳ : ಬೋಗಾದಿ ಸುತ್ತಮುತ್ತ.
7676948164
8792537093
9900747093

Designed to make EVERY SPACE beautiful
2 BHK HOME INTERIORS
@ ₹2.9 Lakhs Onwards
HOME SPACE MART
Mysore • Kushalnagar • Bangalore
For Site Visit: Aishwarya 9148991267

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಊದಿನ ಬತ್ತಿ ತಯಾರಿಸಿ ನಮಗೆ ಮಾರಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಬೇಕಾಗಿದ್ದಾರೆ
ಹನುಮಂತು ಹೋಟೆಲ್‌ಗೆ ಹುಡುಗರು ಬೇಕಾಗಿದ್ದಾರೆ.
ಸಂಬಳ: 12,000 ರಿಂದ 14,000
ಬಿ.ಎನ್. ಸ್ಟ್ರೀಟ್, ಮಾರ್ಕೆಟ್ ಬಿಲ್ಡಿಂಗ್, ಮಂಡಿಮೊಹಲ್ಲಾ, ಮೈಸೂರು. ಸಂದರ್ಶನಕ್ಕೆ ಸಂಪರ್ಕಿಸಿ:
Mob: 96114-31188

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
ರೂ. 1+1 = 1000
1+2 = 1200
Mob: 9108048064

ಬಿಲಾಲ್ ಓವನ್ ಪೇಂಟಿಂಗ್ (c/o) ಹಿಂದೂಸ್ತಾನ್ ಇಂಡಸ್ಟ್ರೀಸ್, ಹೆಬ್ಬಾಳ್, ಮೈಸೂರು
ಗೋಡೌನ್‌ನಲ್ಲಿ ಕೆಲಸ ಮಾಡಲು ಆಸಕ್ತಿ ಇರುವ ಅಶೋಕ ಲೇಲ್ಯಾಂಡ್‌ಗೆ ಡ್ರೈವರುಗಳು ಬೇಕಾಗಿದ್ದಾರೆ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
9113956899 / 9148108838

SITE FOR SALE
50/60 west facing, 60 feet road, Price 3000/sq fit, Kubernanda sagara Face 2, Near by Elavala Mysore
9844189895
7892948089

ಹೆಲ್ತ್ ಕೇರ್ ತರಬೇತಿ
SSLC/PUC ಆದವರಿಗೆ ಡಿಪ್ಲೊಮಾ ಇನ್ ಹೆಲ್ತ್ ಕೇರ್ ತರಬೇತಿ (DMLT) ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಸೆಂಟ್ ಮೇರಿಸ್ ಆಸ್ಪತ್ರೆ ಬಳಿ ಫ್ಯಾಕ್ಟರಿ ಸರ್ಕಲ್, NIE ಕಾಲೇಜ್ ಹತ್ತ ಮೈಸೂರು
9916908454

ಬೇಕಾಗಿದ್ದಾರೆ
5 ವರ್ಷ ಅನುಭವವುಳ್ಳ Security Field Officer ಮತ್ತು ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಹಾಗೂ ಎಲೆಕ್ಟ್ರೀಷಿಯನ್ ಬೇಕಾಗಿದ್ದಾರೆ. ವಿಜಯನಗರ, ಬೋಗಾದಿ, ಮೇಟಗಳ್ಳಿ, ಕೆ.ಡಿ. ರೋಡ್ ಹಾಗೂ ಮೈಸೂರು ಸುತ್ತಮುತ್ತ.
9538886328
7795104543

ಬೋಳು ತಲೆಯ ಸಮಸ್ಯೆಯೇ?



SMART HAIR FIXING
574, 9th Cross, Anikethana Road, kuvempunagar, Mysuru
MYSORE 9591311161 MANGALORE 9901910161

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular/ Saturday / Correspondence Courses with practical training.
www.imkta.in
ALPHA INTERNATIONAL SCHOOL @ Srirampura
Call: 7829937469
ONLINE TRAINING AVAILABLE

ಶ್ರೀ ಸಂಜೀವಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಬಿಡಿಸಿ, ಉಳಿದ ಹಣವನ್ನು ಚಿನ್ನದ ಗುಣಮಟ್ಟದ ಆಧಾರದ ಮೇಲೆ ನಿಮ್ಮ ಸ್ಥಳದಲ್ಲಿ ನೀಡಲಾಗುತ್ತದೆ. ಒಂದು ಗ್ರಾಂ ಚಿನ್ನಕ್ಕೆ : 14600(24 CT)
9108146123

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಕುವೆಂಪುನಗರದ ರೂಮ್‌ನಲ್ಲಿ ಕೆಲಸ ಮಾಡಲು ಅನುಭವ ಹೊಂದಿರುವ ರೂಮ್ Boy ಬೇಕಾಗಿದ್ದಾರೆ.
7483534355

TEACHERS WANTED
1. EVS Teacher (1st to 5th) -No. 2,
English Teacher (6th to 10th) -No. 2
3. Hindi Teacher (6th to 10th)No. 2
4. Helper (Female) - No. 2.
GAYATHRI VIDYALAYA
Hosa undavadi, K R Sagara, Srirangapatna(T), Mandya (D). Send Your Resumes to: gayathrieducationtrust.krs@gmail.com
Contact: 8892927318/ 8088848807/6360302911

ಕೆಲಸಕ್ಕೆ ಬೇಕಾಗಿದ್ದಾರೆ
ಹಾಸ್ಪಿಟಲ್‌ನಲ್ಲಿ ಹಾಗೂ ಫ್ಯಾಕ್ಟರಿಯಲ್ಲಿ ಬೋಗಾದಿ ಹಾಗೂ ಕೂರ್ಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಹುಡುಗರು ಬೇಕಾಗಿದ್ದಾರೆ. ಸಂಬಳ 16000 ರಿಂದ 22000 ಹಾಗೂ ESI ಮತ್ತು PF ಹಾಗೂ ವಸತಿ ಸೌಲಭ್ಯ ಇರುತ್ತದೆ.
9060106667/ 9535296835
9187709573/ 9187709574

100% TEAK WOOD
FACTORY FINISH DOORS & WINDOWS
@ FACTORY DEPOT RATES



10 YEARS WARRANTY
9731591267
9901291267

ಡ್ರೈವರ್ ಬೇಕಾಗಿದ್ದಾರೆ
ಅಶೋಕ್ ದೋಸ್ತ್ ಗೂಡ್ಸ್ ಗಾಡಿಗೆ ಡ್ರೈವರ್ ಬೇಕಾಗಿದ್ದಾರೆ. ಸಂಪರ್ಕಿಸಿ
9731993601

JOB VACANCY
* ಪಂಚಕರ್ಮ ಥೆರಪಿಸ್ಟ್
* ಬಿಲ್ಲಿಂಗ್ ಸ್ಟಾಫ್,
ಹುದ್ದೆಗಳಿಗೆ ಸಿಬ್ಬಂದಿ ಅಗತ್ಯವಿದೆ. ಸ್ಥಳ : ಜಯನಗರ.
9632020620

ಬೇಕಾಗಿದ್ದಾರೆ
1. ಟೈಲರುಗಳು 2. ಹೆಲ್ಪರ್‌ಗಳು, 3. ಅನುಭವವುಳ್ಳ ಅಕೌಂಟೆಂಟ್‌ಗಳು 4. ಡ್ರೈವರ್‌ಗಳು 5. ಡ್ರೈವರ್ cum ಮಾರ್ಕೆಟಿಂಗ್, 6. ಡಿಪ್ಲೊಮಾ ಹುಡುಗರು, ಸೆಕ್ಯೂರಿಟಿ ಗಾರ್ಡ್, ವೆಲ್ಡರ್, ಸಂಪರ್ಕಿಸಿ :
81052 49880
77952 85485

ವೃದ್ಧಾಶ್ರಮ
ಪಾರ್ಶ್ವವಾಯು ಪೀಡಿತರು, ಹಾಸಿಗೆ ಹಿಡಿದವರು ಮತ್ತು ವಯಸ್ಸಾದ ವೃದ್ಧರನ್ನು ಸುಸಜ್ಜಿತವಾದ ಸ್ಥಳದಲ್ಲಿ ಇರಿಸಿಕೊಂಡು ನೋಡಿಕೊಳ್ಳುತ್ತೇವೆ, ಶುದ್ಧ, ಶುದ್ಧ ಆಹಾರ ಮತ್ತು ಮೆಡಿಕಲ್ ಸೌಲಭ್ಯ ನಮ್ಮ ಮೊದಲ ಆದ್ಯತೆ. ಸ್ಥಳ: ಮೈಸೂರು
9916905188

FOR SALE
30x40 Duplex House @ Dattagalli &VidyaranyaPm
20x30,20x35, 30x40 Sites @ Bogadi,Rainbow School
30x50, 40x60, 50x80 Sites Near RT Nagar, Defence Apartments
2&3 BHK Apartments, With All Amenities @ Ramkrishna Nagar.
Commercial Sites @ Kuvempu Ngr, Preethi Lyt, Dattagalli & Srirampura
95386 90359, 90359 90359

WANTED
Sales Executives
for two wheeler service centre (Field work), experienced / freshers. Salary 25K to 30k.
Location: Mysore
Mob: 9380010600

SITE FOR SALE
60x40
Ramakrishnanagar 'I' Block, attached Vasu Layout, West facing site, Road 60 feet is for sale. Prime location.
8660297725, 6362085198

WANTED
30x40 North or East MUDA auctioned, allotted site or house in Vijayanagar 4th Stage, 2nd Phase, very close to Raju Corner only. Direct owners preferable, agents also welcome. Contact:
Call: 9731310243

ತಕ್ಷಣ ಬೇಕಾಗಿದ್ದಾರೆ
1) ವಿದ್ಯಾವಂತ ಸೆಕ್ಯೂರಿಟಿ ಗಾರ್ಡುಗಳು. ಸ್ಥಳ: 1) ಹಿನಕಲ್, (2) ಪಂಪ್‌ಹೌಸ್, (3) ಸಿಟಿ ಸುತ್ತಮುತ್ತ.
2) ಹೌಸ್‌ಕೀಪರ್ (ಮಹಿಳೆಯರು ಮಾತ್ರ) ವಿಜಯನಗರ ಸುತ್ತಮುತ್ತ.
9686422400, 9242406261

ಮನೆ ಬಾಡಿಗೆಗೆ ಇದೆ
20x30, G/Floor, 2 ಬೆಡ್‌ರೂಂ, ಪೂಜಾ ರೂಂ, ಸೋಲಾರ್ ಇರುವ S/Facing ಮನೆ ಅರವಿಂದನಗರ, ಕುವೆಂಪುನಗರ ಬಸ್ ಡಿಪೋ ಹಿಂಭಾಗದಲ್ಲಿ ತಕ್ಷಣ ಲಭ್ಯವಿದೆ.
Mob: 9448247580

ಸೈಟ್ ಮಾರಾಟಕ್ಕಿದೆ
15x40 ಸೈಟ್ (MUDA APPROVED)
ಹೊಳಾಲು (ಆಚಾರ್ಯ ವಿದ್ಯಾಕುಲ ಹತ್ತಿರ), ತ್ರಿಮೂರ್ತಿ ನಗರ.
9448150408, 9945419648

FOR SALE
25x30 N/F old house in 2nd Stage, Vijayanagar, Behind K.D. Circle.
Mob: 9900105538

ಸೈಟು ಮಾರಾಟಕ್ಕಿದೆ
30x40, 40x60, 20x40
ಸುವರ್ಣ ಲೇಔಟ್ ಮಾರುವವರು, ಕೊಳ್ಳುವವರು
Mob: 8618495118

ಬಾಡಿಗೆಗೆ ಇದೆ
1.40x60 ಕಮರ್ಷಿಯಲ್ ಬಿಲ್ಡಿಂಗ್ ಶ್ರೀರಾಂಪುರ 2ನೇ ಹಂತ, (ಭ್ರಮರಾಂಭ ಕಲ್ಯಾಣ ಮಂಟಪದ ಎದುರು)
2.2 ಬೆಡ್ ರೂಂ ಇಂಡಿಪೆಂಡೆಂಟ್ ಮನೆ, ಪೂರ್ವದಿಕ್ಕು, ಅಮೃತ್ ಬೇಕರಿ, ಶ್ರೀರಾಂಪುರ 2ನೇ ಹಂತದಲ್ಲಿ ಬಾಡಿಗೆಗೆ ಇದೆ.
9036413529

FUND ORDER
ಉತ್ತಮ ದಿನಸಿ ಪದಾರ್ಥಗಳು, Fund ಆರ್ಡರ್‌ಗಳಿಗೆ ಅತಿ ಕಡಿಮೆ ಬೆಲೆಗೆ ಕೊಡಲಾಗುವುದು. Estimate ಸಹ ಕೊಡಲಾಗುವುದು. ನಮ್ಮಲ್ಲಿ ಉಚಿತ ಡೆಲಿವರಿ ದೊರೆಯುತ್ತದೆ. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ
ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್
ಬಂಡಿಪಾಳ್ಯ, ನಜರ್‌ಬಾದ್, ಮೈಸೂರು
9739816440

SITE FOR SALE
25x50 South Face Shankar Nagar, Mandya, 4000/- Per sqft negotiable
9110888813

ಬೇಕಾಗಿದ್ದಾರೆ
ಕಛೇರಿ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ ಡಿಗ್ರಿ ಸಂಪರ್ಕಿಸಿ :
9449636424

MUDA / DTCP SITES
ತಕ್ಷಣ ಮನೆ ಕಟ್ಟಲು ನಮ್ಮ ಲೇಔಟ್‌ನಲ್ಲಿ
ಜೆ.ಪಿ ನಗರ ರಿಂಗ್ ರಸ್ತೆ ಹತ್ತಿರ 24 ಲಕ್ಷ
ಬೋಗಾದಿ ಟ್ರೆಂಡ್ ಫ್ಲ್ಯಾಟ್ ಹತ್ತಿರ 36 ಲಕ್ಷ
ವಿದ್ಯಾವಿಕಾಸ್, MPRO ಹಿಂಭಾಗ 34.75 ಲಕ್ಷ
ವಸಂತನಗರ/ಗೋಲ್ಡನ್ ಲೇಔಟ್ ಪಕ್ಕ 32 ಲಕ್ಷ
ಹುಣಸೂರು ರಸ್ತೆ, ಇಲವಾಲ 27–36 ಲಕ್ಷ
Call : 81230 75038
Broker Excuse 0% Commission

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
6362150462, 7795749881

INDUSTRIAL SHED FOR SALE
20.000 sft land. 17.500 sft built up area shed, 100 hp Power with water. Loan also available.
8884455552
8884004333

ROYAL SERVICES
Property consultants, sales, purchase and lease, litigation properties, loans, Documentation work, legal opinion, legal Work, Constructions works & digital Marketing
8884455552
8884004333

ಬೇಕಾಗಿದ್ದಾರೆ
ಮೈಸೂರು ಬೆಳ್ಳಿಯಲ್ಲಿ ಇರುವ ಕಾರ್ ಶೋರೂಂಗೆ ಹಾಗೂ ಬೈಕ್ ಶೋರೂಂಗಳಿಗೆ, ತಕ್ಷಣ ಯುವಕ ಮತ್ತು ಯುವತಿಯರು ಬೇಕಾಗಿದ್ದಾರೆ. EDUCATION SSLC, PUC, ITI, DIPLOMA, DEGREE ಬಾಗಿ ಇರುವ ಹುದ್ದೆಗಳು, CASHIER, BILLING, RECEPTIONIST, HR, ADMIN, ACCOUNTANT ETC, SALARY (18k -38k), ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ
8317415401
9632659609

ಸೈಟುಗಳು ಬೇಕಾಗಿದೆ
T. ನರಸೀಪುರ ರಸ್ತೆ/ ಬನ್ನೂರು ರಸ್ತೆ / ಲಾಲ್‌ಬಹದ್ದೂರ್ ಶಾಸ್ತ್ರಿ ನಗರ/ ಶಾಂತವೇರಿಗೋಪಾಲಗೌಡನಗರ ವರುಣ JSS, ಬಸವೇಶ್ವರ/ ನಿರ್ಮಾಣ್‌ನಗರ/ಬ್ಯಾಂಕರ್ ಲೇಔಟ್ ಹಾಗೂ ಸುತ್ತಮುತ್ತ ಬಡಾವಣೆಗಳಲ್ಲಿ
9686071750

ಬೇಕಾಗಿದ್ದಾರೆ
ಸೆಕ್ಯೂರಿಟಿ ಸೂಪರ್‌ವೈಸರ್ ಮತ್ತು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. (For 8 Hours Male candidates only) ಉತ್ತಮ ವೇತನ, ಪಿಎಫ್ ಮತ್ತು ಇಎಸ್‌ಐ ಸೌಲಭ್ಯವಿರುತ್ತದೆ. ವಯಸ್ಸಿನ ಮಿತಿ– 50ರ ಒಳಗೆ. ಸ್ಥಳ: ಕಡಕೊಳ ಕೈಗಾರಿಕ ನಗರ ಮತ್ತು ಹೆಬ್ಬಾಳು ಕೈಗಾರಿಕಾ ನಗರ ಮೈಸೂರು.
9986748497
9886200104

ಮೈಸೂರು ಪ್ರಾಪರ್ಟೀ
ಕಡಿಮೆ ಬೆಲೆಗೆ ಸೈಟುಗಳು ಮಾರಾಟಕ್ಕಿದೆ.
ದಟ್ಟಗಳ್ಳಿ, ವಿಜಯನಗರ, ಹೆಬ್ಬಾಳ, ಬೋಗಾದಿ, ಶಕ್ತಿನಗರ, ಇಲವಾಲ.
7259351111
9986948594

TEACHER WANTED
Indira Convent Guthal Colony, Mandya
Qualification: B.Sc., B.Ed., M.Sc., BA, MA, NST, PUC, D.Ed.
8747011791
7259547922

ಉದ್ಯೋಗಾವಕಾಶ
ಮೈಸೂರಿನಲ್ಲಿ ನೂತನವಾಗಿ ಆರಂಭವಾಗಿರುವ A.W.G. ಕಂಪನಿಯಲ್ಲಿ ಖಾಲಿಯಿರುವ 96 ಹುದ್ದೆಗಳಿಗೆ ಹುದ್ದೆಗಳಿಗೆ. Interview ನಡೆಸಲಾಗುತ್ತದೆ. ಕೂಡಲೇ ಸಂಪರ್ಕಿಸಿ. ವಿದ್ಯಾರ್ಹತೆ : SSLC, PUC, Dim, ITI and Degree, ವಯೋಮಿತಿ- 18 ರಿಂದ 35ವರ್ಷ, ತಿಂಗಳಿಗೆ : – 18000 – 27000ವರೆಗೆ ಉಚಿತ ಊಟ + ವಸತಿ
9886479489
7349699460

MYSURU RING ROAD COMMERCIALSITE FOR SALE
Muda Auction Purchase Site 50x80(4000 Sq.ft), Satagalli, 50mtrs to VTU College, Ring road Facing
9845882299
9945102407

SITE FOR SALE
50x80 E/F, Bankers Colony, (Behind Sanjo Hospital) Mandya, Broker Excuse
8217360813
9686667133

ಸದ್ಗುರು ಮ್ಯಾರೇಜಸ್ ಶೀಘ್ರ ವಿವಾಹಕ್ಕಾಗಿ
ಎಲ್ಲಾ ಜಾತಿಯ ವಧುವರರು, ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ
9448229184
7899625268

475 ACRES LAND FOR SALE - BELTANGADY
Premium agricultural & commercial estate near Dharmasthala, Gandibagilu. Rubber, arecanut, coconut, teak, cashew plantations with river surroundings. Suitable for resorts, schools, hospitals, eco projects & investments. Price: Rs.85 Cr.
Contact: BR.SHYAM.B@GMAIL.COM

ಭೋಗ್ಯಕ್ಕೆ ಮನೆ ಬೇಕಾಗಿದೆ
ಮೈಸೂರು–ಹೆಬ್ಬಾಳು, ವಿಜಯನಗರ 1ನೇ ಹಾಗೂ 2ನೇ ಹಂತ, ಗೋಕುಲಂ, ವಿ.ವಿ. ಮೊಹಲ್ಲಾ, ಮೇಟಗಳ್ಳಿ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಶುದ್ಧ ಸಸ್ಯಾಹಾರಿ ಕುಟುಂಬಕ್ಕೆ 30x40 independent ಮನೆ ಭೋಗ್ಯಕ್ಕೆ ಬೇಕಾಗಿದೆ. ಸಂಪರ್ಕಿಸಿ: ಪ್ರಿಯಾ
6364795551

ವಧು ಬೇಕಾಗಿದ್ದಾರೆ
ಅಯ್ಯಂಗಾರ್ ಜಾತಿಯ 38 ವರ್ಷದ ಡ್ರೈವರ್ ಆಗಿರುವ ಮಧ್ಯಮ ವರ್ಗದ ವರನಿಗೆ ತ್ರಿಮತಸ್ಥ ಬ್ರಾಹ್ಮಣರಲ್ಲಿ ವಧು ಬೇಕಾಗಿದ್ದಾರೆ. ವರನು ಒಕ್ಕಲಿಗ ಕೆಲಸದಲ್ಲಿರುತ್ತಾನೆ. ಮಧ್ಯವರ್ತಿಗಳಿಗೆ ಅವಕಾಶವಿರುವುದಿಲ್ಲ. ಸಂಪರ್ಕಿಸಿ:
9341946820
8050720592

ಡಿಜಿಟಲ್ ಮಾರ್ಕೆಟಿಂಗ್
ನೂತನ AI ತಂತ್ರಜ್ಞಾನದಿಂದ, ನಿಮ್ಮ ವ್ಯಾಪಾರವನ್ನು ನಾವು ಪ್ರಚಾರ ಮಾಡುತ್ತೇವೆ.
"WE ROMOTE YOUR BUISNESS, WITH OUR DIGITALIZED WAY"
ಸಂಪರ್ಕಿಸಿ : royalmarketingno1@gmail.com
8884455552
8884004333

ಸೈಟುಗಳು ಮಾರಾಟಕ್ಕಿದೆ
30x50 S/W ಕಾರ್ನರ್
30x50 S/F
25x35 (10 sites)
30x40 E/F JSS 2nd Stage ಪಕ್ಕ ಟಿ. ನರಸೀಪುರ ರಸ್ತೆ.
Mob: 9187593627

SITE FOR SALE
30x40 West facing site, Srigandha Layout, near Kusuma Chandrashekhar Layout, KRS Road.
Price: Rs. 58 Lakhs.
Call: 8197707001

ಸೋಲಾರ್ ಸರ್ವೀಸ್
ನಮ್ಮಲ್ಲಿ ಎಲ್ಲಾ ಕಂಪನಿಗಳ ಸೋಲಾರ್ ಸರ್ವೀಸ್ ಅನ್ನು ರಿಯಾಯಿತಿ ದರದಲ್ಲಿ ಮಾಡಿಕೊಡಲಾಗುತ್ತದೆ.
7760665506
7338445851

SITE FOR SALE
Genuine Deals - Genuine Documents


40x60 E	Sourish	Bogadi	1.00 Cr
30x40 E	Vidya Vikas	T.N.Pur Rd	55 Lakhs
30x40 E	Harividyalaya,	Bogadi	65 Lakhs
30x40 W	Belwadi	Hunsur Rd	35 Lakhs
32x40 N	Bogadi	Bhavani Coorporation	66 Lakhs
20x45 E	Dattagally	Christ School	53 Lakhs
30x40 E	Nityananda	Hunsur Rd	32 Lakhs
30x40 N	Nypunya	R.T. Nagar	65 Lakhs

9886697052 9342384641

TEACHER WANTED
Kinder Garten Teacher (Strong English communication, Montessori preferred)
High School Science Teacher. Contact:
8867819099
8310245354

SITE FOR SALE
30x40 South Face opposite to park MUDA allotted site for sale near Naidu Store, Srirampura 2nd Stage, Mysore.
9480503015

Solar Water Heaters
Modern Living
20 ವರ್ಷಗಳ ಅನುಭವ



Solar Water Heater SALES & SERVICE
SUNZONE SOLAR SYSTEM
VM Double Road, Kuvempunagar, Mysuru
9845175443

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

WANTED TEACHING STAFF
for reputed institution (Experience Preferred) for ENGLISH, MATHS, NURSERY and HINDI subjects. Transport facilities available. Drop your resume through WhatsApp
8971577685
9980631121

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆ ನೇರ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರರಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮುಂದುವರೆದ ವರ್ಗೀಕೃತ ಜಾಹೀರಾತಿಗಾಗಿ 11ನೇ ಪುಟ ನೋಡಿ

ಸಿಲಿಂಡರ್ ವಿತರಿಸದೇ ಗ್ರಾಹಕರಿಗೆ ವಂಚನೆ

ಗ್ಯಾಸ್ ಏಜೆನ್ಸಿ ವಿರುದ್ಧ ಗ್ರಾಹಕರು, ದಸಂಸ ಪ್ರತಿಭಟನೆ

ತಿ.ನರಸೀಪುರ, ಮೇ 27– ಅಡುಗೆ ಅನಿಲ ವಿತರಿಸದಿದ್ದರೂ, ಓಟಿಪಿ ದಾಖಲಿಸಿಕೊಂಡು ಗ್ರಾಹಕರಿಗೆ ವಂಚಿಸುತ್ತಿರುವ ಗ್ಯಾಸ್ ಏಜೆನ್ಸಿ ವಿರುದ್ಧ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಕಾರ್ಯಕರ್ತರು ಗ್ರಾಹಕರ ಜೊತೆಗೂಡಿ ಬುಧವಾರ ಪ್ರತಿಭಟನೆ ನಡೆಸಿದರು.

ಪಟ್ಟಣದ ನಂಜನಗೂಡು ರಸ್ತೆಯಲ್ಲಿರುವ ಭಾರತ್ ಗ್ಯಾಸ್‌ನ ಎಸ್.ಆರ್.ಗ್ಯಾಸ್ ಏಜೆನ್ಸಿ ಎದುರು ಜಮಾಯಿಸಿದ ಗ್ರಾಹಕರು ಹಾಗೂ ದಸಂಸ ಕಾರ್ಯಕರ್ತರು ಅಡುಗೆ ಅನಿಲ ವಿತರಣೆಗೆ ರೂಪಿಸಿರುವ ಓಟಿಪಿ ಎಂಟ್ರಿಯನ್ನು ದುರ್ಬಳಕೆ ಮಾಡಿಕೊಂಡು ಹಲವು ದಿನಗಳಿಂದ ಗ್ರಾಹಕರಿಗೆ ಸಿಲಿಂಡರ್‌ಗಳನ್ನು ನೀಡದೆ ವಂಚಿಸುತ್ತಿರುವ ವಿತರಕರ ಅನ್ಯಾಯ ಖಂಡಿಸಿ ಧಿಕ್ಕಾರ ಕೂಗಿ, ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲಾ ಪ್ರಧಾನ ಸಂಚಾಲಕ ಬನ್ನಹಳ್ಳಿ ಸೋಮಣ್ಣ ಮಾತನಾಡಿ, ಮಧ್ಯ ಪ್ರಾಚ್ಯದಲ್ಲಿ ಯುದ್ಧದಿಂದ ಅಡುಗೆ ಅನಿಲ ಸರಬರಾಜಿನಲ್ಲಿ ತಲೆದೋರಿದ ಬಿಕ್ಕಟ್ಟಿನ ಸಂದರ್ಭ ಗ್ರಾಹಕರಿಗೆ ಅನುಕೂಲವಾಗಲೆಂದು ಇರುವ ನಿಯಮಗಳನ್ನು ದುರ್ಬಳಕೆ ಮಾಡಿಕೊಂಡು ಪಟ್ಟಣದ ಎಸ್.ಆರ್.ಗ್ಯಾಸ್ ಏಜೆನ್ಸಿಯವರು ಗ್ರಾಹಕರಿಗೆ ತೊಂದರೆ ಕೊಡುತ್ತಿದ್ದಾರೆ. ಗ್ಯಾಸ್ ಬುಕ್ ಮಾಡಲು 45 ದಿನಗಳು ಬೇಕು. ಅನಂತರ ಬುಕ್ ಮಾಡಿದ 15 ದಿನಗಳ ನಂತರ ಸಿಲಿಂಡರ್ ಕೊಡಿ ಎಂದು ಕೇಳಿದರೂ ಗ್ರಾಹಕರಿಗೆ ಸಿಲಿಂಡರ್ ಕೊಡುವುದಿಲ್ಲ. ನಿತ್ಯ ಎಸ್.ಆರ್.ಗ್ಯಾಸ್ ಅಂಗಡಿ ಎದುರು ಗ್ಯಾಸ್ ಸಿಲಿಂಡರ್‌ಗೆ ಕಾಯಬೇಕಿದೆ. ಬುಕ್ ಆಗಿರುವ ಗ್ರಾಹಕರಿಂದ ಓಟಿಪಿ ಪಡೆದು 5 ರಿಂದ 7 ದಿನಗಳ ನಂತರ ಸಿಲಿಂಡರ್ ಸಿಗುತ್ತದೆ ಎಂದು ಸಬೂಬು ಹೇಳುತ್ತಾರೆ. ಬಳಿಕ ಏಜೆನ್ಸಿ ಮಾಲೀಕರಾಗಲೀ, ಸರಬರಾಜು ಮಾಡುವ ಆಟೋ ಚಾಲಕರಾಗಲಿ ಯಾರ ಫೋನ್ ಕರೆಗಳನ್ನು ಸಹ ಸ್ವೀಕರಿಸುವುದಿಲ್ಲ. ಬಂದ ಸಿಲಿಂಡರ್‌ಗಳು ಕಾಳಸಂತೆಯಲ್ಲಿ ಮಾರಾಟವಾಗುತ್ತಿವೆ. ಆದ್ದರಿಂದ ಎಸ್.ಆರ್.ಗ್ಯಾಸ್ ಏಜೆನ್ಸಿಯವರ ವಿರುದ್ಧ ಸೂಕ್ತ ಕ್ರಮ ಕೈಗೊಂಡು, ಗ್ರಾಹಕರಿಗೆ ಅನಾನುಕೂಲವಾಗದಂತೆ ಕ್ರಮವಹಿಸಬೇಕು ಎಂದು ಆಗ್ರಹಿಸಿದರು.

ಈ ವೇಳೆ ಸ್ಥಳಕ್ಕಾಗಮಿಸಿದ ತಹಸೀಲ್ದಾರ್ ಟಿ.ಜಿ. ಸುರೇಶಾಚಾರ್ ಮಾತನಾಡಿ, ಎಸ್.ಆರ್. ಗ್ಯಾಸ್ ಏಜೆನ್ಸಿ ವಿರುದ್ಧ ವ್ಯಾಪಕ ದೂರು ಕೇಳಿ ಬರುತ್ತಿವೆ. ಈಗಾಗಲೇ ಸಿಲಿಂಡರ್‌ಗಳ ವಿತರಣೆಯಲ್ಲಿ ಗ್ರಾಹಕರನ್ನು ವಂಚಿಸಬಾರದೆಂದು ಕಟ್ಟುನಿಟ್ಟಿನ ಸೂಚನೆ ನೀಡಿದ್ದರೂ, ಮತ್ತದೇ ದೂರುಗಳು ಪುನರಾವರ್ತನೆಗೊಳ್ಳುತ್ತಿವೆ. ಈ ಬಗ್ಗೆ ಆಹಾರ ಇಲಾಖೆ ಅಧಿಕಾರಿಗಳಿಂದ ಮಾಹಿತಿ ಪಡೆದು ವಿತರಕರ ವಿರುದ್ಧ ಕ್ರಮ ಜರುಗಿಸುವಂತೆ ಜಿಲ್ಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಲಾಗುವುದು ಎಂದು ತಿಳಿಸಿದರು.

ಪ್ರತಿಭಟನೆಯಲ್ಲಿ ದಲಿತ ಸಂಘರ್ಷ ಸಮಿತಿ ಪದಾಧಿಕಾರಿಗಳಾದ ಶಂಕರಮೂರ್ತಿ, ಗಿರೀಶ, ಬಸವರಾಜ ಸೇರಿದಂತೆ ನೂರಾರು ಗ್ರಾಹಕರು ಇದ್ದರು.



ತಿ.ನರಸೀಪುರದ ಎಸ್.ಆರ್.ಗ್ಯಾಸ್ ಏಜೆನ್ಸಿ ಎದುರು ಗ್ರಾಹಕರು, ದಸಂಸ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು.

ಒಂದು ತಿಂಗಳಲ್ಲಿ ಸೂಕ್ತ ಪರಿಹಾರ

ತಿ.ನರಸೀಪುರದ ಎಸ್.ಆರ್.ಗ್ಯಾಸ್ ಏಜೆನ್ಸಿಯಲ್ಲಿ ಕಳೆದ ಐದಾರು ವರ್ಷಗಳಿಂದ ಸುಮಾರು 5900 ಗ್ರಾಹಕರು ಕೆವೈಸಿ ಮಾಡಿಸದೇ ಎಲ್ಲಾ ಬ್ಲಾಕ್ ಆಗಿದ್ದವು. ಇದೀಗ ಗ್ಯಾಸ್ ಸಮಸ್ಯೆಯಾಗಿದ್ದರಿಂದ 4200 ಗ್ರಾಹಕರು ಕೆವೈಸಿ ಮಾಡಿಸಿ ಗ್ಯಾಸ್ ಸಿಲಿಂಡರ್‌ಗಾಗಿ ಮುಗಿಬಿದ್ದಿದ್ದಾರೆ. ನಾವು ಸರ್ಕಾರದ ಮಾರ್ಗಸೂಚಿಯಂತೆ ಬುಕ್ಕಿಂಗ್ ಮೂಲಕವೇ ಸಮರ್ಪಕವಾಗಿ ಗ್ಯಾಸ್ ವಿತರಿಸುತ್ತಿದ್ದೇವೆ. ಇದರಲ್ಲಿ ಯಾವುದೇ ಸಮಸ್ಯೆ ಆಗಿಲ್ಲ. ಈ ಸಮಸ್ಯೆಗೆ ಒಂದು ತಿಂಗಳಲ್ಲಿ ಪರಿಹಾರ ಕಂಡುಕೊಳ್ಳಲಾಗುವುದು. – **ಷಹನಾಜ್ ರಿಯಾಜ್, ಎಸ್.ಆರ್.ಗ್ಯಾಸ್ ಮಾಲೀಕರು.**

ಇಂದು ಮಹಿಳಾ ಕ್ಷೇಮಾಭಿವೃದ್ಧಿ ಸಂಘ ಉದ್ಘಾಟನೆ


ಸಾ.ರಾ.ಮಹೇಶ್

ಕೆ.ಆರ್.ನಗರ, ಮೇ 27– ಕೆ.ಆರ್.ನಗರ ಟೌನ್ ಒಕ್ಕಲಿಗರ ಮಹಿಳಾ ಕ್ಷೇಮಾಭಿವೃದ್ಧಿ ಸಂಘ (ರಿ) ಅಸ್ತಿತ್ವಕ್ಕೆ ಬಂದಿದ್ದು, ಮೇ 28ರಂದು ಬೆಳಗ್ಗೆ 10.30ಕ್ಕೆ ಪಟ್ಟಣದ ಶ್ರೀಹೆಚ್.ಡಿ.ದೇವೇಗೌಡ ಸಮುದಾಯ ಭವನದಲ್ಲಿ ಸಂಘವನ್ನು ಮಾಜಿ ಸಚಿವ ಸಾ.ರಾ.ಮಹೇಶ್ ಉದ್ಘಾಟಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಮಾಜಿ ಸಚಿವ ದಿ.ಎಸ್.ನಂಜಪ್ಪ ಅವರ ಪತ್ನಿ ಲಲಿತಾ ನಂಜಪ್ಪ ಹಾಗೂ ಮಾಜಿ ಸಚಿವ ಸಾ.ರಾ.ಮಹೇಶ್ ಅವರ ಪತ್ನಿ ಅನಿತಾ, ನವನಗರ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್, ಕೆ.ಆರ್.ನಗರ ಮತ್ತು ಸಾಲಿಗ್ರಾಮ ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಶಿವರಾಮು, ಗೌರವಾಧ್ಯಕ್ಷ ಮಿರ್ಲೆ ಅಣ್ಣೇಗೌಡ, ಒಕ್ಕಲಿಗರ ಸಮಾಜದ ಹಿರಿಯ ಮುಖಂಡ ಎಸ್.ಪಿ.ತಮ್ಮಯ್ಯ, ತಾಲೂಕು ಒಕ್ಕಲಿಗ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಸ್.ರಾಮಲಿಂಗು ಭಾಗವಹಿಸಲಿದ್ದಾರೆ ಎಂದು ಕೆ.ಆರ್.ನಗರ ಟೌನ್ ಒಕ್ಕಲಿಗರ ಮಹಿಳಾ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷೆ ರೂಪ ಮಂಜುನಾಥ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆ.ಆರ್.ನಗರ ಟೌನ್ ಒಕ್ಕಲಿಗರ ಮಹಿಳಾ ಕ್ಷೇಮಾಭಿವೃದ್ಧಿ ಸಂಘದ ನೂತನ ಆಡಳಿತ ಮಂಡಳಿ ರಚನೆಯಾಗಿದ್ದು, ಪದಾಧಿಕಾರಿಗಳಾಗಿ ಅಧ್ಯಕ್ಷೆ ರೂಪಾ ಮಂಜುನಾಥ್, ಉಪಾಧ್ಯಕ್ಷೆ ಶ್ವೇತಾ ಗೋಪಾಲ್, ಪ್ರಧಾನ ಕಾರ್ಯದರ್ಶಿ ಶೀಲಾ ಚೇತನ್, ನಿರ್ದೇಶಕರಾಗಿ ಭಾಗ್ಯಮ್ಮ ಕೃಷ್ಣೇಗೌಡ, ಕವಿತಾ ಚನ್ನಕೇಶವ, ನಂದಿನಿ ಗೌತಮ್, ಸುಮತಿ ಕುಮಾರ್, ಮಮತಾ ಲೋಕೇಶ್, ಪೂರ್ಣಿಮಾ ಗಿರೀಶ್, ಮೋಹನಾಂಭ ಚನ್ನೇಗೌಡ, ರೂಪಶ್ರೀ ಮಂಜೇಗೌಡ, ರಮ್ಯ ಎಸ್.ಕೆ.ವಿನಯ್‌ಬಾಬು ಆಯ್ಕೆಯಾಗಿದ್ದಾರೆ. ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಶೀಲಾ ಚೇತನ್ ತಿಳಿಸಿದ್ದಾರೆ.

ಕೆ.ಆರ್.ನಗರ ಟೌನ್ ಒಕ್ಕಲಿಗರ ಮಹಿಳಾ ಕ್ಷೇಮಾಭಿವೃದ್ಧಿ ಸಂಘದ ಉದ್ಘಾಟನಾ ಸಮಾರಂಭಕ್ಕೆ ಒಕ್ಕಲಿಗ ಸಮಾಜ ದವರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಇದೇ ವೇಳೆ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಚಿಕ್ಕದೇವಮ್ಮನ ಬೆಟ್ಟದ ಹಾಲುಗಡದಲ್ಲಿ ತೆರೆದಿರುವ

ಅನಧಿಕೃತ ಮದ್ಯದ ಅಂಗಡಿ ತೆರವುಗೊಳಿಸಿ

ಹಾಲಗಡ ಶ್ರೀಚಿಕ್ಕದೇವಮ್ಮ ದೇವಸ್ಥಾನ ಜಾತ್ರಾ ಕಮಿಟಿ ಅಧ್ಯಕ್ಷ ದೊಡ್ಡವೀರ ನಾಯಕ ಒತ್ತಾಯ

ಹೆಚ್.ಡಿ.ಕೋಟೆ, ಮೇ 27– ಸರಗೂರು ತಾಲೂಕಿನ ಶಕ್ತಿದೇವತೆ ಚಿಕ್ಕದೇವಮ್ಮನ ಬೆಟ್ಟದ ಹಾಲುಗಡದ ಗಣೇಶನ ದೇವಾಲಯದ ಬಳಿ ಅನಧಿಕೃತವಾಗಿ ತೆರೆದಿರುವ ಮದ್ಯದ ಅಂಗಡಿ ತೆರವುಗೊಳಿಸಬೇಕು ಎಂದು ಹಾಲಗಡ ಶ್ರೀಚಿಕ್ಕದೇವಮ್ಮ ದೇವಸ್ಥಾನ ಜಾತ್ರಾ ಕಮಿಟಿ ಅಧ್ಯಕ್ಷ ದೊಡ್ಡವೀರ ನಾಯಕ ಒತ್ತಾಯಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಕ್ತಿ ದೇವತೆ ಚಿಕ್ಕದೇವಮ್ಮನ ಬೆಟ್ಟದ ಹಾಲುಗಡದಲ್ಲಿ ಅನಧಿಕೃತವಾಗಿ ಮದ್ಯದ ಅಂಗಡಿ ತೆರೆದಿರುವುದರಿಂದ ಭಕ್ತರಿಗೆ ಮುಜುಗರ ಉಂಟಾಗಿದೆ. ಚಿಕ್ಕದೇವಮ್ಮನ ಬೆಟ್ಟಕ್ಕೆ ನಿತ್ಯ ರಾಜ್ಯ, ಹೊರ ರಾಜ್ಯದಿಂದ ಸಾವಿರಾರು ಭಕ್ತರು ಆಗಮಿಸಿ ಹಾಲುಗಡದಲ್ಲಿರುವ ಕಪಿಲ ನದಿಯಲ್ಲಿ ಪುಣ್ಯ ಸ್ನಾನ ಮಾಡಿ ತಾಯಿ ಚಿಕ್ಕದೇವಮ್ಮನ ಬೆಟ್ಟಕ್ಕೆ ದರ್ಶನ ಪಡೆಯಲು ಈಗ ತೆರೆದಿರುವ ಮದ್ಯದಂಗಡಿ ಎದುರೇ ತೆರಳುವ ಪರಿಸ್ಥಿತಿ ಎದುರಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಮದ್ಯದ ಅಂಗಡಿಯಿಂದಾಗಿ ದೇವಸ್ಥಾನದ ಪಾವಿತ್ರತೆ ಹಾಳು ಮಾಡಿದಂತಾಗುತ್ತದೆ. ಈ ಭಾಗದಲ್ಲಿ ರೈತರು, ಕೃಷಿ ಕಾರ್ಮಿಕರೇ ಹೆಚ್ಚಾಗಿದ್ದು, ಅವರು ಮದ್ಯಪಾನ ವ್ಯಸನಕ್ಕೆ ಈಡಾದರೇ ಅವರ ಬದುಕು ಹಾಳಾಗುತ್ತದೆ. ಇದನ್ನು ಗಮನದಲ್ಲಿ ಇಟ್ಟುಕೊಂಡು ಮದ್ಯದ ಅಂಗಡಿ ತೆರೆಯುವ ಮುನ್ನವೇ ಶಾಸಕ ಅನಿಲ್ ಚಿಕ್ಕಮಾದು, ಜಿಲ್ಲಾಧಿಕಾರಿಗಳು, ಅಬಕಾರಿ ಇಲಾಖೆ ಅಧಿಕಾರಿಗಳು, ತಹಸೀಲ್ದಾರ್ ಮೋಹನ ಕುಮಾರಿ ಅವರಿಗೆ ಮದ್ಯದಂಗಡಿ ತೆರೆಯದಂತೆ ಮನವಿ ಸಲ್ಲಿಸಲಾಗಿತ್ತು. ಆದರೂ ಇದೀಗ ಬಾರ್ ತೆರೆಯಲಾಗಿದೆ. ಇದರಿಂದ ಸುತ್ತಮುತ್ತಲ ಗ್ರಾಮಸ್ಥರು ಹಾಗೂ ಕ್ಷೇತ್ರದ ಭಕ್ತರ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟಾಗಿದೆ ಎಂದು ಆರೋಪಿಸಿದರು.

ಮೇ 30ರಂದು ಹಾಲುಗಡದಲ್ಲಿ ಮದ್ಯದಂಗಡಿ ಮುಚ್ಚಿಸುವ ಸಂಬಂಧ 2 ತಾಲೂಕಿನ ಗ್ರಾಮಸ್ಥರು, ಪ್ರಗತಿಪರ, ರೈತ, ಮಹಿಳಾ ಹಾಗೂ ಕನ್ನಡಪರ ಸಂಘಟನೆಗಳು, ಭಕ್ತರು, ಜನಪ್ರತಿನಿಧಿಗಳ ಸಭೆ ನಡೆಯಲಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಸಭೆ ಯಶಸ್ವಿಗೊಳಿಸುವಂತೆ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಗ್ರಾಪಂ ಮಾಜಿ ಅಧ್ಯಕ್ಷರಾದ ಬಿ.ಬಸವರಾಜು, ಜಯರಾಮ, ಆರ್.ಕಾಳಿಂಗ ನಾಯಕ, ಮಾಜಿ ಸದಸ್ಯ ಎನ್.ಬಸವ ನಾಯಕ, ಗ್ರಾಮದ ಯಜಮಾನರಾದ ನಿಂಗರಾಜು, ಚಿನ್ನನಾಯಕ, ಮುಖಂಡರಾದ ಐ.ಬಿ.ರವಿಕುಮಾರ್, ಜೋಗಿ ದೇವನಾಯಕ, ಚಾಮನಾಯಕ ಇದ್ದರು.



ಸುದ್ದಿಗೋಷ್ಠಿಯಲ್ಲಿ ದೊಡ್ಡವೀರ ನಾಯಕ ಮಾತನಾಡಿದರು.

“ ಶಾಸಕ ಅನಿಲ್ ಚಿಕ್ಕಮಾದು ಅವರೇ ಶಕ್ತಿದೇವತೆ ಚಿಕ್ಕದೇವಮ್ಮನವರ ಬೆಟ್ಟದ ಹಾಲುಗಡದ ಬಳಿ ಅನಧಿಕೃತವಾಗಿ ತೆರೆದಿರುವ ಮದ್ಯದಂಗಡಿಯನ್ನು ದಯಮಾಡಿ ತೆರವುಗೊಳಿಸಿ. ಶಕ್ತಿ ದೇವತೆ ಇರುವ ಸ್ಥಳದಲ್ಲಿ ಮದ್ಯದಂಗಡಿ ತೆರೆಯಲು ನೀವು ಅನುಮತಿ ನೀಡಿರುವುದು ಸರಿಯಲ್ಲ. ತಾಲೂಕಿನ ಜನತೆ ನಿಮ್ಮನ್ನು 2ನೇ ಬಾರಿಗೆ ಗೆಲ್ಲಿಸಿ ಶಾಸಕರನ್ನಾಗಿ ಮಾಡಿದ್ದಾರೆ. ಅಲ್ಲದೇ ತಾಯಿ ಚಿಕ್ಕದೇವಮ್ಮನವರ ಆಶೀರ್ವಾದವೂ ಕೂಡ ನಿಮಗಿದೆ. ದಯಮಾಡಿ ಮದ್ಯದಂಗಡಿ ತೆರವುಗೊಳಿಸಿ, ಇಲ್ಲದಿದ್ದರೇ ಕ್ಷೇತ್ರದ ಜನತೆಯ ವಿಶ್ವಾಸ ಕಳೆದುಕೊಳ್ಳುತ್ತೀರಾ. – ಸಾರ್ವಜನಿಕರು, ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕು.

ರಸಗೊಬ್ಬರ, ಪೆಟ್ರೋಲ್, ಡಿಸೇಲ್ ಬೆಲೆ ಏರಿಕೆ ಖಂಡಿಸಿ

ನಂ.ಗೂಡಲ್ಲಿ ರೈತ ಸಂಘದಿಂದ ಪ್ರತಿಭಟನೆ

ನಂಜನಗೂಡು, ಮೇ 27– ರಸಗೊಬ್ಬರ ಹಾಗೂ ಪೆಟ್ರೋಲ್ ಮತ್ತು ಡಿಸೇಲ್ ಬೆಲೆ ಏರಿಕೆ ಖಂಡಿಸಿ ಕರ್ನಾಟಕ ರಾಜ್ಯ ರೈತ ಸಂಘದ ಕಾರ್ಯಕರ್ತರು ಬುಧವಾರ ನಗರದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ವಿಶ್ವೇಶ್ವರಯ್ಯ ವೃತ್ತದಿಂದ ಪಾದಯಾತ್ರೆ ಮೂಲಕ ತಾಲೂಕು ಕಚೇರಿಗೆ ತೆರಳಿದ ಪ್ರತಿಭಟನಾಕಾರರು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ರೈತ ಸಂಘದ ಮುಖಂಡರು ಮಾತನಾಡಿ, ಇಂಧನ ಬೆಲೆ ಏರಿಕೆಯಿಂದಾಗಿ ಅಗತ್ಯ ವಸ್ತುಗಳ ಬೆಲೆ ದುಬಾರಿಯಾಗಿದ್ದು, ಜನ ಸಾಮಾನ್ಯರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಇನ್ನು ರಸಗೊಬ್ಬರಗಳ ಬೆಲೆ ಏರಿಸಿರುವುದರಿಂದ ರೈತ ಸಮುದಾಯಕ್ಕೆ ದೊಡ್ಡ ನಷ್ಟವುಂಟಾಗಿದೆ. ಇನ್ನು ಕೇಂದ್ರ ಬಿಜೆಪಿ ಸರ್ಕಾರ ಡಾ.ಎಂ.ಎಸ್. ಸ್ವಾಮಿನಾಥನ್ ವರದಿಯನ್ನು ಜಾರಿಗೆ ತರದೆ ಕೋಟ್ಯಾಂತರ ರೈತರು ನಷ್ಟ ಅನುಭವಿಸುತ್ತಿದ್ದಾರೆ. ಹೀಗಾಗಿ ಸಂಕಷ್ಟದಲ್ಲಿರುವ ರೈತರಿಗೆ ನೆರವು ನೀಡುವ ಸಲುವಾಗಿ ರಸಗೊಬ್ಬರಗಳ ಬೆಲೆ ಕಡಿಮೆ ಮಾಡಿ ರಸಗೊಬ್ಬರಗಳ ಮೇಲಿನ ಸಬ್ಸಿಡಿ ಹೆಚ್ಚಿಸಿ ರಿಯಾಯಿತಿ ದರದಲ್ಲಿ ರೈತರಿಗೆ ಗೊಬ್ಬರ ಒದಗಿಸಬೇಕು. ಗೊಬ್ಬರ ಖರೀದಿಸುವ ರೈತರಿಗೆ ಆಧಾರ್ ಲಿಂಕ್ ಮಾಡಿಸುವ ಪ್ರಕ್ರಿಯೆ ಕೈಬಿಡಬೇಕು. ಇನ್ನು ರಾಜ್ಯದ ಆಡಳಿತಾರೂಢ ಕಾಂಗ್ರೆಸ್ ಪಕ್ಷ ಚುನಾವಣೆ ಪೂರ್ವದಲ್ಲಿ ನೀಡಿದ್ದ ಭರವಸೆಯಂತೆ ಭೂ ಸುಧಾರಣಾ ಮತ್ತು ಜಾನುವಾರು ಹತ್ಯೆ ಮತ್ತು ಸಂರಕ್ಷಣಾ ಕಾಯಿದೆಯನ್ನು ವಾಪಸ್ ಪಡೆಯಬೇಕು. ಜೊತೆಗೆ ಎಪಿಎಂಸಿಯನ್ನು ರೈತ ಸ್ನೇಹಿಯಾಗಿ ಬಲಯುತಗೊಳಿಸಬೇಕು. ಕೃಷಿ ಬೆಲೆ ಆಯೋಗವನ್ನು ಶಾಶ್ವತ ಆಯೋಗವನ್ನಾಗಿ ಘೋಷಿಸಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಸ್ಥಳಕ್ಕಾಗಮಿಸಿದ ತಹಸೀಲ್ದಾರ್ ಸ್ಮಿತಾ ರಾಮು ಅವರ ಮೂಲಕ ಪ್ರಧಾನ ಮಂತ್ರಿ ಹಾಗೂ ಮುಖ್ಯಮಂತ್ರಿಗೆ ಮನವಿ ಸಲ್ಲಿಸಿ ಪ್ರತಿಭಟನೆ ಅಂತ್ಯಗೊಳಿಸಿದರು. ಪ್ರತಿಭಟನೆಯಲ್ಲಿ ರೈತ ಸಂಘದ ತಾಲೂಕು ಅಧ್ಯಕ್ಷ ಮಹೇಶ್, ಪ್ರಧಾನ ಕಾರ್ಯದರ್ಶಿ ಎಂ.ರವಿ, ಯುವ ರೈತ ಘಟಕದ ಜಿಲ್ಲಾಧ್ಯಕ್ಷ ಪ್ರೇಮರಾಜ್, ಶ್ರೀಕಂಠ, ರಮೇಶ್ ಒಡೆಯನಪುರ, ಪ್ರಕಾಶ್ ಇಮ್ಮಾವು, ಮಾದಯ್ಯನಹುಂಡಿ ಬಸಪ್ಪ, ರಘು ಹೊಸಕೋಟೆ, ರಾಚಮ್ಮ, ಕಳಸಮ್ಮ, ಸಾಕಮ್ಮ, ರಾಜಮ್ಮ, ಮಾಳಶೆಟ್ಟಿ, ಗಿರಿರಾಜ್, ಬಸವರಾಜಣ್ಣ, ರಾಜಣ್ಣ, ನಾಗಣ್ಣ ಇತರರಿದ್ದರು.


ರಸಗೊಬ್ಬರ, ಪೆಟ್ರೋಲ್ ಬೆಲೆ ಏರಿಕೆ ಖಂಡಿಸಿ ರೈತ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.

ನಾಯಕ ಸಮಾಜದ ರಮೇಶ್ ಅವರನ್ನು ಎಂಎಲ್‌ಸಿ ಮಾಡಿ

ಬ್ಲಾಕ್ ಕಾಂಗ್ರೆಸ್ ಸಮಿತಿ ಪ.ಪಂಗಡ ವಿಭಾಗದ ಅಧ್ಯಕ್ಷ ಸಿ.ಸೋಮಣ್ಣ ಮನವಿ

ತಿ.ನರಸೀಪುರ, ಮೇ.27– ದಾವಣಗೆರೆ ಜಿಲ್ಲೆ ಚನ್ನಗಿರಿ ವಿಧಾನಸಭಾ ಕ್ಷೇತ್ರದ ನಾಯಕ ಸಮಾಜದ ಮುಖಂಡ ಹೊದಿಗೆರೆ ರಮೇಶ್ ಅವರಿಗೆ ವಿಧಾನ ಪರಿಷತ್ ಸ್ಥಾನ ನೀಡುವಂತೆ ತಿ.ನರಸೀಪುರ ವಿಧಾನಸಭಾ ಬ್ಲಾಕ್ ಕಾಂಗ್ರೆಸ್ ಸಮಿತಿ ಪ.ಪಂಗಡ ವಿಭಾಗದ ಅಧ್ಯಕ್ಷ ಸಿ.ಸೋಮಣ್ಣ ಹೆಮ್ಮಿಗೆ ಮನವಿ ಮಾಡಿದರು.

ತಾಲೂಕಿನ ಹೆಮ್ಮಿಗೆಯಲ್ಲಿ ನಾಯಕ ಸಮಾಜದ ಮುಖಂಡರು ಆಯೋಜಿಸಿದ್ದ ಸಭೆಯಲ್ಲಿ ಮಾತನಾಡಿದ ಅವರು, ಹೊದಿಗೆರೆ ರಮೇಶ್ ಅವರು ದಾವಣಗೆರೆ ಜಿಲ್ಲೆಯಲ್ಲಿ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದು, ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರೊಂದಿಗೆ ಗುರುತಿಸಿಕೊಂಡು ಅವರ ಮಾರ್ಗದರ್ಶನದಲ್ಲಿ ಕಾಂಗ್ರೆಸ್ ಪರವಾಗಿ ನಿಷ್ಠೆಯಿಂದ ಕೆಲಸ ಮಾಡುತ್ತಿದ್ದಾರೆ. ನಾಯಕ ಸಮಾಜದ ಮುಖಂಡರಾಗಿರುವ ಇವರು ಕ್ಷೇತ್ರದಲ್ಲಿ ಹಲವು ಜನಪರ ಸೇವೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ರಾಜನಹಳ್ಳಿಯ ಮಹರ್ಷಿ ವಾಲ್ಮೀಕಿ ಟ್ರಸ್ಟ್ ಸದಸ್ಯರಾಗಿರುವ ಇವರಿಗೆ ಜಿಪಂ ಸದಸ್ಯರಾಗಿ ಕೆಲಸ ಮಾಡಿದ ಅನುಭವವಿದ್ದು, ಮೈಸೂರು ಜಿಲ್ಲೆಯಲ್ಲಿ ಪ್ರವಾಸ ಮಾಡಿ ನಾಯಕ ಸಮಾಜ ಕಾಂಗ್ರೆಸ್ ಪರವಾಗಿ ಕೆಲಸ ಮಾಡುವಂತೆ ಕ್ರಮವಹಿಸಿದ್ದಾರೆ. ಗ್ರಾಮೀಣ ಸಮಸ್ಯೆಗಳ ಬಗ್ಗೆ ನಿರಂತರ ಹೋರಾಟ ನಡೆಸುತ್ತಿರುವ ರಮೇಶ್ ಅವರು ರೈತರು, ಕಾರ್ಮಿಕರು ಹಾಗೂ ಯುವಕರ ಪರವಾಗಿ ಕೆಲಸ ಮಾಡುತ್ತಿದ್ದಾರೆ. ಹೀಗಾಗಿ ಸಾರ್ವಜನಿಕರೊಂದಿಗೆ ಬೆರೆತು ಜನಪರ ಸೇವೆ ಸಲ್ಲಿಸಿರುವ ಅವರ ಅನುಭವ ವಿಧಾನ ಪರಿಷತ್‌ನಲ್ಲಿ ಜನರ ಸಮಸ್ಯೆಗಳಿಗೆ ಸ್ಪಂದಿಸಲು ಸಹಕಾರಿಯಾಗಲಿದೆ ಎಂದು ಅಭಿಪ್ರಾಯಪಟ್ಟರು.

ಸಾಮಾಜಿಕ ನ್ಯಾಯ, ಶಿಕ್ಷಣ, ರೈತರ ಅಭಿವೃದ್ಧಿ ಹಾಗೂ ಗ್ರಾಮೀಣ ಮೂಲ ಸೌಕರ್ಯಗಳ ಕುರಿತಾಗಿ ವಿಶೇಷ ಕಾಳಜಿ ಹೊಂದಿರುವ ಹೊದಿಗೆರೆ ರಮೇಶ್ ಅವರಿಗೆ ವಿಧಾನಪರಿಷತ್‌ನಲ್ಲಿ ಅವಕಾಶ ನೀಡಿದರೆ ಸಾಮಾನ್ಯ ಜನರ ಧ್ವನಿ ಸದನದಲ್ಲಿ ಇನ್ನಷ್ಟು ಬಲವಾಗಿ ಕೇಳಿಸಲಿದೆ. ಹೀಗಾಗಿ ರಾಜ್ಯ ಸರ್ಕಾರ ರಮೇಶ್ ಅವರ ಸೇವೆ ಪರಿಗಣಿಸಿ ಅವರನ್ನು ವಿಧಾನ ಪರಿಷತ್ ಸದಸ್ಯರಾಗಿ ನೇಮಕ ಮಾಡಬೇಕು ಎಂದು ಒತ್ತಾಯಿಸಿದ್ದಾರೆ.

ಈ ವೇಳೆ ಮಹದೇವ, ಶಾಂತರಾಜು ಬಂಗಾರಸ್ವಾಮಿ, ಸೋಮಣ್ಣ ವಸಂತ್ ನಾಯ್ಕ, ನಂಜುಂಡಯ್ಯ, ರಾಜಣ್ಣ, ಚಿಕ್ಕಹೊನ್ನಯ್ಯ ಪಿ.ನಂಜುಂಡಯ್ಯ, ಕರಿಯಪ್ಪ, ಈರಯ್ಯ, ರವಿಚಂದ್ರ ಇದ್ದರು.


ಹೊದಿಗೆರೆ ರಮೇಶ್ ಅವರನ್ನು ಎಂಎಲ್‌ಸಿ ಮಾಡುವಂತೆ ಸಿ.ಸೋಮಣ್ಣ ಒತ್ತಾಯಿಸಿದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಸಾಲಿಗ್ರಾಮ, ಮೇ 27– ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಗಳಿಸಿದ ಒಕ್ಕಲಿಗ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಜೂ.30 ಕೊನೆ ದಿನವಾಗಿದ್ದು, ಕೆ.ಆರ್.ನಗರ ಹಾಗೂ ಸಾಲಿಗ್ರಾಮ ತಾಲೂಕಿನ ಒಕ್ಕಲಿಗ ಸಮಾಜದ ವಿದ್ಯಾರ್ಥಿಗಳು ಅಂಕಪಟ್ಟಿ ಸೇರಿದಂತೆ ಅಗತ್ಯ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ: 9448885885, 9448246539, 7204573542 ಅನ್ನು ಸಂಪರ್ಕಿಸುವಂತೆ ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಶಿವರಾಂ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉನ್ನತ ಹುದ್ದೆ ಅಲಂಕರಿಸಿ ಸಮಾಜಕ್ಕೆ ಕೊಡುಗೆ ನೀಡಿ

ವಿದ್ಯಾರ್ಥಿಗಳಿಗೆ ಉದ್ಯಮಿ, ಕಾಂಗ್ರೆಸ್ ಮುಖಂಡ ಎಸ್.ರವಿ ಕರೆ

ಕೆ.ಆರ್.ನಗರ, ಮೇ 27– ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅಂಕ ಗಳಿಸಿದ ಮಾತ್ರಕ್ಕೆ ಬಿಗದೇ ಆಡಳಿತಾತ್ಮಕ ಹುದ್ದೆ ಪಡೆಯುವವರೆಗೂ ಪ್ರಯತ್ನಿಸಬೇಕು ಎಂದು ಉದ್ಯಮಿ ಹಾಗೂ ಕಾಂಗ್ರೆಸ್ ಮುಖಂಡ ಎಸ್.ರವಿ ತಿಳಿಸಿದರು.

ಪಟ್ಟಣದಲ್ಲಿ ಬುದ್ಧ, ಬಸವ, ಅಂಬೇಡ್ಕರ್ ಸಮನ್ವಯ ಸಮಿತಿಯಿಂದ ಸಾಲಿಗ್ರಾಮ ಮತ್ತು ಕೆ.ಆರ್.ನಗರ ತಾಲೂಕುಗಳ ಸರ್ಕಾರಿ ಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಮಕ್ಕಳಿಗೆ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿದ್ಯೆ ಹುಲಿ ಹಾಲು ಕುಡಿದಷ್ಟೇ ಕಠಿಣ ಎಂಬುದನ್ನು ಮಕ್ಕಳು ಅರಿಯಬೇಕು ಎಂದರು.

ವಿದ್ಯಾರ್ಥಿಗಳು ಶಿಕ್ಷಣ ಪಡೆಯುವ ಅವಧಿಯಲ್ಲಿ ಶ್ರಮವಹಿಸಿ ಐಎಎಸ್, ಐಪಿಎಸ್, ಕೆಎಎಸ್‌ನಂತಹ ಉನ್ನತ ಮಟ್ಟದ ಪರೀಕ್ಷೆಗಳನ್ನು ಎದುರಿಸಿ ನೌಕರಿ ಪಡೆಯಬೇಕು. ಆಗ ಸಮಾಜಕ್ಕೆ ಒಳ್ಳೆಯ ಹೆಸರು ಬರಲಿದೆ ಎಂದು ಮಕ್ಕಳಿಗೆ ಕಿವಿಮಾತು ಹೇಳಿದ ಅವರು ಹುದ್ದೆ ಪಡೆದ ನಂತರ ನೀವು ಸಮಾಜಕ್ಕೆ ತಮ್ಮದೇ ಆದ ಕೊಡುಗೆ ನೀಡಬೇಕೆಂದು ಸಲಹೆ ನೀಡಿದರು.

ಬುದ್ಧ, ಬಸವ, ಅಂಬೇಡ್ಕರ್ ಅವರ ಆಶಯದಂತೆ ಸಮ ಸಮಾಜ ನಿರ್ಮಾಣ ಮಾಡಲು ಶಿಕ್ಷಣದಿಂದ ಮಾತ್ರ ಸಾಧ್ಯ. ಇದನ್ನು ಎಲ್ಲರೂ ಅರಿಯಬೇಕು. ಉನ್ನತ ಶಿಕ್ಷಣ ಪಡೆಯುವಂತಹ ಮಕ್ಕಳಿಗೆ ವೈಯಕ್ತಿಕವಾಗಿ ಆರ್ಥಿಕ ಸಹಕಾರ ನೀಡುತ್ತೇನೆ ಎಂದು ಭರವಸೆ ನೀಡಿದರು.

ದಲಿತ ಮುಖಂಡ ಹನಸೋಗೆ ನಾಗರಾಜು ಮಾತನಾಡಿ, ಸಂವಿಧಾನ ನಾಶ ಬಿಜೆಪಿಯವರ ಅಜೆಂಡಾ ಆಗಿದೆ. ಇದರಿಂದ ಹಿಂದುಳಿದ ಸಮುದಾಯಗಳಿಗೆ ಅನ್ಯಾಯವಾಗಲಿದೆ. ಸಂವಿಧಾನ ವಿರೋಧಿಗಳ ವಿರುದ್ಧ ಹೋರಾಡುವ ಭಾವನೆಯನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು ಎಂದರು.

ಛಲವಾದಿ ಮಹಾ ಸಂಸ್ಥಾನ ಗುರುಪೀಠ ಚಿತ್ರದುರ್ಗದ ಶ್ರೀಬಸವನಾಗಿದೇವ ಸ್ವಾಮೀಜಿ ಆಶೀರ್ವಚನ ನೀಡಿದರು. ಮಾಜಿ ತಾಪಂ ಸದಸ್ಯ ಎಂ.ತಮ್ಮಣ್ಣ, ವಕೀಲ ಎ.ಆರ್.ಕಾಂತರಾಜು, ಎಸ್‌ಸಿ ಸರ್ಕಾರಿ ನಿವೃತ್ತ ನೌಕರರ ಸಂಘದ ಅಧ್ಯಕ್ಷ ಸಿದ್ದಯ್ಯ, ಅನ್ವೇಷಣಾ ಸಹಕಾರ ಸಂಘದ ಅಧ್ಯಕ್ಷ ಕಾಳಾಜಿ, ಸಂಘದ ಅಧ್ಯಕ್ಷ ಎಂ.ಜೆ.ರಾಜಶೇಖರ್ ಮಾತನಾಡಿದರು.

ಸಂಘದ ಪದಾಧಿಕಾರಿಗಳಾದ ಈ.ರಾಮಯ್ಯ, ಮಹಾಲಿಂಗಯ್ಯ, ಮಹದೇವ, ವೆಂಕಟೇಶ್, ಕೃಷ್ಣಯ್ಯ, ಅಮರನಾಥ್, ದೇವಯ್ಯ, ಟೌನ್ ಅಧ್ಯಕ್ಷ ವಿಜಯ್, ಅಶೋಕ, ಚಂದ್ರಪ್ಪ, ಸೀತರಾಮ, ಶ್ರೀನಿವಾಸ್, ಹೊನ್ನಪ್ಪ ಇನ್ನಿತರರಿದ್ದರು.


ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಪ್ರತಿಭಟನೆ

ಹುಣಸೂರು, ಮೇ 27– ರಸಗೊಬ್ಬರ, ಡೀಸೆಲ್ ಹಾಗೂ ಪೆಟ್ರೋಲ್ ಬೆಲೆ ಏರಿಕೆ ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ನಗರದಲ್ಲಿ ಬುಧವಾರ ಕರ್ನಾಟಕ ರಾಜ್ಯ ರೈತ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ತಾಲೂಕು ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಉಪವಿಭಾಗಾಧಿಕಾರಿಗಳ ಮೂಲಕ ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ರೈತ ಸಂಘದ ಜಿಲ್ಲಾಧ್ಯಕ್ಷ ಕುಮಾರ್ ಮಾತನಾಡಿ, ರಾಜ್ಯದಲ್ಲಿ ಮುಂಗಾರು/ಹಿಂಗಾರು ಹಂಗಾಮಿಗೆ ಸಿದ್ಧತೆ ನಡೆಸುತ್ತಿರುವ ರೈತರಿಗೆ ರಸಗೊಬ್ಬರ ಮತ್ತು ಡೀಸೆಲ್ ಬೆಲೆ ಏರಿಕೆ ತೀವ್ರ ಆಘಾತ ಉಂಟು ಮಾಡಿದೆ. ಡೀಸೆಲ್ ಬೆಲೆ ಏರಿಕೆಯಾಗಿರುವುದರಿಂದ ಟ್ರ್ಯಾಕ್ಟರ್ ಉಳುಮೆ, ನೀರಾವರಿ ಪಂಪ್‌ಸೆಟ್ ಬಳಕೆ ಮತ್ತು ಬೆಳೆ ಸಾಕಾಣಿಕೆ ವೆಚ್ಚ ದುಪ್ಪಟ್ಟಾಗಿದೆ. ಜೊತೆಗೆ ರಸಗೊಬ್ಬರಗಳ ಬೆಲೆಯೂ ಗಗನಕ್ಕೇರಿದ್ದು, ಸಣ್ಣ ಮತ್ತು ಮಧ್ಯಮ ವರ್ಗದ ರೈತರು ಬಿತ್ತನೆ ಮಾಡುವುದೇ ದುಸ್ತರವಾಗಿದೆ. ರೈತರು ಬೆಳೆದ ಬೆಳೆಗಳಿಗೆ ಸೂಕ್ತ ಮಾರುಕಟ್ಟೆ ಸಿಗದೆ ನಷ್ಟ ಅನುಭವಿಸುತ್ತಿರುವ ಸಂದರ್ಭ ಕೃಷಿ ವೆಚ್ಚದ ಈ ಹೊರೆ ರೈತರ ಬೆನ್ನು ಮೂಳೆ ಮುರಿದಂತಾಗಿದೆ ಎಂದರು.

ರಸಗೊಬ್ಬರ ಬೆಲೆ ಕೂಡಲೇ ಇಳಿಸಬೇಕು. ರೈತರಿಗೆ ನೇರ ನಗದು ವರ್ಗಾವಣೆ (DBT) ಮೂಲಕ ಹೆಚ್ಚುವರಿ ಸಹಾಯಧನ ಒದಗಿಸಬೇಕು. ಕೃಷಿ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ಡೀಸೆಲ್ ಅನ್ನು ರಿಯಾಯಿತಿ ದರದಲ್ಲಿ ವಿತರಿಸಬೇಕು. ರೈತರು ಬೆಳೆದ ಬೆಳೆಗಳಿಗೆ ಸ್ವಾಮಿನಾಥನ್ ಆಯೋಗದ ಶಿಫಾರಸ್ಸಿನಂತೆ ವೈಜ್ಞಾನಿಕ ಬೆಂಬಲ ಬೆಲೆ ನಿಗದಿಪಡಿಸಬೇಕು. ರಸಗೊಬ್ಬರ ಇಳಿಸಿ ರೈತರಿಗೆ ಹೆಚ್ಚುವರಿ ಸಬ್ಸಿಡಿ ನೀಡಬೇಕು. ಅಲ್ಲದೇ ರೈತರಿಗೆ ಕೈಗೆಟುಕುವ ದರದಲ್ಲಿ ಗೊಬ್ಬರ ಸಿಗುವಂತೆ ಮಾಡಬೇಕು. ರಸಗೊಬ್ಬರವನ್ನು ಎಫ್‌ಐಡಿ ಮೂಲಕ ವಿತರಿಸಿ ಎಂಆರ್‌ಪಿ ದರವನ್ನು ಕಡ್ಡಾಯವಾಗಿ ಪ್ರತಿ ಅಂಗಡಿಗಳಲ್ಲಿ ಅಳವಡಿಸಬೇಕು. ರೈತರು ತಮಗೆ ಬೇಕಾದ ಗೊಬ್ಬರ ಕೇಳಿದಾಗ ಡೀಲರ್‌ಗಳು ಕಡ್ಡಾಯವಾಗಿ ಬೇರೆ ಗೊಬ್ಬರ ಅಥವಾ ಕೀಟನಾಶಕಗಳನ್ನು ತೆಗೆದುಕೊಳ್ಳುವಂತೆ ಒತ್ತಾಯಿಸುವುದನ್ನು ತಡೆಯಬೇಕು. ಗೊಬ್ಬರದ ಕೃತಕ ಅಭಾವ ಸೃಷ್ಟಿಸಿ ಕಾಳಸಂತೆಯಲ್ಲಿ ಮಾರಾಟ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದು. ಬೆಳೆಗಳಿಗೆ ವೈಜ್ಞಾನಿಕ ಬೆಂಬಲ ಬೆಲೆ ಘೋಷಣೆ ಮಾಡಬೇಕು ಎಂದರು.

ಕಳೆದ 3 ತಿಂಗಳಿಂದ ಸರ್ವೆ ಪರವಾನಗಿ ಭೂಮಾಪಕರು ಕೆಲಸಕ್ಕೆ ಗೈರಾಗಿದ್ದು, ಸರ್ವೆ ಇಲಾಖೆಯ ಕೆಲಸಗಳು ಸ್ಥಗಿತಗೊಂಡು ಸಾರ್ವಜನಿಕರಿಗೆ ತೊಂದರೆ ಆಗುತ್ತಿದೆ. ಸರ್ಕಾರವು ಕೂಡಲೇ ಪರವಾನಿಗೆ ಭೂಮಾಪಕರ ಬೇಡಿಕೆ ಈಡೇರಿಸಿ ಕರ್ತವ್ಯ ನಿರ್ವಹಿಸುವಂತೆ ಕ್ರಮ ಕೈಗೊಳ್ಳಬೇಕು. ನೆರೆಯ ಕೇರಳಕ್ಕೆ ಹುಣಸೂರು, ಪಿರಿಯಾಪಟ್ಟಣ, ಹೆಚ್.ಡಿ.ಕೋಟೆ ತಾಲೂಕುಗಳಿಂದ ಅತೀ ಹೆಚ್ಚು ಯೂರಿಯಾ ರವಾನೆಯಾಗುತ್ತಿದ್ದು, ಕೃಷಿಗೆ ಬಳಸಬೇಕಾದ ಯೂರಿಯಾವನ್ನು ಪ್ಲೈವುಡ್ ಕಾರ್ಖಾನೆಗಳಿಗೆ ಬಳಕೆ ಮಾಡುತ್ತಿರುವುದರಿಂದ ಗೊಬ್ಬರ ಅಭಾವಕ್ಕೆ ಕಾರಣವಾಗಿದೆ. ಅಲ್ಲದೇ ಯೂರಿಯಾ ಸಾಗಾಟ ಪ್ರಕರಣ ದಾಖಲಾದರೂ, ಯಾವುದೇ ಕ್ರಮ ಕೈಗೊಂಡಿಲ್ಲ. ಮುಂದಿನ ದಿನಗಳಲ್ಲಿ ಈ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂದರು.

ಹುಣಸೂರು, ಕೋಟೆ ತಾಲೂಕಿನ ಭೂ ಹಿಡುವಳಿದಾರರು 60–70 ವರ್ಷಗಳಿಂದ ಅನುಭವದಲ್ಲಿದ್ದು, ಸರ್ಕಾರದಿಂದ ಸಾಗುವಳಿ ಮಂಜೂರಾತಿ ಪಡೆದಿದ್ದಾರೆ. ಪ್ರಸ್ತುತ ದುರಸ್ತಿ ವೇಳೆ ಅರಣ್ಯ ಇಲಾಖೆಯವರು ಸದರಿ ಜಮೀನು ಅರಣ್ಯ ಇಲಾಖೆಗೆ ಸೇರಿದೆ ಎಂದು ಅಡ್ಡಿಪಡಿಸುತ್ತಿರುವುದರಿಂದ ದುರಸ್ತಿ ಕಾರ್ಯ ಸ್ಥಗಿತಗೊಂಡಿದೆ. ಆದ್ದರಿಂದ ಕಂದಾಯ ಇಲಾಖೆ ಹಾಗೂ ಅರಣ್ಯ ಇಲಾಖೆ ಜಂಟಿ ಸರ್ವೆ ನಡೆಸಿ, ವರದಿ ತಯಾರಿಸಿ ಸಾಗುವಳಿದಾರರಿಗೆ ಅನುಭವದಂತೆ ದುರಸ್ತಿ ಕಾರ್ಯವನ್ನು ಕೂಡಲೇ ಪೂರ್ಣಗೊಳಿಸಲು ಮನವಿ ಮಾಡುತ್ತೇನೆ ಎಂದರು.

ಪ್ರತಿಭಟನೆಯಲ್ಲಿ ತಾಲೂಕು ಅಧ್ಯಕ್ಷ ಚಿಕ್ಕಣ್ಣ, ಪ್ರಧಾನ ಕಾರ್ಯದರ್ಶಿ ರಾಮೇಗೌಡ, ತಂಬಾಕು ಬೆಳೆಗಾರರ ಕ್ಷೇಮಾಭಿವೃದ್ಧಿ ಸಂಘದ ಗೌರವಾಧ್ಯಕ್ಷ ಚಂದ್ರೇಗೌಡ, ಅಧ್ಯಕ್ಷ ಶಿವಣ್ಣ, ಜಿಲ್ಲಾ ಖಜಾಂಚಿ ಈಶ್ವರ, ತಾಲೂಕು ಸಂಚಾಲಕ ಬಸವರಾಜೇಗೌಡ, ಜಿಲ್ಲಾ ಉಪಾಧ್ಯಕ್ಷ ಆಲಿಜಾನ್, ಗೌರವಾಧ್ಯಕ್ಷ ವಿಷಕಂಠಪ್ಪ ಇತರರಿದ್ದರು.


ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ರೈತ ಸಂಘದಿಂದ ಮನವಿ ಸಲ್ಲಿಸಲಾಯಿತು.

ವಿಜೃಂಭಣೆಯ ಶ್ರೀಲಕ್ಷ್ಮಿನರಸಿಂಹಸ್ವಾಮಿ ರಥೋತ್ಸವ


ಲಕ್ಷ್ಮಿನರಸಿಂಹಸ್ವಾಮಿ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಸರಗೂರು, ಮೇ 27– ಪಟ್ಟಣದಲ್ಲಿ ಶ್ರೀಲಕ್ಷ್ಮಿನರಸಿಂಹಸ್ವಾಮಿ ರಥೋತ್ಸವ ನೆರೆದಿದ್ದ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ರಥೋತ್ಸವ ಅಂಗವಾಗಿ ಬುಧವಾರ ಪಟ್ಟಣದ 7ನೇ ವಾರ್ಡ್‌ನಲ್ಲಿರುವ ಶ್ರೀಲಕ್ಷ್ಮಿನರಸಿಂಹಸ್ವಾಮಿ ದೇವಾಲಯವನ್ನು ತಳಿರು ತೋರಣ, ಬಣ್ಣ ಬಣ್ಣದ ರಂಗೋಲಿ ಸೇರಿದಂತೆ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ಇಂದು ಮುಂಜಾನೆ ದೇವಾಲಯದಲ್ಲಿ ವಿಶೇಷ ಪೂಜಾ ಕೈಂಕರ್ಯಗಳು ನಡೆಯಿತು. ಬಳಿಕ ದೇವರ ಉತ್ಸವಮೂರ್ತಿಯನ್ನು ನದಿ ಬಳಿಗೆ ಹೊತ್ತೊಯ್ದು ಗಂಗೆ ಪೂಜೆ ಸಲ್ಲಿಸಿ, ಹೋಮ ಹವನ ನಡೆಸಿ ವಿಶೇಷ ಪೂಜೆ ಸಲ್ಲಿಸಲಾಯಿತು. ನಂತರ ಮಂಗಳವಾದ್ಯದೊಂದಿಗೆ ಮೆರವಣಿಗೆ ಮೂಲಕ ಉತ್ಸವ ಮೂರ್ತಿಯನ್ನು ತಂದು ವಿವಿಧ ಹೂಗಳಿಂದ ಅಲಂಕಾರಗೊಂಡಿದ್ದ ರಥದಲ್ಲಿ ಶ್ರೀಲಕ್ಷ್ಮಿನರಸಿಂಹಸ್ವಾಮಿ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಈ ವೇಳೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿದ ರಥ ಸ್ವಸ್ಥಾನ ಸೇರಿತು. ಭಕ್ತರು ಶ್ರದ್ಧಾಭಕ್ತಿಯಿಂದ ಲಕ್ಷ್ಮಿನರಸಿಂಹಸ್ವಾಮಿಗೆ ಜೈಕಾರ ಕೂಗುವ ಮೂಲಕ ರಥ ಎಳೆದು ಪುನೀತರಾದರು. ಈ ವೇಳೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ನೆರೆದಿದ್ದ ಭಕ್ತರು ಪೂಜೆ ಸಲ್ಲಿಸಿದರು. ರಥೋತ್ಸವ ಅಂಗವಾಗಿ ಭಕ್ತರಿಗೆ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು.

ಈ ವೇಳೆ ದೇವಸ್ಥಾನದ ಪ್ರಧಾನ ಅರ್ಚಕರು, ಆಗಮಿಕರು, ಪಪಂ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಆರ್ಯ ಈಡಿಗ ಸಮಾಜ, ನಾಯಕ ಸಮಾಜ ಸೇರಿದಂತೆ ಎಲ್ಲಾ ಸಮಾಜದ ಬಂಧುಗಳು ಹಾಜರಿದ್ದರು.

ಹೋಮ್ ನರ್ಸ್ ಬಂಧನ; 170 ಗ್ರಾಂ ಚಿನ್ನಾಭರಣ ವಶಕ್ಕೆ



ಬಂಧಿತ ಹೋಮ್ ನರ್ಸ್ ಮಹೇಶ್ವರಿಯಿಂದ ವಶಪಡಿಸಿಕೊಂಡ ಆಭರಣಗಳೊಂದಿಗೆ ಪೊಲೀಸರ ತಂಡ.

ಮೈಸೂರು, ಮೇ 27(ಎಂಟಿವೈ)– ವೃದ್ಧೆಯೊಬ್ಬರ ಆರೈಕೆಗಾಗಿ ಏಜೆನ್ಸಿಯೊಂದರ ಮೂಲಕ ನೇಮಕಗೊಂಡಿದ್ದ ಹೋಮ್ ನರ್ಸ್‌ವೊಬ್ಬರು 22.10 ಲಕ್ಷ ರೂ. ಮೌಲ್ಯದ 170 ಗ್ರಾಂ ಚಿನ್ನಾಭರಣ ಕಳವು ಮಾಡಿ ಪೊಲೀಸರ ಅತಿಥಿಯಾಗಿದ್ದಾರೆ.

ಮೈಸೂರಿನ ವಿಜಯನಗರದ ಒಂದನೇ ಹಂತದ ನಿವಾಸಿ ಮುತ್ತವ್ವ ಅಪ್ಪಣ್ಣ(82) ಎಂಬುವವರಿಗೆ ನರ್ಸಿಂಗ್ ಸೇವೆ ನೀಡಲು ಏಜೆನ್ಸಿಯೊಂದರಿಂದ ನಿಯೋಜಿಸಲ್ಪಟ್ಟಿದ್ದ ಚಾಮರಾಜನಗರ ಮೂಲದ ಮಹೇಶ್ವರಿ(27), ಈಗ ಉಂಡ ಮನೆಗೆ ಕನ್ನ ಹಾಕಿ ಸಿಕ್ಕಿ ಬಿದ್ದಿದ್ದಾರೆ. ಹೋಮ್ ನರ್ಸ್ ಮಹೇಶ್ವರಿ, ವೃದ್ಧೆಯರು ಹಾಗೂ ಹಾಸಿಗೆ ಹಿಡಿದ ರೋಗಿಗಳ ಆರೈಕೆ ಮಾಡಲು ಏಜೆನ್ಸಿಯೊಂದರ ಮೂಲಕ ನಿಯೋಜಿಸಲ್ಪಡುತ್ತಿದ್ದರು. ಅದೇ ರೀತಿ ವಿಜಯನಗರದ ಮುತ್ತವ್ವ ಅಪ್ಪಣ್ಣ ಅವರಿಗೂ ನರ್ಸಿಂಗ್ ಸೇವೆಗೆ ನಿಯೋಜನೆಗೊಂಡಿದ್ದಾಳೆ. ಕೆಲಸಕ್ಕೆ ಸೇರಿದ ಒಂದು ತಿಂಗಳಷ್ಟೇ ಮಹೇಶ್ವರಿ ಕೈಚಳಕ ತೋರಿಸಿ, ಮನೆಯವರ ಕಣ್ತಪ್ಪಿಸಿ ಹಂತ ಹಂತವಾಗಿ 163 ಗ್ರಾಂ ಚಿನ್ನಾಭರಣ ಕಳವು ಮಾಡಿದ್ದಾಳೆ.

ಮನೆಯಲ್ಲಿದ್ದ ಚಿನ್ನಾಭರಣ ನಾಪತ್ತೆಯಿಂದ ಅನುಮಾನಗೊಂಡ ಮುತ್ತವ್ವ ಅಪ್ಪಣ್ಣ, ಮೈಸೂರಿನ ವಿಜಯನಗರದ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಮಹೇಶ್ವರಿ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದಾರೆ.

ಪ್ರಕರಣ ದಾಖಲಿಸಿಕೊಂಡ ವಿಜಯನಗರ ಪೊಲೀಸರು ಹೋಮ್ ನರ್ಸಿಂಗ್ ಏಜೆನ್ಸಿಯನ್ನು ಸಂಪರ್ಕಿಸಿ, ಮಹೇಶ್ವರಿ ಅವರ ವಿಳಾಸ ಪಡೆದು ಚಾಮರಾಜನಗರಕ್ಕೆ ಹೋಗಿ ಆಕೆಯನ್ನು ಕರೆದುಕೊಂಡು ಬಂದು ವಿಚಾರಣೆಗೊಳಪಡಿಸಿದಾಗ ಚಿನ್ನಾಭರಣ ಕಳವು ಮಾಡಿರುವುದಾಗಿ ಆಕೆ ಒಪ್ಪಿಕೊಂಡಿದ್ದಾಳೆ. ಅಲ್ಲದೆ, ಹೆಚ್ಚಿನ ವಿಚಾರಣೆಗೊಳಪಡಿಸಿದಾಗ ಮಂಡ್ಯ ಜಿಲ್ಲೆಯ ಪಾಂಡವಪುರದಲ್ಲೂ ಮನೆಯೊಂದರಲ್ಲಿ 7 ಗ್ರಾಂ ತೂಕದ ಚಿನ್ನಾಭರಣ ಕಳವು ಮಾಡಿರುವುದಾಗಿ ಒಪ್ಪಿಕೊಂಡಿದ್ದಾಳೆ. ಪೊಲೀಸರು ಆಕೆಯನ್ನು ಬಂಧಿಸಿ, ಒಟ್ಟು 22.10 ಲಕ್ಷ ರೂ. ಮೌಲ್ಯದ 170 ಗ್ರಾಂ ಚಿನ್ನಾಭರಣ ವಶಪಡಿಸಿಕೊಂಡಿದ್ದಾರೆ.

ಮೈಸೂರು ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಡಿಸಿಪಿ ಕೆ.ಎಸ್.ಸುಂದರರಾಜ್, ಎಸಿಪಿ ರವಿಪ್ರಸಾದ್ ಮಾರ್ಗದರ್ಶನದಲ್ಲಿ ವಿಜಯನಗರ ಇನ್ಸ್‌ಪೆಕ್ಟರ್ ಎಂ.ಆರ್.ಲವ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಸಬ್‌ಇನ್ಸ್‌ಪೆಕ್ಟರ್‌ಗಳಾದ ಆನಂದ್, ಜೈಕೀರ್ತಿ, ಕೃಷ್ಣ, ವನಜಾಕ್ಷಿ, ಮುಖ್ಯಪೇದೆಗಳಾದ ಶಂಕರ್, ಪ್ರದೀಪ್ ಕುಮಾರ್, ಪ್ರಭಾಕರ್ ಹಾಗೂ ಪೇದೆಗಳಾದ ವೆಂಕಟೇಶ್, ನಿಂಗರಾಜೇಗೌಡ, ಮಂಜುನಾಥ್ ಮಹಿಳಾ ಪೇದೆ ರಂಜಿತಾ ಪಾಲ್ಗೊಂಡಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ದೃಶ್ಯಂ–3 (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಪೆಟ್ರಿಯೋಟ್ (ಮ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕರುಪ್ಪು (ತ)	4 ಪ್ರದರ್ಶನಗಳು
ಗಾಯಿತ್ರಿ	
ಲೋ ನವೀನ (ಕ)	4 ಪ್ರದರ್ಶನಗಳು
ರಾಜಕಮಲ್	
ಕರುಪ್ಪು (ತ)	4 ಪ್ರದರ್ಶನಗಳು
ಸಂಗಂ	
ದೃಶ್ಯಂ–3 (ಕ)	4 ಪ್ರದರ್ಶನಗಳು
ಲಿಡೋ	
ಕೋಟಿಗೊಬ್ಬ(ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಕುಚುಕು (ಕ)	4 ಪ್ರದರ್ಶನಗಳು

ರಸಗೊಬ್ಬರ, ಇಂಧನ ದರ ಏರಿಕೆ ಖಂಡಿಸಿ ರೈತರ ಪ್ರತಿಭಟನೆ



ರಸಗೊಬ್ಬರ, ಡೀಸೆಲ್, ಪೆಟ್ರೋಲ್ ದರ ಏರಿಕೆ ಖಂಡಿಸಿ ಹಾಗೂ ನಾನಾ ಬೇಡಿಕೆಗಳ ಈಡೇರಿಸುವಂತೆ ಒತ್ತಾಯಿಸಿ ರಾಜ್ಯ ರೈತ ಸಂಘದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು, ಮೇ 27(ಎಂಟಿವೈ)– ರಸಗೊಬ್ಬರ, ಡೀಸೆಲ್, ಪೆಟ್ರೋಲ್ ದರ ಏರಿಕೆ ಖಂಡಿಸಿ ಹಾಗೂ ನಾನಾ ಬೇಡಿಕೆಗಳ ಈಡೇರಿಸುವಂತೆ ಒತ್ತಾಯಿಸಿ ರಾಜ್ಯ ರೈತ ಸಂಘದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ನಜರ್‌ಬಾದ್‌ನಲ್ಲಿರುವ ಮಿನಿ ವಿಧಾನಸೌಧದ ಮುಂಭಾಗ ಪ್ರತಿಭಟನೆ ನಡೆಸಿದ ರೈತ ಸಂಘದ ಕಾರ್ಯಕರ್ತರು, ಕೇಂದ್ರ ಮತ್ತು ರಾಜ್ಯ ಸರ್ಕಾರ ರೈತರು ಮತ್ತು ಜನಸಾಮಾನ್ಯರ ಜೀವನದಲ್ಲಿ ಚೆಲ್ಲಾಟವಾಡುತ್ತಿದ್ದು, ಬೆಲೆ ಏರಿಕೆಯಿಂದ ರೈತರು ಉಪಯೋಗಿಸುವ ಸಾಮಾಗ್ರಿಗಳ ಮೇಲೆ ಪರಿಣಾಮ ಬೀರುತ್ತಿದೆ. ಇದರಿಂದ ರೈತರ ಕಸುಬನ್ನೇ ಬಿಡಿಸುವ ಹುನ್ನಾರ ನಡೆಯುತ್ತಿದೆ ಎಂದು ಕಿಡಿಕಾರಿದರು.

ಪ್ರಧಾನಿ ಮೋದಿ, ಸ್ವಾಮಿನಾಥನ್ ವರದಿ ಜಾರಿ ಮಾಡುತ್ತೇವೆ ಎಂದು ಪ್ರಣಾಳಿಕೆಯಲ್ಲಿ ಘೋಷಣೆ ಮಾಡಿದ್ದರು. ಆದರೆ, ಚುನಾವಣೆ ಗೆದ್ದ ಮೇಲೆ ಈ ವರದಿ ಜಾರಿಯ ಬಗ್ಗೆ ಮಾತನಾಡಲಿಲ್ಲ. ರೈತರ ಆದಾಯ ದ್ವಿಗುಣ ಮಾಡುವುದಾಗಿ ಹೇಳಿ, ಆ ಮಾತನ್ನು ಈಡೇರಿಸಲಿಲ್ಲ. ಕೂಡಲೇ ಏರಿಸಿರುವ ಬೆಲೆ ಇಳಿಸಬೇಕು. ಇಲ್ಲವಾದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಮಾಡುತ್ತೇವೆ ಎಂದು ಎಚ್ಚರಿಸಿದರು.

ಬೇಡಿಕೆಗಳು: ಏರಿಸಿರುವ ಗೊಬ್ಬರದ ಬೆಲೆ ಇಳಿಕೆ ಮಾಡಬೇಕು. ರಸಗೊಬ್ಬರಗಳ ಮೇಲಿನ ಸಬ್ಸಿಡಿ ಹೆಚ್ಚಿಸಿ ರಿಯಾಯಿತಿ ದರದಲ್ಲಿ ರೈತರಿಗೆ ಗೊಬ್ಬರ ಒದಗಿಸಬೇಕು. ಗೊಬ್ಬರದ ಕೃತಕ ಅಭಾವ ಸೃಷ್ಟಿಸಿ, ಕಾಳಸಂತೆಯಲ್ಲಿ ಮಾರಾಟ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಪೆಟ್ರೋಲ್ ಡೀಸೆಲ್ ಬೆಲೆ ಇಳಿಕೆ ಮಾಡಿ, ರಿಯಾಯಿತಿ ದರದಲ್ಲಿ ಕೃಷಿ ಚಟುವಟಿಕೆಗೆ ಡೀಸೆಲ್ ಪೂರೈಸಬೇಕು. ಕೇಂದ್ರ ಸರಕಾರ ಎಂ.ಎಸ್.ಸ್ವಾಮಿನಾಥನ್ ವರದಿ ಅನ್ವಯ ಕನಿಷ್ಠ ಬೆಂಬಲ ಬೆಲೆ ಖಾತ್ರಿಗೊಳಿಸಬೇಕು. ಬರದ ಮುನ್ಸೂಚನೆ ಇದ್ದು, ಈ ಸಂಕಷ್ಟ ಎದುರಿಸಲು ಸರಕಾರ ಸಜ್ಜಾಗಬೇಕು. ಕಾಂಗ್ರೆಸ್ ಪಕ್ಷ ವಿಧಾನಸಭಾ ಚುನಾವಣೆ ಪೂರ್ವ ಪ್ರಣಾಳಿಕೆಯಲ್ಲಿ ಭರವಸೆ ನೀಡಿದ್ದಂತೆ, ಭೂ ಸುಧಾರಣಾ ತಿದ್ದುಪಡಿ ಕಾಯ್ದೆ, ಜಾನುವಾರು ಹತ್ಯೆ ಮತ್ತು ಸಂರಕ್ಷಣಾ ಕಾಯ್ದೆ ವಾಪಸ್ ಪಡೆಯಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ಮರಂಕಯ್ಯ, ತಾಲೂಕು ಅಧ್ಯಕ್ಷ ಆನಂದೂರು ಪ್ರಭಾಕರ್, ಪ್ರಧಾನ ಕಾರ್ಯದರ್ಶಿ ಮಂಡಕಳ್ಳಿ ಮಹೇಶ್, ಉಪಾಧ್ಯಕ್ಷ ಮುದ್ದುರಾಜು, ಮಹೇಶ್, ಕಾರ್ಯಾಧ್ಯಕ್ಷ ಬಸಪ್ಪ ನಾಯಕ, ಕಾರ್ಯದರ್ಶಿ ನಾಗನಹಳ್ಳಿ ಚಂದ್ರಶೇಖರ್, ಯುವ ಘಟಕದ ಅಧ್ಯಕ್ಷ ಮಹೇಶ್, ರಾಘವೇಂದ್ರ, ಮಹಾದೇವಮ್ಮ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಸಿ.ನಳಿನಗೆ ಪಿಹೆಚ್.ಡಿ



ಮೈಸೂರು: ಡಾ. ಪಿ.ಎಸ್.ಕೆ. ರೆಡ್ಡಿ ಅವರ ಮಾರ್ಗದರ್ಶನದಲ್ಲಿ ನಳಿನ.ಸಿ ಅವರು ಗಣಿತಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ಕರ್ನಾಟಕ ಗೃಹ ಮಂಡಳಿ ಸಿಎ ನಿವೇಶನಗಳ ಹಂಚಿಕೆಗೆ ಅರ್ಜಿ ಆಹ್ವಾನ

ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು, ಹಾಸನದಲ್ಲಿ ಸಿಎ ನಿವೇಶನ ಲಭ್ಯ



ಮೈಸೂರು, ಮೇ27(ಬಿಎಲ್‌ಯು)– ಮೈಸೂರು ಜಿಲ್ಲೆ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ವಿವಿಧ ವಿನ್ಯಾಸದ ನಾಗರಿಕ ಸೌಲಭ್ಯ (ಸಿಎ)ಗಳ ನಿವೇಶನ ಹಂಚಿಕೆಗಾಗಿ ಕರ್ನಾಟಕ ಗೃಹ ಮಂಡಳಿ ಅಧಿಸೂಚನೆ ಹೊರಡಿಸಿದೆ.

ಈ ಸಂಬಂಧ ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ದಿನಪತ್ರಿಕೆಗಳಲ್ಲಿ ಜಾಹಿರಾತು ನೀಡಿರುವ ಕರ್ನಾಟಕ ಗೃಹ ಮಂಡಳಿ, ಒಟ್ಟು 373 ಸಿಎ ನಿವೇಶನಗಳನ್ನು ಹಂಚಿಕೆ ಮಾಡುವುದಾಗಿ ತಿಳಿಸಿದೆ.

ಮೈಸೂರು ಜಿಲ್ಲೆಯಲ್ಲಿ ಒಟ್ಟು 15 ಸಿಎ ನಿವೇಶನಗಳನ್ನು ಗುರುತಿಸಲಾಗಿದೆ. ನಂಜನಗೂಡಿನಲ್ಲಿ 2, ತಿ.ನರಸೀಪುರದಲ್ಲಿ 4, ಪಿರಿಯಾಪಟ್ಟಣ ತಾಲೂಕು ರಾಜಾಪುರದಲ್ಲಿ 2, ನಂಜನಗೂಡು ತಾಲೂಕು ಹೂಟಗಳ್ಳಿಯಲ್ಲಿ 2, ಮೈಸೂರು ತಾಲೂಕು ಚಾಮಲಾಪುರದಲ್ಲಿ 5 ಸಿಎ ನಿವೇಶನ ಹಂಚಿಕೆ ಮಾಡುವುದಾಗಿ ಅಧಿಸೂಚನೆಯಲ್ಲಿ ಮಾಹಿತಿ ನೀಡಿದೆ.

ಮಂಡ್ಯ ಜಿಲ್ಲೆಯಲ್ಲಿ 10 ಸಿಎ ನಿವೇಶನಗಳನ್ನು ಹಂಚಿಕೆ ಮಾಡಲಾಗುತ್ತಿದೆ. ಮಂಡ್ಯದ ಚಿಕ್ಕ ಮಂಡ್ಯದಲ್ಲಿ 7, ಚಾಮನಹಳ್ಳಿ, ಚಿಕ್ಕೋನಹಳ್ಳಿ 1, ಕೆ.ಆರ್.ಪೇಟೆಯಲ್ಲಿ 1, ಶ್ರೀರಂಗಪಟ್ಟಣದಲ್ಲಿ 1 ನಿವೇಶನ ನೀಡುವುದಾಗಿ ಹೇಳಿದೆ.

ಕೊಡಗು ಜಿಲ್ಲೆಯ ಮುಳ್ಳುಸೋಗೆ ಹಾಗೂ ಕುಶಾಲನಗರದಲ್ಲಿ 4 ನಿವೇಶನಗಳನ್ನು ಹಂಚಿಕೆ ಮಾಡಲಾಗುತ್ತಿದೆ. ಚಾಮರಾಜನಗರ ಜಿಲ್ಲೆಯ ಪಂಚನಹಳ್ಳಿಯಲ್ಲಿ 8, ಗುಂಡ್ಲುಪೇಟೆಯಲ್ಲಿ 1 ಮತ್ತು ಚಾಮರಾಜನಗರ ಪಟ್ಟಣದ ಹೊಸ ಕ್ರೀಡಾಂಗಣದಲ್ಲಿ 1 ನಿವೇಶನ ಹಂಚಿಕೆ ಮಾಡಲು ಕರ್ನಾಟಕ ಗೃಹ ಮಂಡಳಿ ಇಚ್ಚಿಸಿದೆ.

ಹಾಸನ ಜಿಲ್ಲೆಯಲ್ಲಿ ಒಟ್ಟು 18 ಸಿಎ ನಿವೇಶನ ನೀಡಲಾಗುತ್ತಿದೆ. ಚನ್ನಪಟ್ಟಣದಲ್ಲಿ 6, ಸಾಲಗಾಮೆಯಲ್ಲಿ1, ಚಿಟ್ನಾಣಹಳ್ಳಿ ಹಾಗೂ ಹೊಳೆನರಸೀಪುರದಲ್ಲಿ ತಲಾ 1, ಗಂಡಸಿಯಲ್ಲಿ2, ಅರಸೀಕೆರೆಯಲ್ಲಿ2, ಅರಕಲಗೂಡಿನಲ್ಲಿ 4, ಸಕಲೇಶಪುರದಲ್ಲಿ1 ಹಾಗೂ ಡಿ.ಕಲ್ಲೇನಹಳ್ಳಿಯಲ್ಲಿ 1 ಸಿಎ ನಿವೇಶನ ನೀಡಲಾಗುತ್ತಿದೆ.

ಆನ್ ಲೈನ್‌ನಲ್ಲಿ ಹಣ ಪಾವತಿ ಮಾಡಿ ನೋಂದಣಿ ಮಾಡಿಕೊಳ್ಳಲು ಜೂನ್ 1 ರಿಂದ 30 ರವರೆಗೆ ಅವಕಾಶ ಇರುತ್ತದೆ. ಸಿಎ ನಿವೇಶನ ಪಡೆಯಲು ಆಸಕ್ತಿ ಹೊಂದಿರುವವರು ವಿವರಗಳಿಗಾಗಿ www.khb.karnataka.gov.in ಗೆ ಭೇಟಿ ನೀಡಬಹುದು. ಇಲ್ಲವೇ ದೂರವಾಣಿ ಸಂಖ್ಯೆ 080–22273511 ಕ್ಕೆ ಸಂಪರ್ಕಿಸಬಹುದು.

ಚಿನ್ನದ ವಿನಿಮಯ ಅಭಿಯಾನ 'ಎಕ್ಸ್‌ಚೇಂಜ್ ಫಾರ್ ದಿ ನೇಷನ್' ಪ್ರಾರಂಭಿಸಿದ ಜೋಸ್ ಅಲುಕ್ಕಾಸ್

Joyalukkas
World's favourite jeweller

ಮೈಸೂರು: ಭಾರತದಲ್ಲಿ ಗುಣಮಟ್ಟ, ನಾವೀನ್ಯತೆ ಮತ್ತು ಸಮಕಾಲೀನ ಆಭರಣಗಳಲ್ಲಿ ವಿಶ್ವಾಸಾರ್ಹ ಹೆಸರಾಗಿರುವ ಜೋಸ್ ಅಲುಕ್ಕಾಸ್, ಗ್ರಾಹಕರು ಬಳಸದ ಚಿನ್ನವನ್ನು ಮರುಚಕ್ರೀಕರಣ ಮಾಡಲು ಮತ್ತು ಆಮದಿನ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲು ಎಕ್ಸ್‌ಚೇಂಜ್ ಫಾರ್ ದಿ ನೇಷನ್ ಅಭಿಯಾನವನ್ನು ಪ್ರಾರಂಭಿಸಿದೆ.

ವಿದೇಶಿ ವಿನಿಮಯ ಮೀಸಲು ನಿಧಿಯನ್ನು ಸಂರಕ್ಷಿಸುವ ವಿಶಾಲ ಪ್ರಯತ್ನದ ಭಾಗವಾಗಿ, ಅನಿವಾರ್ಯವಲ್ಲದ ಚಿನ್ನದ ಖರೀದಿ ಸೇರಿದಂತೆ ಆಮದು ಮಾಡಿಕೊಳ್ಳುವ ಸರಕುಗಳ ಮೇಲಿನ ಅವಲಂಬನೆಯನ್ನು ಒಂದು ವರ್ಷದವರೆಗೆ ಕಡಿಮೆ ಮಾಡುವಂತೆ ಪ್ರಧಾನಮಂತ್ರಿಯವರು ನೀಡಿದ ಕರೆಯ ಹಿನ್ನೆಲೆಯಲ್ಲಿ ಈ ಅಭಿಯಾನವು ಮೂಡಿಬಂದಿದೆ.

'ನೀವು ಇಷ್ಟಪಡುವುದನ್ನು ಧರಿಸಿ, ಭಾರತದ ಹೆಮ್ಮೆಯಾಗಿರಿ' ಸಂದೇಶದೊಂದಿಗೆ ರೂಪಿಸಲಾದ ಎಕ್ಸ್‌ಚೇಂಜ್ ಫಾರ್ ದಿ ನೇಷನ್ ಅಭಿಯಾನವನ್ನು ಜೋಸ್ ಅಲುಕ್ಕಾಸ್‌ನಾದ್ಯಂತ 60ಕ್ಕೂ ಹೆಚ್ಚು ಶೋರೂಂಗಳಲ್ಲಿ ಜಾರಿಗೆ ತರಲಾಗಿದೆ.

ಈ ಅಭಿಯಾನವು ಗ್ರಾಹಕರಿಗೆ ವಿಶೇಷ ಕೊಡುಗೆಗಳನ್ನು ಹೊಂದಿದೆ. ಪ್ರತಿಯೊಂದು ಸವರನ್ (8 ಗ್ರಾಂ) ಚಿನ್ನದ ವಿನಿಮಯದ ಮೇಲೆ ಗ್ರಾಹಕರು 2000 ರೂಪಾಯಿ ಹೆಚ್ಚಿನ ಲಾಭ ಪಡೆಯಬಹುದು ಮತ್ತು ಆಯ್ದ ಚಿನ್ನದ ಆಭರಣಗಳ ತಯಾರಿಕೆ ವೆಚ್ಚದ ಮೇಲೆ ನೇರ ಶೇ.50 ರಿಯಾಯಿತಿ ಪಡೆಯಬಹುದು.

ಅಭಿಯಾನದ ಕುರಿತು ಮಾತನಾಡಿದ ಜೋಸ್ ಅಲುಕ್ಕಾಸ್‌ನ ವ್ಯವಸ್ಥಾಪಕರಾದ ಪಾಲ್ ಅಲುಕ್ಕಾಸ್, ಇದು ದೇಶಭಕ್ತಿಯ ಪ್ರದರ್ಶನ ಮತ್ತು ಇಂದಿನ ಪ್ರಾಯೋಗಿಕ ಅಗತ್ಯ ಎರಡೂ ಆಗಿದೆ. ಭಾರತವು ವಿಶ್ವದ ಅತಿ ದೊಡ್ಡ ಚಿನ್ನದ ನಿಕ್ಷೇಪಗಳಲ್ಲಿ ಒಂದನ್ನು ಹೊಂದಿದೆ. ಹೊಸದಾಗಿ ಆಮದು ಮಾಡಿಕೊಳ್ಳುವ ಚಿನ್ನವನ್ನು ಮಾತ್ರ ಅವಲಂಬಿಸುವ ಬದಲು, ಹಳೆಯ ಚಿನ್ನವನ್ನು ಮರುಚಕ್ರೀಕರಣ ಮಾಡುವ ಮೂಲಕ, ಬಳಕೆಯಾಗದ ಆಭರಣಗಳನ್ನು ವಿನಿಮಯ ಮಾಡಿಕೊಳ್ಳುವ ಮೂಲಕ ಮತ್ತು ಬಳಸದ ಚಿನ್ನವನ್ನು ಮತ್ತೆ ಚಲಾವಣೆಗೆ ತರುವ ಮೂಲಕ ದೇಶದಲ್ಲಿ ಈಗಾಗಲೇ ಲಭ್ಯವಿರುವ ವಿಶಾಲವಾದ ಚಿನ್ನದ ಸಂಪನ್ಮೂಲಗಳನ್ನು ಉತ್ತಮವಾಗಿ ಬಳಸಿಕೊಳ್ಳಲು ನಾವು ಗ್ರಾಹಕರನ್ನು ಪ್ರೋತ್ಸಾಹಿಸುತ್ತೇವೆ. ಪ್ರಮುಖವಾಗಿ, ಇದು ಭಾರತದ ಆಭರಣ ಉದ್ಯಮವನ್ನು ಸಹ ಬೆಂಬಲಿಸುತ್ತದೆ. ಮೌಲ್ಯ ಸರಪಳಿಯಲ್ಲಿ ಜೀವನೋಪಾಯವನ್ನು ಕಾಯ್ದುಕೊಳ್ಳುತ್ತದೆ ಮತ್ತು ಚಿನ್ನದ ಸಾಂಸ್ಕೃತಿಕ ಮತ್ತು ಆರ್ಥಿಕ ಮೌಲ್ಯವು ರಾಷ್ಟ್ರದೊಳಗೆ ಮೌಲ್ಯವನ್ನು ಸೃಷ್ಟಿಸುವುದನ್ನು ಮುಂದುವರಿಸುವುದನ್ನು ಖಚಿತಪಡಿಸುತ್ತದೆ ಎಂದು ಹೇಳಿದರು.

ಸರ್ಕಾರದ ನಿಯಮಗಳಿಂದಲೇ ಕನ್ನಡ ಭಾಷೆಗೆ ನಾನಾ ತೊಂದರೆ

● ಕನ್ನಡ ಕ್ರಿಯಾ ಸಮಿತಿ ಬೇಸರ ● ಈ ಎಲ್ಲಾ ತೊಡಕು ನಿವಾರಣೆಗೆ ಆಗ್ರಹ ● 60:40 ಅನುಪಾತ ಜಾರಿಗೆ ಒತ್ತಾಯ



ಕನ್ನಡ ಭಾಷಾ ಅನುಷ್ಠಾನದ ಕುರಿತು ಕನ್ನಡ ಕ್ರಿಯಾ ಸಮಿತಿ ಅಧ್ಯಕ್ಷ ಮ.ಗು.ಸದಾನಂದಯ್ಯ ನೇತೃತ್ವದಲ್ಲಿ ಬುಧವಾರ ಸಭೆ ನಡೆಯಿತು.

ಮೈಸೂರು, ಮೇ 27(ಎಸ್‌ಪಿಎನ್)– ಇತ್ತೀಚಿನ ದಿನಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ನಿಯಮಗಳಿಂದಲೇ ಕನ್ನಡ ಭಾಷೆಗೆ ತೊಂದರೆಯಾಗುತ್ತಿದ್ದು, ಇದನ್ನು ಸರಿಪಡಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಮುಂದಾಗಬೇಕು ಎಂದು ಕನ್ನಡ ಕ್ರಿಯಾ ಸಮಿತಿ ಆಗ್ರಹಿಸಿದೆ.

ಮೈಸೂರು ರಾಮಕೃಷ್ಣನಗರದಲ್ಲಿರುವ ನೃಪತುಂಗ ವಿದ್ಯಾಸಂಸ್ಥೆ ಆವರಣದಲ್ಲಿ ಕನ್ನಡ ಕ್ರಿಯಾ ಸಮಿತಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಹಾಗೂ ಕನ್ನಡ ಅಭಿವೃದ್ಧಿ ಸಮಿತಿ ಹಾಗೂ ಇತರೆ ಕನ್ನಡ ಪರ ಸಂಘಟನೆಗಳ ಸಹಯೋಗದೊಂದಿಗೆ ಕನ್ನಡ ಕ್ರಿಯಾ ಸಮಿತಿ ಅಧ್ಯಕ್ಷ ಮ.ಗು.ಸದಾನಂದಯ್ಯ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಆಗ್ರಹಿಸಿದೆ.

ಶೇ.60:40 ಅನುಪಾತ ಜಾರಿಯಾಗಬೇಕು: ಮೈಸೂರು ಮಹಾನಗರ ಪಾಲಿಕೆ ಆಡಳಿತದಲ್ಲಿ ಕನ್ನಡ ಭಾಷಾ ಅನುಷ್ಠಾನ ಖಚಿತಪಡಿಸಿಕೊಳ್ಳಲು ಶೇ.60 ಮತ್ತು 40 ಅನುಪಾತ ಜಾರಿಯಾಗಬೇಕು ಹಾಗೂ ಕನ್ನಡ ಭಾಷಾ ಬಳಕೆಯನ್ನು ವ್ಯಾಪಾರ ಸ್ಥಳಗಳಲ್ಲಿ, ಬ್ಯಾಂಕ್ ಆಡಳಿತ, ಪ್ರವಾಸಿ ಕೇಂದ್ರದಲ್ಲಿ ಹಾಗೂ ಕೇಂದ್ರ ಸರ್ಕಾರದ ಕಚೇರಿಗಳಲ್ಲಿ ಉತ್ತೇಜನಗೊಳಿಸಲು ವಿಶೇಷ ಅಭಿಯಾನ ಹಮ್ಮಿಕೊಳ್ಳುವಂತೆ ಆಗ್ರಹಿಸಲಾಯಿತು.

ಶಾಲಾ ಶಿಕ್ಷಣ ಇಲಾಖೆ ಗುಣಮಟ್ಟದ ಶಿಕ್ಷಣದ ಹೆಸರಿನಲ್ಲಿ ಜಾರಿಗೆ ತಂದಿರುವ ಕೆಪಿಎಸ್ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮಕ್ಕೆ ಪ್ರಾಧಾನ್ಯತೆ ನೀಡಿದೆ. ಈ ಶಾಲೆಗಳಲ್ಲಿ ಕನ್ನಡ ಮತ್ತು ಆಂಗ್ಲ ಮಾಧ್ಯಮ ಎರಡರಲ್ಲೂ ಶಿಕ್ಷಣ ದೊರೆಯುವುದರಿಂದ ವಿದ್ಯಾರ್ಥಿಗಳು ಕನ್ನಡ ಮಾಧ್ಯಮ ಶಿಕ್ಷಣ ಕೈಬಿಟ್ಟು, ಇಂಗ್ಲಿಷ್ ಶಿಕ್ಷಣ ಕಲಿಯಲು ಮುಂದಾಗುತ್ತಾರೆ. ಇದರಿಂದ ಗ್ರಾಮೀಣ ಭಾಗದಲ್ಲಿ ಕನ್ನಡ ಕಣ್ಮರೆಯಾಗುತ್ತದೆ ಎಂದು ಕನ್ನಡ ಕ್ರಿಯಾ ಸಮಿತಿ ಆತಂಕ ವ್ಯಕ್ತಪಡಿಸಿದೆ.

ಕೆಪಿಎಸ್ ಶಾಲೆಯಲ್ಲಿ ಇಂಗ್ಲಿಷ್ ಮಾಧ್ಯಮಕ್ಕೆ ವಿರೋಧ: ಇತ್ತೀಚೆಗೆ ಶಾಲಾ ಶಿಕ್ಷಣ ಇಲಾಖೆ ಜಾರಿಗೆ ತಂದಿರುವ ದ್ವಿಭಾಷಾ ನೀತಿಗೆ ಮೆಚ್ಚುಗೆ ವ್ಯಕ್ತಪಡಿಸಿರುವ ಕನ್ನಡ ಕ್ರಿಯಾ ಸಮಿತಿ, ಕೆಪಿಎಸ್ ಶಾಲೆಗಳಲ್ಲಿ ಇಂಗ್ಲಿಷ್ ಅನ್ನು ಒಂದು ವಿಷಯವಾಗಿ ಕಲಿಸಲು ಕನ್ನಡ ಪರ ಸಂಘಟನೆಗಳ ಯಾವುದೇ ವಿರೋಧ ಇಲ್ಲ. ಆದರೆ, ಕನ್ನಡ ಮಾಧ್ಯಮದ ಜೊತೆಗೆ ಇಂಗ್ಲಿಷ್ ಮಾಧ್ಯಮವನ್ನು ನಡೆಸುವುದನ್ನು ಕನ್ನಡ ಕ್ರಿಯಾ ಸಮಿತಿ ಬಲವಾಗಿ ವಿರೋಧಿಸಿದ್ದು, ಈ ನಿಟ್ಟಿನಲ್ಲಿ ಕೆಪಿಎಸ್ ಶಾಲೆಯಲ್ಲಿ ಇಂಗ್ಲಿಷ್ ಮಾಧ್ಯಮ ಕೈಬಿಡುವಂತೆ ಪತ್ರ ಚಳವಳಿ ನಡೆಸಲಾಗುವುದು.

ಈಗಿನ ಶಾಲೆಗಳಿಗೆ ಮೂಲಸೌಕರ್ಯ ಕಲ್ಪಿಸುವುದು. ಒಂದು ವಿಷಯವಾಗಿ ಇಂಗ್ಲಿಷ್ ಕಲಿಸುವುದಕ್ಕೆ ಕನ್ನಡ ಕ್ರಿಯಾ ಸಮಿತಿಯ ವಿರೋಧವಿಲ್ಲ. ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ವಿಷಯ ಶಿಕ್ಷಕರ ನೇಮಕದ ಜೊತೆಗೆ ಚಿತ್ರಕಲೆ, ನಾಟಕ, ಸಂಗೀತ ಹಾಗೂ ದೈಹಿಕ ಶಿಕ್ಷಕರು ಸೇರಿದಂತೆ ಇತರೆ ಲಲಿತ ಕಲಾ ಶಿಕ್ಷಕರನ್ನು ನೇಮಿಸುವುದನ್ನು ಕಡ್ಡಾಯಗೊಳಿಸುವಂತೆ ರಾಜ್ಯ ಸರ್ಕಾರಕ್ಕೆ ಮನವಿ ಮಾಡಿದೆ.

ಈಗಿನ ವಿದ್ವಾಂಸರನ್ನೇ ಮುಂದುವರೆಸಿ: ಕನ್ನಡ ಶಾಸ್ತ್ರೀಯ ಭಾಷಾ ಅತ್ಯುನ್ನತ ಅಧ್ಯಯನ ಕೇಂದ್ರದ ಹಿರಿಯ ವಿದ್ವಾಂಸರನ್ನು ಕೈಬಿಟ್ಟು ಹೊಸಬರನ್ನು ನೇಮಕ ಮಾಡಲು ಕೇಂದ್ರ ಸರ್ಕಾರ ಹೊರಟಿದೆ. ಇದನ್ನು ವಿರೋಧಿಸಿ ಭಾರತೀಯ ಭಾಷಾ ಸಂಸ್ಥಾನದ ನಿರ್ದೇಶಕರಿಗೆ ಜೂ.3ರಂದು ಮನವಿ ಸಲ್ಲಿಸಿ, ಈಗಿರುವ ವಿದ್ವಾಂಸರನ್ನೇ ಮುಂದುವರೆಸಬೇಕು ಎಂದು ಒತ್ತಾಯಿಸಲಾಗುವುದು. ಮೈಸೂರು ವಿವಿಯಿಂದ ಮಂಜೂರಾಗಿರುವ 4.5 ಎಕರೆ ಜಾಗವನ್ನು ಆದಷ್ಟು ಬೇಗ ಕನ್ನಡ ಶಾಸ್ತ್ರೀಯ ಭಾಷಾ ಅತ್ಯುನ್ನತ ಅಧ್ಯಯನ ಕೇಂದ್ರದ ಹೆಸರಿಗೆ ನೋಂದಾಯಿಸಬೇಕು ಎಂದು ಒತ್ತಾಯಿಸಿದೆ.

ಖಾಸಗಿ ಕ್ಷೇತ್ರದಲ್ಲೂ ಮೀಸಲಾತಿ ಜಾರಿಗೆ ತನ್ನಿ: ಖಾಸಗಿ ಕ್ಷೇತ್ರದಲ್ಲಿ ಹೊರ ರಾಜ್ಯದ ಯುವಕರಿಗೆ ಹೆಚ್ಚಿನ ಉದ್ಯೋಗ ನೀಡುತ್ತಿದ್ದು, ಇದನ್ನು ತಪ್ಪಿಸಲು ಶೇ.80ರಷ್ಟು ಮೀಸಲಾತಿಯನ್ನು ಖಾಸಗಿ ಕ್ಷೇತ್ರದಲ್ಲೂ ಜಾರಿಗೆ ತರಬೇಕು. ಐಎಎಸ್, ಐಪಿಎಸ್, ಐಆರ್‌ಎಸ್ ಸೇರಿದಂತೆ ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಕನ್ನಡಕ್ಕೂ ಆದ್ಯತೆ ನೀಡಬೇಕು.

ರೈಲ್ವೆ ಹುದ್ದೆಗಳಿಗೆ ನಡೆಸುವ ಪರೀಕ್ಷೆಯನ್ನು ಕನ್ನಡದಲ್ಲಿ ಬರೆಯುವ ನೀತಿ ಅಳವಡಿಸಬೇಕು. ಆಡಳಿತ ತರಬೇತಿ ಸಂಸ್ಥೆಯ ನೇಮಕಾತಿಯಲ್ಲಿ ಕನ್ನಡಿಗರಿಗೆ ಮೊದಲ ಆದ್ಯತೆ ನೀಡಬೇಕು. ಕೆಪಿಟಿಸಿಎಲ್ ಸೇರಿದಂತೆ ಸಾಂವಿಧಾನಿಕ ಸಂಸ್ಥೆಗಳಲ್ಲಿ ಕನ್ನಡಿಗರಿಗೆ ಉದ್ಯೋಗ ದೊರಕಬೇಕು ಎಂದು ಆಗ್ರಹಿಸಿದೆ.

ಈ ವೇಳೆ ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ನಿವೃತ್ತ ಪ್ರಾಂಶುಪಾಲ ಪ್ರೊ.ಕಾಳಚನ್ನೇಗೌಡ, ನಿವೃತ್ತ ಪ್ರಾಧ್ಯಾಪಕ ಪ್ರೊ.ಪಂಡಿತಾರಾಧ್ಯ, ಹಿರಿಯ ಸಾಹಿತಿ ಹೊರಯಾಲ ದೊರೆಸ್ವಾಮಿ, ಹಿರಿಯ ಸಾಹಿತಿ ಡಾ.ವಿನೋಧಮ್ಮ, ಕನ್ನಡ ಪರ ಹೋರಾಟಗಾರರಾದ ಡಾ.ಪರಮೇಶ್, ಜಿ.ಪ್ರಕಾಶ್, ಸವಿತಾ ಪ. ಮಲ್ಲೇಶ್, ಅರವಿಂದ್ ಶರ್ಮಾ, ಶ್ರೀನಿವಾಸ ಮಿತ್ರ, ಲೋಕೇಶಪ್ಪ, ಮೈ.ನಾ.ಲೋಕೇಶ್, ನರೇಂದ್ರ ಪ್ರಸಾದ್, ಗೋವಿಂದರಾಜ್, ಮನೋಹರ್, ನಾ.ನಾಗಚಂದ್ರ, ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ನಂದೀಶ್, ಜಗದೀಶ್ ಸೇರಿದಂತೆ ಇತರರಿದ್ದರು.

9ನೇ ಪುಟದಿಂದ ಮುಂದುವರೆದ ವರ್ಗೀಕೃತ ಜಾಹೀರಾತು

ಆಧುನಿಕ ಭಾರತ ನಿರ್ಮಾಣದಲ್ಲಿ ನೆಹರು ಪಾತ್ರ ಮಹತ್ವದ್ದು

ಸಿಎಂ ಸಿದ್ದರಾಮಯ್ಯ ಸ್ಮರಣೆ



ನೆಹರೂ ಭಾವಚಿತ್ರಕ್ಕೆ ಸಿಎಂ ಸಿದ್ದರಾಮಯ್ಯ ಮಾಲಾರ್ಪಣೆ

ಬೆಂಗಳೂರು, ಮೇ 27(ಕೆಎಂಶಿ)– ಆಧುನಿಕ ಭಾರತದ ನಿರ್ಮಾಣದಲ್ಲಿ ಮೊದಲ ಪ್ರಧಾನಮಂತ್ರಿ ಜವಾಹರಲಾಲ್ ನೆಹರೂ ಪಾತ್ರ ಮಹತ್ವದ್ದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಸ್ಮರಿಸಿದ್ದಾರೆ.

ಜವಾಹರಲಾಲ್ ನೆಹರು ಪುಣ್ಯ ಸ್ಮರಣೆ ಅಂಗವಾಗಿ ವಿಧಾನಸೌಧದ ಪೂರ್ವ ದಿಕ್ಕಿನಲ್ಲಿರುವ ಪ್ರತಿಮೆಗೆ ಮಾಲಾರ್ಪಣೆ ಹಾಗೂ ಭಾವಚಿತ್ರಕ್ಕೆ ಪುಷ್ಪ ಸಮರ್ಪಿಸಿ ಮಾತನಾಡಿದ ಅವರು, ನೆಹರು ದೇಶದಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಿದರು, ದೇಶದ ಸ್ವಾತಂತ್ರ್ಯಾನಂತರ ಪ್ರಧಾನ ಮಂತ್ರಿಯಾಗಿ 17 ವರ್ಷ ಜನರ ಸೇವೆ ಮಾಡಿದರು ಎಂದರು.

ಸಮಾಜವಾದಿ ಮತ್ತು ಮಿಶ್ರ ಆರ್ಥಿಕತೆಗೆ ಹೆಚ್ಚು ಒತ್ತು ನೀಡಿ, ಬೃಹತ್ ಅಣೆಕಟ್ಟುಗಳ ನಿರ್ಮಾಣ, ಶಿಕ್ಷಣ, ಸಹಕಾರ ಕ್ಷೇತ್ರಗಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವಲ್ಲಿ ನೆಹರು ಕಾರಣಕರ್ತರಾದರು. ಪಂಚವಾರ್ಷಿಕ ಯೋಜನೆ ರೂಪಿಸಿ ದೇಶದ ಪ್ರಗತಿಯನ್ನು ವೈಜ್ಞಾನಿಕವಾಗಿ ಸಾಧಿಸುವ ಪ್ರಯತ್ನ ಮಾಡಿದ್ದರು. ನೆಹರು ಅವರ ಹಾದಿಯಲ್ಲಿ ನಡೆಯುವ ಪ್ರಾಮಾಣಿಕ ಪ್ರಯತ್ನ ನಾವು ಮಾಡು ತ್ತಿದ್ದೇವೆ. ಅವರ ಆದರ್ಶಗಳು ಸದಾ ಮೇಲ್ಪಂಕ್ತಿಯಲ್ಲಿವೆ ಎಂದರು.

ರಾಜ್ಯದಲ್ಲಿ ಎಬೋಲಾ ಪ್ರಕರಣ ದಾಖಲಾಗಿಲ್ಲ

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸ್ಪಷ್ಟನೆ

ಬೆಂಗಳೂರು, ಮೇ 27– ಎಬೋಲಾ ವೈರಸ್‌ನ ಲಕ್ಷಣಗಳು ಕಂಡುಬಂದಿದ್ದ ಶಂಕಿತ ಉಗಾಂಡಾದ 28 ವರ್ಷದ ಮಹಿಳೆಯ ತಪಾಸಣಾ ವರದಿಯಲ್ಲಿ ಸೋಂಕು ಇಲ್ಲ ಎಂಬುದು ದೃಢಪಟ್ಟಿದೆ. ಹೀಗಾಗಿ, ಜನರು ಆತಂಕಕ್ಕೆ ಒಳಗಾಗುವುದು ಬೇಡ ಎಂದು ಸಚಿವ ದಿನೇಶ್ ಗುಂಡೂರಾವ್ ಬುಧವಾರ ತಿಳಿಸಿದ್ದಾರೆ.

ಅಧಿಕಾರಿಗಳ ಪ್ರಕಾರ, ಎಬೋಲಾ ವೈರಸ್ ಪೀಡಿತ ಪ್ರದೇಶದಿಂದ ಬಂದ ಮಹಿಳೆಯೊಬ್ಬರಿಗೆ ಮಂಗಳವಾರ ದೇಹದ ನೋವಿನಂತಹ ಸೌಮ್ಯ ಲಕ್ಷಣಗಳು ಕಾಣಿಸಿಕೊಂಡಿತ್ತು. ನಂತರ ಅವರನ್ನು ಹೋಟೆಲ್‌ನಿಂದ ಸರ್ಕಾರಿ ಸಾಂಕ್ರಾಮಿಕ ರೋಗಗಳ ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು. ಅವರ ರಕ್ತದ ಮಾದರಿಗಳನ್ನು ಸಂಗ್ರಹಿಸಿ ಪರೀಕ್ಷೆಗಾಗಿ ಪುಣೆಯಲ್ಲಿರುವ ರಾಷ್ಟ್ರೀಯ ವೈರಾಲಜಿ ಸಂಸ್ಥೆಗೆ ಕಳುಹಿಸಲಾಗಿತ್ತು.

ರಾಜ್ಯದಲ್ಲಿ ವರದಿಯಾಗಿದ್ದ ಶಂಕಿತ ಎಬೋಲಾ ಪ್ರಕರಣದ ಪ್ರಯೋಗಾಲಯದ ತಪಾಸಣಾ ವರದಿ ಬಂದಿದ್ದು, ಅದು ನೆಗೆಟಿವ್ ಆಗಿರುವುದು ಕಂಡುಬಂದಿದೆ. ಅವರು ಎಬೋಲಾ ವೈರಸ್ ಸೋಂಕಿಗೆ ಒಳಗಾಗಿಲ್ಲ ಎಂದು ಆರೋಗ್ಯ ಇಲಾಖೆಯ ಅಧಿಕಾರಿಗಳು ದೃಢಪಡಿಸಿದ್ದಾರೆ ಎಂದು ಸಚಿವರು ಎಕ್ಸ್‌ನಲ್ಲಿ ತಿಳಿಸಿದ್ದಾರೆ.



ಶಂಕೆ ವ್ಯಕ್ತವಾದ ತಕ್ಷಣವೇ ಇಲಾಖೆಯು ಸಾರ್ವಜನಿಕ ಆರೋಗ್ಯ ಮಾರ್ಗಸೂಚಿ ಗಳ ಅನ್ವಯ ಅತ್ಯಂತ ಕಟ್ಟುನಿಟ್ಟಾದ ಮುನ್ನೆಚ್ಚರಿಕೆ ಕ್ರಮಗಳು ಮತ್ತು ವೈದ್ಯಕೀಯ ನಿಯಮಾವಳಿಗಳನ್ನು ಪಾಲಿಸಿದೆ. ಸಾರ್ವಜನಿಕರ ಆರೋಗ್ಯ ಮತ್ತು ಸುರಕ್ಷತೆಯೇ ಸರ್ಕಾರದ ಮೊದಲ ಆದ್ಯತೆಯಾಗಿದೆ. ನಮ್ಮ ಆರೋಗ್ಯ ಇಲಾಖೆಯು ಪ್ರತಿಯೊಂದು ಪರಿಸ್ಥಿತಿಯನ್ನೂ ಅತ್ಯಂತ ಸೂಕ್ಷ್ಮವಾಗಿ ಗಮನಿಸುತ್ತಿದೆ. ಸಾರ್ವಜನಿಕರ ಹಿತದೃಷ್ಟಿಯಿಂದ ಯಾವುದೇ ರೀತಿಯ ಸವಾಲನ್ನು ಎದುರಿಸಲು ಮತ್ತು ಅಗತ್ಯವಿರುವ ಎಲ್ಲ ರೀತಿಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲು ಇಲಾಖೆ ಸಂಪೂರ್ಣವಾಗಿ ಸಜ್ಜಾಗಿದೆ ಎಂದು ಹೇಳಿದರು.

ಯಾರೂ ಅನಗತ್ಯವಾಗಿ ಆತಂಕಕ್ಕೊಳಗಾಗಬಾರದು ಎಂದು ವಿನಂತಿಸುತ್ತೇನೆ. ವದಂತಿಗಳಿಗೆ ಕಿವಿಗೊಡದೆ, ನಿಗದಿಪಡಿಸಿದ ಆರೋಗ್ಯ ಮಾರ್ಗಸೂಚಿಗಳನ್ನು ಪಾಲಿಸಿ. ಸರ್ಕಾರ ಮತ್ತು ಆರೋಗ್ಯ ಇಲಾಖೆ ಅಧಿಕೃತವಾಗಿ ಹೊರಡಿಸುವ ಮಾಹಿತಿ ಹಾಗೂ ಪ್ರಕಟಣೆಗಳನ್ನು ಮಾತ್ರ ಆಧಾರವಾಗಿಟ್ಟುಕೊಳ್ಳಿ. ನಿಮ್ಮ ಆರೋಗ್ಯದ ರಕ್ಷಣೆಗೆ ಸರ್ಕಾರ ಸದಾ ಬದ್ಧವಾಗಿದೆ ಎಂದು ಹೇಳಿದ್ದಾರೆ.

ವಿಶ್ವ ಆರೋಗ್ಯ ಸಂಸ್ಥೆಯು ಮೇ 17ರಂದು ಕಾಂಗೋ ಪ್ರಜಾಸತ್ತಾತ್ಮಕ ಗಣರಾಜ್ಯ ಮತ್ತು ಉಗಾಂಡಾದಲ್ಲಿನ ಎಬೋಲಾ ಪ್ರಕರಣಗಳ ಏಕಾಏಕಿ ಉಲ್ಬಣದಿಂದಾಗಿ ಸಾರ್ವಜನಿಕ ಆರೋಗ್ಯ ತುರ್ತುಸ್ಥಿತಿ ಎಂದು ಘೋಷಿಸಿತು.

ಹಲವಾರು ಆಫ್ರಿಕನ್ ದೇಶಗಳಲ್ಲಿ ಎಬೋಲಾ ಏಕಾಏಕಿ ಕಂಡುಬಂದಿರುವ ಹಿನ್ನೆಲೆಯಲ್ಲಿ, ಇತ್ತೀಚೆಗೆ ಪೀಡಿತ ರಾಷ್ಟ್ರಗಳಿಗೆ ಪ್ರಯಾಣಿಸಿದ ವ್ಯಕ್ತಿಗಳು ಹಿಂದಿರುಗಿದ ನಂತರ 21 ದಿನಗಳ ಕಾಲ ಆರೋಗ್ಯ ಮೇಲ್ವಿಚಾರಣೆ ಮತ್ತು ಸ್ವಯಂ ವೀಕ್ಷಣೆಗೆ ಒಳಗಾಗುವಂತೆ ರಾಜ್ಯದ ಆರೋಗ್ಯ ಇಲಾಖೆ ಸೂಚಿಸಿತ್ತು.

ಲಕ್ಷಣಗಳು ಕಾಣಿಸಿಕೊಂಡ ವ್ಯಕ್ತಿಗಳು ತಕ್ಷಣವೇ ಹತ್ತಿರದ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ವರದಿ ಮಾಡಬೇಕು. ಕ್ಷಿಪ್ರ ಪ್ರತಿಕ್ರಿಯೆ ತಂಡಗಳು ಕಣ್ಗಾವಲು ಚಟುವಟಿಕೆಗಳನ್ನು ನಡೆಸುತ್ತವೆ ಎಂದು ಇಲಾಖೆ ತಿಳಿಸಿದೆ.

ರಸ್ತೆ ಬದಿ ನಿಂತಿದ್ದ ಲಾರಿಗೆ ಬೊಲೆರೋ ಡಿಕ್ಕಿ: ಒಂದೇ ಕುಟುಂಬದ ಐವರು ದುರ್ಮರಣ

ಚಿತ್ರದುರ್ಗ, ಮೇ 27– ರಸ್ತೆಬದಿ ನಿಂತಿದ್ದ ಲಾರಿಗೆ ಬೊಲೆರೋ ಡಿಕ್ಕಿಯಾಗಿ ಸ್ಥಳದಲ್ಲೇ ಐವರು ದುರ್ಮರಣಕ್ಕೀಡಾದ ಘಟನೆ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕಿನ ಬೈರಾಪುರ ಗ್ರಾಮದ ಬಳಿ ನಡೆದಿದೆ.

ರಾಷ್ಟ್ರೀಯ ಹೆದ್ದಾರಿಯಲ್ಲಿ ನಿಂತಿದ್ದ ಲಾರಿಗೆ ಬೊಲೆರೋ ವಾಹನ ಅತಿ ವೇಗವಾಗಿ ಬಂದು ಡಿಕ್ಕಿ ಹೊಡೆದ ಪರಿಣಾಮ, ವಾಹನದಲ್ಲಿದ್ದ ಒಂದೇ ಕುಟುಂಬದ ಐವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮೃತರೆಲ್ಲರೂ ಬಳ್ಳಾರಿ ಮೂಲದವರು. ವೆಂಕಟೇಶ್ (28), ಶಿವಮ್ಮ (25), ಮೀನಾಕ್ಷಿ (16), ಪೂಜಾ (4), ಪರುಶುರಾಮ (1.5) ಮೃತರು. ಗಾಯಾಳುಗಳನ್ನು ಮೊಳಕಾಲ್ಮೂರು ಆಸ್ಪತ್ರೆಗೆ ದಾಖಲಿಸಲಾಗಿದೆ. ಘಟನಾ ಸ್ಥಳಕ್ಕೆ ಮೊಳಕಾಲ್ಮೂರು ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಮೊಳಕಾಲ್ಮೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ನಡೆದಿದೆ.

ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು
ಜೆ.ಎಲ್.ಬಿ.ರಸ್ತೆ, ಮೈಸೂರು

ಸಂಖ್ಯೆ: ಮೈಅಪ್ರಾ/ವಿ.ತ–5ಬಿ/2026–27

ಪ್ರಕಟಣೆ

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ, ಮೈಸೂರು ವತಿಯಿಂದ ಶ್ರೀ.ಮುನಿಯಪ್ಪ ರವರಿಗೆ ನಾರ್ಥ್ ಈಸ್ಟ್ ಆಫ್ ಮಹದೇವಪುರ ಬಡಾವಣೆಯ ನಿ.ಸಂ:442 ಅಳತೆ: 30x45 ಅಡಿ ಅಳತೆಯ ನಿವೇಶನವು ದಿ:19.09.1978ರಂದು ಮಂಜೂರಾಗಿರುತ್ತದೆ. ದಿ:26.02.1979 ಸ್ವಾಧೀನ ಪತ್ರ ನೀಡಲಾಗಿರುತ್ತದೆ. ಮಂಜೂರಾತಿದಾರರಾದ ಶ್ರೀ ಮುನಿಯಪ್ಪ ರವರು ದಿ : 08.07.1981 ರಂದು ಮರಣ ಹೊಂದಿರುವುದಾಗಿ ಮರಣ ಪ್ರಮಾಣ ಪತ್ರಸಲ್ಲಿಸಿರುತ್ತಾರೆ. ಪೌತಿದಾರರ ಕುಟುಂಬ ಜೀವಂತ ಸದಸ್ಯರ ಪತ್ರದಲ್ಲಿ ಪೌತಿದಾರರ ಪತ್ನಿ ಶ್ರೀಮತಿ ರತ್ನಮ್ಮ ಹಾಗೂ ಮಕ್ಕಳಾದ ಶ್ರೀಮತಿ ಶ್ಯಾಮಲ, ಶ್ರೀಮತಿ.ಶಾಂತ, ಶ್ರೀ.ಮಂಜುನಾಥ.ಎಂ. ಶ್ರೀಮತಿ.ಹೇಮ ಎಂದು ನಮೂದಿರುತ್ತದೆ. ಶ್ರೀಮತಿ ರತ್ನಮ್ಮ, ಶ್ರೀಮತಿ ಶ್ಯಾಮಲ, ಶ್ರೀಮತಿ ಶಾಂತ, ಶ್ರೀಮತಿ ಹೇಮರವರುಗಳು 1ನೇ ಪುಸ್ತಕದ ದಸ್ತಾವೇಜು ನಂಬರ್ ಎಂವೈಇ–1–02363–2015–16 ಆಗಿ ದಿ:15.06.2015 ರಂದು ಶ್ರೀ ಮಂಜುನಾಥ.ಎಂ ರವರಿಗೆ ನೊಂದಾಯಿತ ಹಕ್ಕು ಖುಲಾಸೆ ನೀಡಿರುತ್ತಾರೆ. ಶ್ರೀಮತಿ ರತ್ನಮ್ಮ.ವಿ. ರವರು ದಿ:21.07.2016ರಂದು ಮರಣ ಹೊಂದಿರುವುದಾಗಿ ಮರಣ ಪ್ರಮಾಣ ಪತ್ರಸಲ್ಲಿಸಿರುತ್ತಾರೆ. ಅದರಂತೆ ಶ್ರೀ.ಮಂಜುನಾಥ.ಎಂ. ರವರು 'ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ ಸದರಿ ನಿವೇಶನಕ್ಕೆ ಪೌತಿ ವರ್ಗಾವಣೆ ಹಾಗೂ ಕ್ರಯಪತ್ರ ನೀಡಬೇಕೆಂದು ಕೋರಿರುತ್ತಾರೆ. ಮೇಲ್ಕಂಡ ನಿವೇಶನಕ್ಕೆ ಕ್ರಯಪತ್ರ ನೀಡುವ ಕುರಿತು ಯಾರಿಂದಾದರೂ ತಕರಾರು ಏನಾದರು ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 30 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ಆಕ್ಷೇಪಣೆ ಸಲ್ಲಿಸಬಹುದು. ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಿಯಮಾನುಸಾರ ಕ್ರಮ ವಹಿಸಲಾಗುವುದು.

ಸಹಿ/– ವಿಶೇಷ ತಹಸೀಲ್ದಾರ್
ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

ದಿನಾಂಕ: 26–05–2026

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀ ಡಿ. ಮಹದೇವಯ್ಯ ರವರು

ನಿಧನ: 18–05–2026

ಇವರು ದಿನಾಂಕ: 18–05–2026 ಸೋಮವಾರದಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ: 28–05–2026 ಗುರುವಾರ ಮಧ್ಯಾಹ್ನ: 12.30 ರಿಂದ 1.30 ಗಂಟೆಗೆ ಹಾಲುತುಪ್ಪ ಕಾರ್ಯವನ್ನು ಸ್ವಗೃಹ ಆಲಗೂಡು ಗ್ರಾಮ, ತಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ

ದುಃಖತಪ್ತರು: ಶ್ರೀಮತಿ ಸಾವಿತ್ರಮ್ಮ ಮತ್ತು ಕುಟುಂಬವರ್ಗದವರು

ಮೈಸೂರು ಮಿತ್ರ 47

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು–570006
ಆಡಳಿತ ವಿಭಾಗ

ಸಂಖ್ಯೆ:ಕರಾಮುವಿ/ಆವಿ/ಜಿಎಲ್–02/729/2026–27/03 ದಿ: 26.05.2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2025–26ನೇ ಸಾಲಿನ ಆದಾಯ ತೆರಿಗೆಗೆ ಸಂಬಂಧಿಸಿದ Tax Audit And Financial Statement and Balance Sheet ತಯಾರಿಸಲು ಚಾರ್ಟೆಡ್ ಅಕೌಂಟೆಂಟ್ ಸೇವೆ ಪಡೆಯಲು ಆಸಕ್ತ ಸಂಸ್ಥೆಯವರಿಂದ Box Tender ಮುಖಾಂತರ ದರಪಟ್ಟಿಯನ್ನು ಆಹ್ವಾನಿಸಲಾಗಿದ್ದು ಹೆಚ್ಚಿನ ವಿವರಗಳನ್ನು ವಿ.ವಿ ನಿಲಯದ ವೆಬ್ ಸೈಟ್ www.ksoumysuru.ac.in ಅನ್ನು ನೋಡುವುದು.

DIPR/DDMYS/228/KSMCA/170/2026-27 ಸಹಿ/– ಕುಲಸಚಿವ

GSSS GEETHA SHISHU SHIKSHANA SANGHA(R)
INSTITUTE OF ENGINEERING AND TECHNOLOGY FOR WOMEN
KRS Road, Metagalli, Mysuru – 570016

APPOINTMENT NOTIFICATION TEACHING & NON TEACHING STAFFS

Position	Department	Qual.&Exp.
Professor	CSE	As per AICTE Norms
Associate Professor	CSE (AI & ML)	
Assistant Professor	CSE / ISE / CSE (AI & ML) / AI & DS/ ECE/ EEE	
Associate Professor & Assistant Professor	MBA (Specialization in Finance / Analytics)	

Position	Dept.	Qualification & Experience
Lab Instructor Asst. Lab Instructor	ECE, EEE, AI & DS	Diploma in CSE / ISE / ECE/ EEE or B.Sc - CS / IT

- **Salary:** Based on credentials & experience.
- Accommodation will be provided for the post of Professor and Associate Professor.
- Application with latest colour photo and copies of qualification and experience must be sent on or before **10-06-2026** to: The Secretary, GSSS(R), KRS Road, Metagalli, Mysuru - 570 016.

Dr. M. Jagannatha Shenoi, President — www.geethashishu.in — Smt. Anupama B. Pandit, Secretary

PUBLIC NOTICE

My client is negotiating to purchase the schedule mentioned property more fully described in the below schedule from its owners **1. SHRI. B.M. KEERTHI KUMAR,** Son of Late Veerappa Mallanna aged about 66 years, residing at No.53. SREENIKETANA, 7th Cross, Jaisingh Layout. Near Manipal Nursing College. BEML 5th Stage, Rajarajeshwarinagara, Bengaluru South, PIN-560098. Karnataka, India **PRESENTLY RESIDING AT NO.1261, RANCH VIEW CT, BUFFALO GROVE, ILLINOIS-60089 [AADHAR CARD NO. 4405 5929 0135] AND [PAN CARD NO.DMUPK3255C] PASSPORT NO. A70102963 DATED 14.01.2026, OCIC NO.A4412017 DATED 27.03.2023 CHICAGO, USA; & 2. SHRI. BANGALORE MALLANNA SHASHI KUMAR,** Son of Late Veerappa Mallanna aged about 62 years, residing at No.2219. 5th Main, 4th Cross, Opposite to Hampinagar Post Office, Hampinagar, Bangalore North. PIN-560104. Karnataka, India - **PRESENTLY RESIDING AT NO.7657 ADDISEN PATH, INVER GROVE HEIGHTS, MN 55077, USA [AADHAR CARD NO. 3907 9830 2867] AND [PAN CARD NO. BLJPS6647C] PASSPORT NO.A26205412 DATED 06.12.2023-USA OCIC NO.A3861723 DATED 19.04.2021 CHICAGO, USA.**

Both the Sellers are the absolute owners of the schedule mentioned property and the same is acquired through Will. The said Will is registered before the office of Sub-Registrar, Vijayanagar, Bengaluru Vide Document No.VJN-3-00394-2017-18 stored in CD NO.VJND196 in Book No.3 and the same is registered on 23.02.2018

If any person has got any claim of right, title interest over the schedule mentioned property or dispute over the same, they are hereby requested/called upon to lodge their whatsoever claim with documentary proof to the undersigned Advocate within **15 (FIFTEEN)** days, otherwise, my client will proceed to finalize the sale transaction and any claim made thereafter, will not affect the right of my client in any manner.

SCHEDULE OF THE PROPERTY

All the piece and parcel of the Property Site & House Bearing No. 155 CH-63. Situated at 5th Main Road, 3rd Cross Road, Saraswathipuram, Chamaraja Mohalla, Mysuru-570 009. FORM NO.2 [RULE 11] ISSUED BY MYSURU CITY CORPORATION, MYSURU PROPERTY DOCUMENT NO.26825403-PROPERTY BEARING NO.22-1-506-156, WARD NO.22 PROPERTY OLD NO.155 CH-63-NIRDHARANA NO.155-CH-63. **MEASUREMENT: East to West:** 20.116840 meters; **North to South**: 13.106426 meters IN ALL 263.6599 square meters. **BOUNDED ON: East by:** 30.00 feet Road; **West by:** Property Bearing No. 173; **North by:** Property Bearing No. 156; **South by:** Property Bearing No. 154.

Place: Mysore
Date: 26-05-2026

Sd/- K.V. PRASANNA, B.Com, LL.B. Advocate, No.34/11, NPD Complex, South Cross No.5 Vinobha Road, Srirampet, Devaraja Mohalla, Mysuru-570001. **Mob +91-94485-72781**